ಚಿಂತೆಗೊಂದು ಚಿಕಿತ್ಸೆ



ಲೇಖಕರು

ಬೆ.ನಾ.ವಿಜಯೀಂದ್ರಾಚಾರ್ಯ.

ವಿ. ಸರಯು.

ಋಜುಯೋಗಿರಾಜರ

ಚಿಂತೆಗೊಂದು ಚಿಕಿತ್ಸೆ

A REMEDY FOR WORRIES

ಲೇಖಕರು

ಬೆ. ನಾ. ವಿಜಯೀಂದ್ರಾಚಾರ್ಯ

ಮೈಸೂರು

English Translation

V. SARAYU

ಶ್ರೀಹರಿವಾಯು ಪ್ರಕಾಶನ

ಮೈಸೂರು

ಋಜುಯೋಗಿರಾಜರ ಚಿಂತೆಗೊಂದು ಚಿಕಿತ್ಸೆ
ವಿಕೃತಿ ಸಂವತ್ಸರ ಕಾರ್ತಿಕ ಬಹುಳ ಸಪ್ತಮಿಯಂದು ಶ್ರೀ ಶ್ರೀ ವಿದ್ಯಾಧೀಶತೀರ್ಥರ ಅಮೃತ ಹಸ್ತದಿಂದ ಬಿಡುಗಡೆ ಹೊಂದಿತು.

ಲೇಖಕರು : ಬೆ. ನಾ. ವಿಜಯೀಂದ್ರಾಚಾರ್ಯ

English Translation : V. SARAYU

ಪ್ರತಿ : 1000

ಪ್ರಕಾಶಕರು
ಶ್ರೀ ಹರಿವಾಯು ಪ್ರಕಾಶನ
ಮೈಸೂರು

ಮುಖಪುಟ ವಿನ್ಯಾಸ :

ಮುದ್ರಕರು : ಎ. ಜಿ. ಸುವ್ರತೀಂದ್ರ
ವಾಣೀ ಪ್ರೆಸ್, ಗೀತಾರಸ್ತೆ, ಚಾಮಪುರಂ, ಮೈಸೂರು-5
ದೂರವಾಣಿ : 0821-2330295

श्री श्री विश्वेशतीर्थ श्रीपादाः

जगद्गुरु श्रीमन्मध्वाचार्यमूलमहासंस्थानाम्

श्री अधोक्षजतीर्थपीठम् श्रीपेजावरमठः

उडुपि

ಅನುಗ್ರಹ ಸಂದೇಶ

ಜೀವನದಲ್ಲಿ ನಾನಾ ರೀತಿಯ ದೈಹಿಕ ಮಾನಸಿಕ ಚಿಂತೆಗಳು ನಮ್ಮನ್ನು ಕಾಡುತ್ತವೆ. ಚಿಂತನ ಒಂದೇ ಈ ಎಲ್ಲಾ ಚಿಂತೆಗಳಿಗೆ ಪರಿಹಾರ. ಶರೀರ, ಇಂದ್ರಿಯ, ಜೀವ-ಪರಮಾತ್ಮರುಗಳು ವಿಶ್ಲೇಷಣೆ ಮಾಡಿ ಚಿಂತೆಯ ಮೂಲವನ್ನು ಹುಡುಕಿ, ಕೆದಕಿ ನಾವು ಮಾಡುವ ಚಿಂತನದಿಂದ ಮೂಡುವ ಸತ್ಯದರ್ಶನವು, ಮೋಹದ ಜಾಲವನ್ನು ಕಿತ್ತೆಸೆಯಬಲ್ಲದು. ಆಗ ಚಿಂತೆಗಳೆಲ್ಲಾ ಚದುರಿ ನಮ್ಮ ಹೃದಯ ಆಗಸವು, ನಿರಭ್ರಶುಭ್ರವಾಗಿ ಪ್ರಸನ್ನತೆಯಿಂದ ಕಂಗೊಳಿಸಬಲ್ಲದು.

ಭೌತಿಕಚಿಂತೆಗಳು ಚಿತೆಯಾಗಿ ನಮ್ಮನ್ನು ವಿನಾಶಗೊಳಿಸಿದರೆ ಆಧ್ಯಾತ್ಮಿಕ ಚಿಂತೆಯು ಚಿತಿಯಾಗಿ (ಜ್ಞಾನವಾಗಿ) ಚೈತನ್ಯದ ಚಿಲುಮೆಯಾಗಿ ನಮ್ಮ ವಿಕಾಸಕ್ಕೆ ಸಾಧನವಾಗುವುದು. ಆಧ್ಯಾತ್ಮಿಕ ಚಿಂತನೆಗೆ ಭಗವತ್ ಚಿಂತನೆಯು ಸಂಜೀವಿನಿಯಾದರೆ, ಭೌತಿಕ ಚಿಂತೆಯ ನಿವಾರಣೆಗೂ ಭಗವತ್‌ಚಿಂತೆಯು ದಿವ್ಯೌಷಧವಾಗಿದೆ. ಭಗವತ್‌ಚಿಂತನೆಯಿಂದ ನಾವು ಸಕಲೇಷ್ಟಗಳನ್ನು ಪಡೆಯುವುದರ ಜೊತೆಗೆ ಜೀವನದಲ್ಲಿ ಆತ್ಮವಿಶ್ವಾಸವನ್ನು ಪಡೆಯಬಹುದು.

ನಮ್ಮ ಪ್ರಿಯಶಿಷ್ಯನಾದ ವಿಜಯೀಂದ್ರನು ತನ್ನ ವಿವಾಹ ಮಹೋತ್ಸವದ ಮಂಗಲ ಸಂದರ್ಭದಲ್ಲಿ ಶ್ರೀಮದ್ ವಾದಿರಾಜ ಗುರುವರ್ಯರ ಉಪದೇಶದ ಆಧಾರದಲ್ಲಿ ಚಿಂತೆಯ ಬಗ್ಗೆ ಚಿಂತನೆಯನ್ನು ನೀಡುವ ಈ ಕೃತಿಯನ್ನು ತನ್ನ ನವವಧುವಿನ ಸಹಕಾರದೊಂದಿಗೆ ರಚಿಸಿರುವನು. ಇವರು ನಿಶ್ಚಿಂತೆಯಿಂದ ತಮ್ಮ ವೈವಾಹಿಕ ಜೀವನವನ್ನು ಸುಖ-ಸಮೃದ್ಧಿಯಿಂದ ನಡೆಸಿ ವಿಜಯಶಾಲಿಗಳಾಗುವಂತೆ ಶ್ರೀಕೃಷ್ಣನು ಅನುಗ್ರಹಿಸಲಿ.

ಇತ್ಯನೇಕ ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು

श्री श्री विद्याधीशतीर्थश्रीपादाः

जगद्गुरु श्रीमन्मध्वाचार्यमूलमहासंस्थानम्
श्री हृषीकेशतीर्थपीठम् श्रीपलिमारुमठः
पर्याय श्रीपलिमारुहृषीकेशतीर्थ पीठम्
श्रीकृष्णमठः, उडुपि

ಅನುಗ್ರಹ ಸಂದೇಶ

ಚಿಂತಾಯಾಶ್ಚ ಚಿತಾಯಾಶ್ಚ ಬಿಂದುಮಾತ್ರಂ ವಿಶೇಷಕಂ |
ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವಿನಂ ||

ಚಿತೆಗೂ ಚಿಂತೆಗೂ ಬಿಂದುವಿನ ವ್ಯತ್ಯಾಸ. ಆದರೆ ಆ ಬಿಂದುವಿನಿಂದಾದ ಕಾರ್ಯ ಸಿಂಧುವಿನಷ್ಟು ಅಗಾಧ. ಚಿತೆ ಜಡವನ್ನು ಸುಡುತ್ತದೆ. ಚಿಂತೆ ಚೇತನವನ್ನೇ ಸುಡುತ್ತದೆ. ಒಟ್ಟಿನಲ್ಲಿ ಎರಡರ ಕಾಯಕವೂ ಸುಡುವುದೇ. ಆ ಬಿಂದುವನ್ನು ಶೂನ್ಯವೆಂದು ಬಗೆದರೆ ನಮ್ಮ ಅಧಃಪತನವಾಗುತ್ತದೆ. ಆ ಬಿಂದುವನ್ನು ಪೂರ್ಣವೆಂದು ತಿಳಿದರೆ ಜಡದಂತಿರುವ ನಮ್ಮ ಕರ್ಮವನ್ನು ನಾಶಮಾಡುತ್ತದೆ. ಜ್ವರಕ್ಕೆ ತಲೆನೋವು, ಮೈಕೈ ನೋವು, ಹೃದ್ರೋಗಕ್ಕೆ ಹೃದಯಬೇನೆ, ಕ್ಯಾನ್ಸರ್‌ಗೆ ಅದಿರುವ ಜಾಗದಲ್ಲಿ ಉರಿ, ಇದು ರೋಗಗಳ ನೋವು. ಅದೇ ರೀತಿ ಭವರೋಗದ ಜೊತೆಗಿರುವ ನೋವೆಂದರೆ ಚಿಂತೆ. ಈ ನೋವಿನ ನಿವಾರಣೆಗೆ painkiller ಶ್ರೀಮದ್‌ವಾದಿರಾಜರು ರಚಿಸಿದ 'ಚಿಂತಾಖಂಡನ'.

ಆಸೆ ಬೇಕು ಆದರೆ ದುರಾಶೆ ಇರಬಾರದು. ಈ ದುರಾಶೆ ಮತ್ತು ನಾನು ನನ್ನದು ಎನ್ನುವ ಮದ ಚಿಂತೆಗೆ ಕಾರಣ. ದುರಾಶೆ ನಿಃಶೇಷವಾದಾಗ, ಮದವನ್ನು ದಮನ ಮಾಡಿದಾಗ ಚಿಂತೆ ನಾಶವಾಗುತ್ತದೆ. ಪ್ರಾಪಂಚಿಕವಸ್ತುಗಳ ಕಡೆಗೆ ಮನಸ್ಸು ಹೋದಾಗ ಅದು ಬೇಕೆನ್ನುವ ಆಸೆ, ಸಿಗದಿದ್ದಾಗ ದುಃಖ, ಕೋಪಮೂಲಕವಾಗಿ ಚಿಂತೆಯಾಗುತ್ತದೆ. ಇದು ನಮ್ಮನ್ನು ಕುಗ್ಗಿಸುತ್ತದೆ. ಮನಸ್ಸು ಭಗವಂತನ ಕಡೆಗೆ ಹರಿದಾಗ ಅದು ಮನನವಾಗುತ್ತದೆ. ಅದೇ ಬ್ರಹ್ಮಜಿಜ್ಞಾಸವಾಗುತ್ತದೆ. ಈ

ರೀತಿಯಾದ ಚಿಂತೆಯಿಂದ ನಮ್ಮ ಆತ್ಮೋದ್ಧಾರವಾಗುತ್ತದೆ. ಆದ್ದರಿಂದಲೇ ಭಗವಂತನಲ್ಲಿ ನಮ್ಮನ್ನು ಸಮರ್ಪಿಸಿದಾಗ ಚಿಂತೆ ನಾಶವಾಗುತ್ತದೆ. ಈ ರೀತಿಯಾಗಿ ಶ್ರೀಮದ್‌ವಾದಿರಾಜರು ಚಿಂತಾಖಂಡನೆಯನ್ನು ಮಾಡಿದ್ದಾರೆ. ಈ ರೀತಿಯಾಗಿ ಸಂಪೂರ್ಣವಾಗಿ ಚಿಂತೆಯನ್ನು ನಾಶಮಾಡಿದ್ದಾರೆ. ಆದರೆ ಅದು ಅಂತಹ ಜ್ಞಾನಿಗಳಿಂದ ಮಾತ್ರ ಸಾಧ್ಯ. ನಮ್ಮಂತಹ ಅಜ್ಞಾನಿಗಳಿಂದ ಅಸಾಧ್ಯ. ನಾವು ನಾಶ ಮಾಡಲು ಸಾಧ್ಯವಿಲ್ಲ. ಆದರೆ ಉಂಟಾದ ಚಿಂತೆಗೆ ಪರಿಹಾರವನ್ನು ಕೊಡಬಹುದು. ಅದಕ್ಕಾಗಿ ವಿಜಯೀಂದ್ರರು ಚಿಂತೆಗೊಂದು ಚಿಕಿತ್ಸೆಯನ್ನು ನೀಡಿದ್ದಾರೆ. ಆ ಮೂಲಕವಾಗಿ ಜನಸಾಮಾನ್ಯರಿಗೂ ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ.

ಸದಾಚಾರ, ನಿತ್ಯಪಾಠ-ಪ್ರವಚನಶೀಲ, ವಾಕ್ಪಟುತ್ವ, ಮಧ್ವಸಿದ್ಧಾಂತನಿಷ್ಠೆ, ಗುರುಗಳಲ್ಲಿ ಭಕ್ತಿಪೂರ್ವಕ ಪ್ರೀತಿ ಮೊದಲಾದ ಗುಣಗಳಿಂದ ವಿಜಯೀಂದ್ರರು ಕೂಡಿದ್ದಾರೆ. ಒಂದು ರೀತಿಯಲ್ಲಿ ಇವರು ಗುಣಾರ್ಣವ.

ಅರ್ಣವ ಸದೃಶರಾದ ಇವರಿಗೆ ಸರಯೂ ಸೇರ್ಪಡೆ.

ಈ ಸಂಗಮಕಾಲದಲ್ಲಿ ಚಿಂತೆಗೊಂದು ಚಿಕಿತ್ಸೆ ಎಂಬ ಪುಸ್ತಕವನ್ನು ನೀಡುವುದರ ಮೂಲಕ ತಮ್ಮ ವೈವಾಹಿಕ ಜೀವನದಲ್ಲಿ ಯಾವುದೇ ರೀತಿಯ ಚಿಂತೆ ಆವರಿಸದೇ ಇರಲಿ ಎಂದು ಶ್ರೀಮದ್ವಾದಿರಾಜರಲ್ಲಿ ಮೊರೆಹೊಂದಿದ್ದಾರೆ. ಈ ರೀತಿಯಾಗಿ

ಅದ್ವಿತೀಯರಾದ ವಿಜಯೀಂದ್ರ ಈಗ ಸದ್ವಿತೀಯರಾಗಿದ್ದಾರೆ.

ಇದರ ಆಂಗ್ಲಾನುವಾದವನ್ನು ಸರಯೂ ಇವರಿಂದ ಮಾಡಿಸಿದ್ದಾರೆ. ಈ ದಂಪತಿಗಳಿಂದ ಬಹಳಷ್ಟು ಕೃತಿಗಳು ಹೊರಬರಲಿ, ವೈವಾಹಿಕಜೀವನವು ಸುಖಕರವಾಗಲಿ, ಶುಭಪ್ರದವಾಗಲಿ ಎಂದು ಶ್ರೀಕೃಷ್ಣಮುಖ್ಯಪ್ರಾಣದೇವರಲ್ಲಿ ವಿಶೇಷವಾಗಿ ಪ್ರಾರ್ಥಿಸುತ್ತೇವೆ.

ಇತ್ಯನೇಕ ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

श्री श्री विश्वप्रसन्नतीर्थश्रीपादः

जगद्गुरु श्रीमन्मध्वाचार्यमूलमहासंस्थानम्

श्री अधोक्षजतीर्थपीठम् श्रीपेजावरमठः

उडुपि

ಅನುಗ್ರಹ ಸಂದೇಶ

ಚಿಂತೆಗೂ ಚಿತೆಗೂ ಅಂತರ ಶೂನ್ಯ. ಚಿತೆ ಹೆಣವನ್ನು ಸುಟ್ಟರೆ ಚಿಂತೆ ಜೀವಂತವ್ಯಕ್ತಿಯನ್ನೇ ಸುಡುತ್ತದೆ. ಈ ಚಿಂತೆ ಯಾರನ್ನೂ ಬಿಟ್ಟಿಲ್ಲ. 'ಅನುಗಾಲವೂ ಚಿಂತೆ ಈ ಜೀವಕೆ' ವಿಷಯ ಪದಾರ್ಥಗಳು ಸಿಕ್ಕರೂ ಚಿಂತೆ, ದಕ್ಕದೇ ಹೋದರೂ ಚಿಂತೆ, ಚಿಂತೆಯ ಫಲ ದುಃಖ, ತತ್ವಜ್ಞಾನಿಯಾದ ಸಾಧಕನಿಗೆ ಮಾತ್ರ ಚಿಂತೆಯ ಫಲ ಕಡಿಮೆ. ಹಾಗಾಗಿ ತತ್ವಜ್ಞಾನ ಹಾಗೂ ಸಾಧನೆಯೇ ಚಿಂತೆಯ ಫಲಕ್ಕೆ ಪರಿಹಾರದ ದಾರಿ.

ನಮ್ಮ ಆತ್ಮೀಯ ಶಿಷ್ಯರಾದ ಬೆ. ನಾ. ವಿಜಯೀಂದ್ರರು ಚಿಂತೆಗೊಂದು ಚಿಕಿತ್ಸೆಯನ್ನು ತಿಳಿಸುತ್ತಿದ್ದಾರೆ. ಅದನ್ನು ಪಡೆದರೆ ಶ್ರಮ ಸಾರ್ಥಕ. ಗೃಹಸ್ಥಜೀವನಕ್ಕೆ ಅಡಿ ಇಡುತ್ತಿರುವ ವಿಜಯೀಂದ್ರರ ಬಾಳು ಬೆಳಗಲಿ. ಅಲ್ಲೂ ಈ ಜ್ಞಾನಕಾರ್ಯ ನಿರಂತರವಾಗಿ ನಡೆಯಲಿ. ಶ್ರೀಕೃಷ್ಣಮುಖ್ಯಪ್ರಾಣರ ಅನುಗ್ರಹದ ಶ್ರೀರಕ್ಷೆ ಸದಾ ದೊರಕಲಿ.

ಸಹಧರ್ಮಿಣಿಯಾಗಿ ವಿಜಯೀಂದ್ರರ ಬದುಕನ್ನು ಪ್ರವೇಶಿಸುತ್ತಿರುವ 'ಸರಯೂ' ಅವರು, ವಿಜಯೀಂದ್ರರ ಈ ಲೇಖನವನ್ನು ಆಂಗ್ಲಭಾಷೆಗೆ ತರ್ಜುಮೆ ಮಾಡುವ ಮೂಲಕ ತನ್ನ ಸಹಧರ್ಮಿಣಿ ಪದವನ್ನು ಅನ್ವರ್ಥಗೊಳಿಸಿದ್ದಾರೆ.

ನಮ್ಮ ಪ್ರಿಯಶಿಷ್ಯ ವಿಜಯೀಂದ್ರರು ಇಂತಹ ಒಂದು ಅವಕಾಶವನ್ನು 'ಸರಯೂ' ಅವರಿಗೆ ಒದಗಿಸಿಕೊಟ್ಟು, ತನ್ನ ಸಹಧರ್ಮಿಣಿಯನ್ನಾಗಿ ಸ್ವೀಕರಿಸುವ ಮೂಲಕ 'ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಾಮಿ' ಎನ್ನುವ ಪ್ರತಿಜ್ಞೆಯನ್ನು ಕೃತಿಗಿಳಿಸಿ ಸಂಕಲ್ಪವನ್ನು ಜಗಜ್ಜಾಹೀರು ಮಾಡಿದ್ದಾರೆ.

ತತ್ತ್ವಜ್ಞಾನಕಾರ್ಯದ ತೇರನ್ನೆಳೆಯಲು ನೊಗಕ್ಕೆ ತನ್ನ ಹೆಗಲನ್ನೂ ಒಡ್ಡಿದ 'ಸರಯೂ' ಅಭಿನಂದನಾರ್ಹರು. ಈ ದಂಪತಿಯಿಂದ ಶ್ರೀಮದಾಚಾರ್ಯರ ಸೇವೆ ನಿರಂತರ ನಡೆಯಲಿ. ಹರಿಗುರುಗಳು ಅನುಗ್ರಹಿಸಲಿ.

ಇಂತು ಸಪ್ರೇಮ ನಾರಾಯಣ ಸ್ಮರಣೆಗಳು.

ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು

श्री श्री विद्यावल्लभतीर्थश्रीपादाः

जगद्गुरु श्रीमन्मध्वाचार्यमूलमहासंस्थानम्
श्री रामतीर्थपिठम् श्रीकाणियूरुमठः
उडुपि

ಅನುಗ್ರಹ ಸಂದೇಶ

ವೈದ್ಯಕೀಯ ಕ್ಷೇತ್ರದಲ್ಲಿ ಅನೇಕರೋಗಗಳನ್ನು ಚಿಕಿತ್ಸೆಯಿಂದ ಪರಿಹರಿಸಲು ಸಾಧ್ಯವೆನಿಸಿದರೂ ಚಿಂತೆಯನ್ನು ಥಿಂದಿಯಾಗಿಸುವ ಚಿಕಿತ್ಸೆ ಗುರುಹಿರಿಯರ ಮಾರ್ಗದರ್ಶನ ಮಾತ್ರ. ವ್ಯಕ್ತಿ ಚಿಂತೆಗೊಳಗಾಗಲು ಅವನೊಳಗಡಗಿರುವ ಅಹಂಕಾರದ ಪ್ರಭಾವ ಕಾರಣವೆನಿಸಿದೆ. ನಾನು, ನನ್ನದು, ನನ್ನಿಂದ, ನನಗಾಗಿ ಇತ್ಯಾದಿ ಇತ್ಯಾದಿ ನಾನಾವಿಧ ಅಹಂಭಾವನೆ ವ್ಯಕ್ತಿಯನ್ನು (ಚಿಂತೆಯು) ದುಃಖದ ಮಡುವಿನಲ್ಲಿ ತಳ್ಳುವುದು. ಆದುದರಿಂದ ಚಿಂತೆಯ ಪರಿಹಾರಕ್ಕಾಗಿ ಅಜ್ಞಾನ, ಮಮಕಾರವನ್ನು ತೊರೆದು, ಭಗವಂತನ ಇಚ್ಛೆಯೇ ಸುಖದುಃಖಗಳಿಗೆ ಕಾರಣವೆಂದು ನಮ್ಮ ಮನಸ್ಸನ್ನು ತಿಳಿಗೊಳಿಸಿ ಭಗವಂತನೆಡೆಗೆ ತಿರುಗಿಸಿದಾಗ ಚಿಂತೆಯನ್ನು ಬಿಡಲು ಸಾಧ್ಯವಿದೆ.

ಲೋಕದ ಜನರ ಚಿಂತೆಯನ್ನು ಪರಿಹರಿಸಲು ಶ್ರೀವಾದಿರಾಜ ಶ್ರೀ ಪಾದರು 'ಚಿಂತಾಖಂಡನ' ಎಂಬ ಸ್ತೋತ್ರವನ್ನು ರಚಿಸುವುದರ ಮೂಲಕ ಲೋಕಕ್ಕೆಲ್ಲಾ ಅನುಗ್ರಹ ಮಾಡಿರುವರು. ಶ್ರೀವಾದಿರಾಜ ಶ್ರೀಪಾದರ ಅನುಗ್ರಹವನ್ನು ಬಾರಿ ಬಾರಿ ಸ್ಮರಿಸುತ್ತಾ, ಶ್ರೀಮದ್‌ವಾದಿರಾಜರ 'ಚಿಂತಾಖಂಡನ' ಸ್ತೋತ್ರದ ಕನ್ನಡಾನುವಾದವನ್ನು ಮಾಡಿರುವ ನಮ್ಮ ಅಭಿಮಾನಿಗಳಾದ ವಿದ್ವಾನ್ ಬೆ. ನಾ. ವಿಜಯೀಂದ್ರರ ಶ್ಲಾಘನೀಯ ಆಧ್ಯಾತ್ಮಿಕ ಸೇವೆಯನ್ನು, ನಾವು ವಿಶೇಷವಾಗಿ ಸ್ಮರಿಸುವೆವು. ಮತ್ತು ಇವರು ಕುಂ|ಸೌ| ಸರಯೂ ಅವರಿಂದ 'ಚಿಂತಾಖಂಡನ' ಕೃತಿಯ ಆಂಗ್ಲಾನುವಾದವನ್ನು ಮಾಡಿಸುತ್ತಿರುವುದನ್ನು ತಿಳಿದು ಬಹಳ ಸಂತಸವಾಗಿದೆ. ಈ ದಂಪತಿಗಳಿಂದ ಹೀಗೆಯೇ ತತ್ವಜ್ಞಾನದ ವಿಶೇಷಪ್ರಚಾರವು ಅನೇಕ ಕೃತಿಗಳ ಮೂಲಕ ಜಿಜ್ಞಾಸುಗಳಿಗೆ ದೊರೆಯುಲೆಂದು ನಮ್ಮ ಉಪಾಸ್ಯ ಮೂರ್ತಿ ಶ್ರೀ

ಲಕ್ಷ್ಮೀನರಸಿಂಹಾಭಿನ್ನ ಶ್ರೀಕೃಷ್ಣನಲ್ಲಿ ವಿಶೇಷವಾಗಿ ಪ್ರಾರ್ಥಿಸುತ್ತೇವೆ.

ಸಮಸ್ತ ಭಕ್ತಜಿಜ್ಞಾಸುವೃಂದಕ್ಕೆ ಶ್ರೀ ಲಕ್ಷ್ಮೀನರಸಿಂಹಾಭಿನ್ನ ಶ್ರೀ ಕೃಷ್ಣನ ಅನುಗ್ರಹ ನಿರಂತರವಿರಲಿ.

ಇತಿ ನಾರಾಯಣಸ್ಮರಣೆಗಳು.

ಶ್ರೀ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರು.

ಚಿಂತಾಖಂಡನಸ್ತೋತ್ರದ ರೂಪಾಂತರ

ಶಂಕರರ 'ಭಜ ಗೋವಿಂದಂ ಭಜ ಗೋವಿಂದಂ....' ಎಂಬ 'ಮೋಹಮುದ್ಗರ'ದ ಪ್ರಚಾರದ ಆರ್ಭಟವನ್ನು ಆಲಿಸಿದಾಗ ಅನಿಸುತ್ತಿತ್ತು - 'ನಮ್ಮಲ್ಲಿ ಅಂತಹ ವೈರಾಗ್ಯ ಪೋಷಕವಾದ ಸರಳವಾದ ಕೃತಿ ಯಾಕೆ ಮೂಡಿಬಂದಿಲ್ಲ?' ಎಂದು.

ಆದರೆ ವಿಜಯೀಂದ್ರಾಚಾರ್ಯರ 'ಚಿಂತೆಗೊಂದು ಚಿಕಿತ್ಸೆ'ಗೆ ಸಂಬಂಧಿಸಿ ಲೇಖನವೊಂದನ್ನು ಬರೆಯಬೇಕೆಂದಾಗ ಗಮನಕ್ಕೆ ಬಂತು ಶ್ರೀ ವಾದಿರಾಜತೀರ್ಥರ 'ಚಿಂತಾಖಂಡನ ಸ್ತೋತ್ರ' ಅದೇ ಛಾಪಿನಲ್ಲಿ ಮೂಡಿಬಂದಿರುವ ಒಂದು ಕೃತಿ ಎಂದು.

ಮೋಹಮುದ್ಗರ 'ನಹಿ ನಹಿ ರಕ್ಷತಿ ಡು ಕೃಞ್ ಕರಣೇ' ಇತ್ಯಾದಿಯಾಗಿ ಮೋಹದ ವಿರುದ್ಧ ಚೆನ್ನಾಗಿ ಬೆಳಕು ಚೆಲ್ಲುತ್ತದೇನೋ ನಿಜ. ಆದರೆ ಅದನ್ನು ಸದೆಬಡಿಯುವ 'ಮುದ್ಗರ'ದ ಕೆಲಸ ಅದರಿಂದ ಪೂರ್ಣವಾಗಿ ನಡೆದಿಲ್ಲ. 'ಭಜ ಗೋವಿಂದಂ......' ಎಂಬುದೇ ಅದರ 'ಮುದ್ಗರ'ವಾಗಿರುವುದಾದರೂ ಶಂಕರರ ಸಿದ್ಧಾಂತದ ಪ್ರಕಾರ ಅದು ಮತ್ತೊಂದು ಮೋಹದ ಜಾಲವೇ ಹೊರತು ಮುದ್ಗರ ಎನಿಸದು. ಗೋವಿಂದನೇ ಸಗುಣಬ್ರಹ್ಮ - ಅಂದರೆ ಮಾಯಾಕಲ್ಪಿತ. ಅಂದ ಮೇಲೆ ಅವನ ಭಜನೆಯೂ ಮಾಯಾಮಯ ಎನಿಸೀತೇ ಹೊರತು ಮಾಯಾಪರಿಹಾರಕ ಆಗದು.

ಹೀಗೆ 'ಮೋಹಮುದ್ಗರ'ದಿಂದ ಈಡೆರದ ಉದ್ದೇಶ 'ಚಿಂತಾಖಂಡನಸ್ತೋತ್ರ'ದಿಂದ ಈಡೇರಬಲ್ಲದು. ಬಾಹ್ಯ ಪ್ರಪಂಚದ ಚಿಂತೆ ಮೋಹದ ಮರಿಯಾದರೆ, ಭಗವಂತನ ಚಿಂತೆ ಮೋಹಕ್ಕೆ ಮಾರಕ. ಅನುಷ್ಟುಪ್ ಛಂದಸ್ಸಿನಲ್ಲಿ ಹೆಣೆಯಲ್ಪಟ್ಟಿರುವ ಹದಿನೈದು ಪದಗಳನ್ನೊಳಗೊಂಡಿರುವ 'ಚಿಂತಾಖಂಡನಸ್ತೋತ್ರ' ಚಿಂತೆಯ ಈ ಎರಡು ಬಗೆಯ ಮಗ್ಗುಲುಗಳ ಮೇಲೂ ಕ್ಷಕಿರಣ ನೀಡುತ್ತಿದೆ.

'ಹಯಾನನಂ ದಯಾಸಿಂಧುಂ ಸ್ಮರ ಸ್ಮರದಭೀಷ್ಟದಮ್'

ಎಂಬ ಉಪಸಂಹಾರದ ಪುಟ್ಟ ಸೂತ್ರಪ್ರಾಯವಾದ ಮಾತಿನಲ್ಲಿ ಚಿಂತಾ ಪರಿಹಾರಕ್ಕೆ ಶ್ರೇಷ್ಠ ಚಿಕಿತ್ಸೆಯನ್ನು ಪ್ರಭಾವಕಾರಿಯಾಗಿ ಪ್ರಸ್ತುತಪಡಿಸಲಾಗಿದೆ.

ಹೀಗೆ ಶ್ರೀವಾದಿರಾಜಸ್ವಾಮಿಗಳಿಂದ ಸಂಸಾರಿಗಳ ಚಿಂತೆಗಳ ತಪಾಸಣೆ ನಡೆಸಿ, ಅವುಗಳ ಶಸ್ತ್ರಚಿಕಿತ್ಸೆ ಬೇಕಾದ ಶಸ್ತ್ರದ ರೂಪದಲ್ಲಿ .'ಚಿಂತಾಖಂಡಸ್ತೋತ್ರ' ರೂಪಿಸಲ್ಪಟ್ಟಿದ್ದರೆ, ಅದಕ್ಕೆ ಅಲ್ಲಲ್ಲಿ ದಾಸಸಾಹಿತ್ಯದ ನುಡಿಗಳ ಉಲ್ಲೇಖ, ಕಿರುಕಥೆಗಳ ಉದಾಹರಣೆ, ತಮ್ಮ ಅನುಭವದ ವಾಗ್ಮಿತ್ವದ ಮೆರುಗು ಇವೆಲ್ಲವುಗಳ

ಜೊತೆಗೆ ಸಾಣೆ ಹಿಡಿಯುವ ಪರಿಷ್ಕಾರವನ್ನೊದಗಿಸಿ 'ಚಿಂತೆಗೊಂದು ಚಿಕಿತ್ಸೆಯನ್ನಾಗಿ ಮಾರ್ಪಡಿಸಿದೆ' ವಿಜಯಿಂದ್ರರ ಹರಿತವಾದ ಲೇಖನಿ. ಪ್ರಾಯಶಃ ಪ್ರವಚನದ ರೂಪದಲ್ಲಿ ಪ್ರಾದುರ್ಭವಿಸಿದ್ದಿರಬಹುದಾದ 'ಚಿಂತೆಗೊಂದು ಚಿಕಿತ್ಸೆ' ಕೆಲವೆಡೆ ಕೃತಿಯ ಅಚ್ಚುಕಟ್ಟುತನವನ್ನು ಮೀರಿ ಧುಮುಕುತ್ತಿರುವಂತೆ ಕಾಣುವುದಾದರೂ 'ಚಿಂತೆಗೊಂದು ಚಿಕಿತ್ಸೆ'ಯ ನಿಟ್ಟಿನಲ್ಲಿ ಅದು ಭೂಷಣವೇ.

ಶ್ರೀಮದ್ ವಾದಿರಾಜತೀರ್ಥರ ಚಿಂತಾಖಂಡನಸ್ತೋತ್ರ ಶ್ರೀ ವಿಜಯೀಂದ್ರರಿಂದ ಸರಳೀಕರಣದ ಪರಿಪಾಕಕ್ಕೊಳಪಟ್ಟು ಚಿಂತಾಚಿಕಿತ್ಸೆಯಾಗಿ ಚಿಂತಾಗ್ರಸ್ತರೋಗಿಗಳ ಚಿಕಿತ್ಸೆಯಲ್ಲಿ ಅಧಿಕವಾಗಿ ಪಾತ್ರವಹಿಸಬಲ್ಲದಾದರೆ, ಚಿಂತೆಗೊಂದು ಚಿಕಿತ್ಸೆ ಶ್ರೀ ವಿಜಯೀಂದ್ರರ ಭಾವಿಪತ್ನೀ ಅಲ್ಲ, ಈ ಕೃತಿ ಬಿಡುಗಡೆ ಹೊಂದುವಾಗ ಪತ್ನಿ ಪದವಿಯನ್ನು ಆಗಾಗಲೇ ಅಲಂಕರಿಸಿರುವ ಶ್ರೀಮತಿ ಸರಯೂ ಇವರ ಆಂಗ್ಲಾನುವಾದದ ನಳಪಾಕಕ್ಕೊಳಪಟ್ಟು ಆಂಗ್ಲಸಂಸ್ಕೃತಿಯ ದುಷ್ಪ್ರಭಾವದಿಂದ ಮತ್ತಷ್ಟು ಚಿಂತಾಗ್ರಸ್ತರಾಗಿದ್ದಿರಬಹುದಾದ ಸಾಧಕರ ಚಿಂತಾರೋಗದ ಚಿಕಿತ್ಸೆಯಲ್ಲಿ ಪ್ರಭಾವಕಾರಿ ಪಾತ್ರವಹಿಸಬಲ್ಲದು.

ಒಂದು ದೃಷ್ಟಿಯಲ್ಲಿ ವಿವಾಹವೆಂಬುದು ಸಂಸಾರ ಸೆರೆಮನೆಯ ಪ್ರವೇಶಕ್ಕೆ ಹೊಸ್ತಿಲು ಇದ್ದಂತೆ. ಅಂತಹ ಹೊಸ್ತಿಲನ್ನು ಪ್ರವೇಶಿಸುವಾಗಲೇ ಮುಂದೆ ಸಂಸಾರ ಸೆರೆಮನೆಯಲ್ಲಿ ಅನುಭವಿಸಬೇಕಾದ ಚಿಂತೆಗಳ ವಿರುದ್ಧ ಜಾಗೃತಿಯನ್ನು ತಂದುಕೊಡಬಲ್ಲ 'ಚಿಂತೆಗೊಂದು ಚಿಕಿತ್ಸೆ' ಗುರುಕಾಣಿಕೆಯಾಗಿ ಸಮರ್ಪಿತ ವಾಗುತ್ತಿರುವುದು ಔಚಿತ್ಯ ಪೂರ್ಣ. ಮುಂದಿನ ದಾಂಪತ್ಯಜೀವನ ಚಿಂತಾಖಂಡನ ಸ್ತೋತ್ರ ಪ್ರಸ್ತುಪಡಿಸುವ ಎಚ್ಚರಿಕೆಯ ಹಳಿಯಲ್ಲೇ ಸಾಗಿಸಲಾಗುವುದೆಂದು ಗುರುಗಳಲ್ಲಿ ನಿವೇದಿಸಿಕೊಂಡಂತಾಗುವುದು.

ಕಡಗೋಲೆಂಬ ಕತ್ತರಿಯನ್ನೂ, ನೇಣೆಂಬ ಹೊಲಿಯುವ ಸೂಜಿಯನ್ನು ಹಿಡಿದುಕೊಂಡು ಸಂಸಾರರೋಗದ ಶಸ್ತ್ರಚಿಕಿತ್ಸೆಗೆ ಸಿದ್ಧರಾಗಿರುವ ಉಡುಪಿಯ 'ಭವರೋಗವೈದ್ಯ' ಹಾಗೂ ಕಣ್ಣು ಮುಚ್ಚಿ ಕೈಮುಗಿದು ತಲೆಬಾಗಿಸಿದ ಭಂಗಿಯಲ್ಲಿ ನಿಂತುಕೊಂಡು ಚಿಂತೆಗೆ ಚಿಕಿತ್ಸೆಯನ್ನು ಮೌನವಾಗಿ ಸಾರುತ್ತಿರುವ ಅವನ 'ಕೌಂಪಾಂಡರ್' ಈ 'ಚಿಂತೆಗೊಂದು ಚಿಕಿತ್ಸೆ'ಯನ್ನು ತಮ್ಮ ಆಧ್ಯಾತ್ಮಿಕ ಪ್ರಪಂಚದ ಪಠ್ಯಕೃತಿಯನ್ನಾಗಿ ಪರಿಗಣಿಸುವಂತಾಗಲಿ.

ಸಗ್ರಿ ರಾಘವೇಂದ್ರ ಉಪಾಧ್ಯಾಯರು
'ಶಮ್ಯಾಪ್ರಾಸ' ಸಗ್ರಿ, ಉಡುಪಿ

ಪ್ರಾಣಗ್ರಹಣದ ಮುನ್ನ ....

ಕಳೆದ ಸಂವತ್ಸರಗಳು ಇಪ್ಪತ್ತೇಳು. ಬೆಳೆದ ಕಳೇವರ ಆರು ಅಡಿ. ಆಡಂಬರದ ಭಂಡಾರಗಳಿಂದ ತುಂಬಿದ ಬುದ್ಧಿ ಭಂಡಾರ. ಮೋಸದ ಮೋಹಕ ಮುಸುಕಿನಿಂದ ಜೀವನ ಕುಸುಮವೇ ಹೊಸಕಿಹೋಗುವ ವಿಷಮಸ್ಥಿತಿ.

ಈ ಮಧ್ಯೆ ಬ್ರಹ್ಮಚರ್ಯದ ಕೊನೆಘಟ್ಟದಲ್ಲಿ ಗಾರ್ಹಸ್ಥ್ಯದ ಆಲೋಚನೆ. ದೀರ್ಘಬ್ರಹ್ಮಚರ್ಯ ಕಲಿಯುಗದಲ್ಲಿಲ್ಲ. ಶಾಸ್ತ್ರವಿಹಿತವೂ ಅಲ್ಲ. ಸಾಧ್ಯವೂ ಅಲ್ಲ. 'ಪ್ರಾಪ್ತಂ ಪ್ರಾಪ್ತಂ ಉಪಾಸೀತ' ಎಂಬ ಮಾತನ್ನು ನೆನೆದು ಹರಿಸಂಕಲ್ಪವನ್ನು ನಿರೀಕ್ಷಿಸುತ್ತಿದ್ದೆ. ಹರಿಕರುಣೆ ಒದಗಿ ಬಂದು. ಗುರು ಕೃಪೆ ಅನುವಾಯಿತು.

ಸುತಂತುವಿನ ದಯೆ ಮಾಂಗಲ್ಯಬಂಧನಕ್ಕೆ ನಾಂದಿಯಾಯಿತು. ಮಾಂಗಲ್ಯಬಂಧನ ಎಂದರೆ ಶಾಸ್ತ್ರ ಪ್ರಪಂಚವನ್ನು ವಿಸ್ತಾರಗೊಳಿಸುವುದೆಂದರ್ಥ. ಇದಕ್ಕೆ ಅಡ್ಡಿಯಾದ ವಿಡ್ಡೂರಗಳನ್ನು ಶ್ರೀವಾದಿರಾಜಗುರು ಅಂತರ್ಯಾಮಿ ಮಧ್ವಪತಿ ಶ್ರೀ ಗೋಪಾಲಕೃಷ್ಣನು ಪರಿಹರಿಸಲಿ.

ಜೀವನದಲ್ಲಿ ಭವದ ಚಿಂತೆ ಬಾರದೆ ಹರಿ ಚಿಂತನೆ ಒದಗಿ ಬರಲೆಂದು 'ಚಿಂತೆಗೊಂದು ಚಿಕಿತ್ಸೆ' ಎಂಬ ಕಿರುಹೊತ್ತಿಗೆಯನ್ನು ಹೊರತಂದಿದ್ದೇವೆ.

ಋಜುರಾಜರ 'ಚಿಂತಾಖಂಡನ ಸ್ತೋತ್ರ' ಬಹಳ ರಮಣೀಯ. ಇದರ ರುಚಿ ಹುಟ್ಟಿಸಿದವನು ನನ್ನ ಅಣ್ಣ. ಈ ಕೃತಿಗೆ ಅವನೇ ಮೂಲಸ್ಫೂರ್ತಿ. ಋಜುರಾಜರ ಮಾತು-ಮಾತಿನಲ್ಲೂ ಅನುಭಾವದ ಹಿನ್ನೆಲೆಯಿದೆ. ಅದು ನಮ್ಮ ಪಾಲಿಗೂ ಒದಗಿ ಬರಲೆಂದು ನಾನು ನನ್ನ ಸಹಧರ್ಮಿಣಿ ಈರ್ವರೂ ಸೇರಿ ಅನುವಾದಿಸಿದ್ದೇವೆ. ಕೃತಿಯನ್ನೊಮ್ಮೆ ನೀವೂ ಅವಲೋಕಿಸಿ.

ನಮ್ಮೀರ್ವರ ಜೀವನದಲ್ಲಿ ಅಧ್ಯಾತ್ಮಚಿಂತನೆ ಜತೆ ಜತೆಯಾಗಿ ಒದಗಿಬರಲೆಂದು ಆಶೀರ್ವದಿಸಬೇಕೆಂದು ಬಯಸಿ ಮುಗಿಸುವೆ.

॥ ಹರಿಃ ಪ್ರಿಯತಾಮ್ ಮಧ್ವೇಶಾರ್ಪಣಮಸ್ತು ॥

ಬೆ. ನಾ. ವಿಜಯೀಂದ್ರಾಚಾರ್ಯ

ನಮ ಉಕ್ತಿಂ ವಿಧೇಮ

★ ಕಳೇವರ ಬೆಳೆಸಿ. ಅಂತಸ್ಸತ್ವ ಬೆಳಗಿಸಿ, ನಿತ್ಯವೂ ಕರುಣೆಯಿಂದ ಸಲಹುವ ತಂದೆ, ತಾಯಿ, ಗುರು ಎಲ್ಲ ಸ್ಥಾನವನ್ನೂ ಅಲಂಕರಿಸಿದ ನನ್ನ ಗುರುಗಳಾದ ಶ್ರೀ ಶ್ರೀ ವಿಶ್ವೇಶತೀರ್ಥರಿಗೆ ನಿತ್ಯವೂ ಮಾತು, ಮನ, ಕೃತಿಗಳಿಂದ ನಮಿಸುವೆ.

★ ಶ್ರೀವಿದ್ಯಾಮಾನ್ಯರ ಪ್ರೀತಿಯ ಆಶೀರ್ವಾದವು ನಿತ್ಯವೂ ನೆನಪಾಗುವಂತೆ ಅಕ್ಕರೆಯಿಂದ ಕಾಣುವ ಶ್ರೀ ಶ್ರೀವಿದ್ಯಾಧೀಶ ತೀರ್ಥರಿಗೆ ಅಭಾರಿಯಾಗಿ ನಮಿಪೆ.

★ ಅಧ್ಯಾತ್ಮಪಾದಯಾತ್ರೆಯ ಮೂಲಕ ಜೀವನದಲ್ಲಿ ಹೊಸ ಹುರುಪುನೀಡಿ, ವಿಚಾರಲಹರಿಯಲ್ಲಿ ಮುಳುಗಿಸುವ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥರಿಗೆ ಶಿರಬಾಗಿ ನನ್ನ ನಮನ.

★ ಅಧ್ಯಾತ್ಮಮಾರ್ಗದಲ್ಲಿ ಯಾವಾಗಲೂ ವಿಶೇಷ ಪ್ರೋತ್ಸಾಹ ನೀಡುವ ಶ್ರೀ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರಿಗೆ ಸಾಷ್ಟಾಂಗ ನಮನ.

★ ಎಂಟರ ಎಳವೆಯಲ್ಲಿ ಅಡ್ಡದಾರಿ ಹಿಡಿಯದಂತೆ ವಿದ್ಯಾಪೀಠಕ್ಕೆ ಸೇರಿಸಿ ನಿತ್ಯವೂ ಪ್ರೀತಿಯಿಂದ ವಿಚಾರಪ್ರಜ್ಞೆಯನ್ನು ಜಾಗೃತಗೊಳ್ಳುವಂತೆ ಬೆಳೆಸುತ್ತಿರುವ ತಂದೆ-ತಾಯಿಯರಿಗೆ ಅಧಮರ್ಣನಾಗಿ ನಮಿಸುವೆ.

★ ಜೀವನದಲ್ಲಿ ಎಂದೂ ಅಧ್ಯಾತ್ಮಬಾಂಧವ್ಯ, ಪ್ರೀತಿಗಳಿಗೆ ಕೊರತೆಯಾಗದಂತೆ ನೋಡುವ ಅಣ್ಣಂದಿರಿಗೆ ಮತ್ತು ತಮ್ಮನಿಗೆ ವಂದನೆ ಮತ್ತು ಅಭಿನಂದನೆ.

★ ಯಾವ ಹೊತ್ತಿನಲ್ಲಿಯೂ ಅಧ್ಯಾತ್ಮಚಿಂತನೆಗೆ ಪ್ರೋತ್ಸಾಹ ಕೊಡುತ್ತಿರುವ, ನಾನೂ ಒಬ್ಬ ಲೇಖಕನಾಗಬಲ್ಲೆ ಎಂಬ ಆತ್ಮವಿಶ್ವಾಸಕ್ಕೆ ಕಾರಣೀಭೂತರಾದ ಶ್ರೀ ಸಗ್ರಿ ರಾಘವೇಂದ್ರ ಆಚಾರ್ಯರಿಗೆ ಆಭಾರಿಯಾಗಿ ನಮಿಸುವೆ.

★ ಕಿರು ಹೊತ್ತುಗೆಯ ಅಂದ ಚಂದಗಳಿಗೆ ಕಾರಣೀಭೂತರಾದ ಪ್ರಿಯಸ್ನೇಹಿತ ಶ್ರೀ ಕೆ. ಎಂ. ಶೇಷಗಿರಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುವೆ.

★ ಜೀವನ ಅಂಕುಡೊಂಕುಗಳನ್ನು ತಿದ್ದಿ ವ್ಯಕ್ತಿತ್ವಕೊಟ್ಟ ವಿದ್ಯಾಪೀಠದ ಎಲ್ಲ ಗುರುವರ್ಯರಿಗೆ, ಶಿಷ್ಯವಾತ್ಸಲ್ಯದಿಂದ ಅನೇಕವಿಧದಲ್ಲಿ ಉಪಕರಿಸುತ್ತಿರುವ ಸಿ. ಹೆಚ್. ಬದರೀನಾಥಾಚಾರ್ಯರು, ಮತ್ತು ರಾಧಾಕೃಷ್ಣಾಚಾರ್ಯರು ಇವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು.

★ ಪರೋಕ್ಷವಾಗಿ ಅಪರೋಕ್ಷವಾಗಿ ಸಹಕರಿಸುವ, ಮಾಧವಾಚಾರ್ಯ ಪಾಂಡುರಂಗಿ, ಮತ್ತು ಶ್ರಮವಹಿಸಿ ಉಪಕರಿಸಿದ ವಿಜಯಾಚಾರ್ಯ ಮುಕುಂದಿ, ಪವನಕುಮಾರ ಮುಂತಾದ ಎಲ್ಲರಿಗೂ ಬಿಡದೆ ಕೃತಜ್ಞತೆ ಸಮರ್ಪಿಸುವೆ.

★ ಈ ಕೃತಿಯು ಹೊರಬರುವ ಸಂದರ್ಭದಲ್ಲಿ ಬಹಳಷ್ಟು ಶ್ರಮವಹಿಸಿದ ನನ್ನ ಅತ್ತೆ. ಮಾವ ಇವರಿಗೆ ಮತ್ತು ಶ್ಯಾಮಸುಂದರ ಇವರಿಗೆ ಹಾಗೂ ನನ್ನ ಅಕ್ಕ ಭಾವಂದಿರಿಗೆ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ಬೆ. ನಾ. ವಿಜಯೀಂದ್ರ

ನಿಶ್ಚಿಂತೆ ?

ಅನುಗಾಲವು ಚಿಂತೆ, ಜೀವಕೆ, ತನ್ನ
ಮನವು ಶ್ರೀರಂಗನೊಳು ಮೆಚ್ಚುವ ತನಕ ||ಪ||

ಸತಿಯು ಇದ್ದರು ಚಿಂತೆ ಸತಿಯು ಇಲ್ಲದ ಚಿಂತೆ
ಮತಿಹೀನೆ ಸತಿಯಾದರು ಚಿಂತೆಯು
ಪೃಥಿವಿಯೊಳಗೆ ಸತಿ ಅತಿಚೆಲ್ವೆಯಾದರೆ
ಮಿತಿಮೀರೆಯಿಲ್ಲದ ಮೋಹದ ಚಿಂತೆ || 1 ||

ಪುತ್ರರಿದ್ದರು ಚಿಂತೆ ಪುತ್ರರಿಲ್ಲದ ಚಿಂತೆ
ಅತ್ತು ಅನ್ನಕೆ ಕಾಡುವ ಚಿಂತೆಯು
ತುತ್ತಿನ ಆಸೆಗೆ ತುರುಗಳ ಕಾಯ್ದರು
ಸುತ್ತೇಳು ಕಡೆಯಿಲ್ಲದ ಚಿಂತೆಯು || 2 ||

ಬಡವನಾದರೂ ಚಿಂತೆ ಬಲ್ಲಿದನಾದರು ಚಿಂತೆ
ಹಿಡಿ ಹೊನ್ನು ಕೈಯೊಳಿದ್ದರು ಚಿಂತೆಯು
ಪೊಡವಿಯೊಳಗೆ ಸಿರಿ ಪುರಂದರವಿಠಲನ
ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ || 3 ||

ಒಳಗೆ.......

ಚಿಂತೆಯ ಸ್ವರೂಪ.

ಸುಖದುಃಖಗಳು ಹರಿ ಅಧೀನ.

ಬಯಕೆಗಳ ಬೆನ್ನೇರದಿರಿ !

ಆಸೆಗೆ ಸಿಲುಕಿ ಮೋಸಹೋಗದಿರಿ !

ಹರಿಕರುಣೆಗೆಣೆಯುಂಟೆ ?

ಪ್ರೀತಿ ಇರಲಿ ಮಮತೆ ಬೇಡ.

ಪ್ರಾರಬ್ಧ ಬಿಡದು.

ಶಕ್ತಿದಾತ ಭಗವಂತ.

ಹರಿಯು ಇಷ್ಟನಾದಲ್ಲಿ ಕಷ್ಟಗಳಿಲ್ಲ.

ಶ್ರೀ ಕೃಷ್ಣನು ಸಖನಾಗಲಿ.

ಎಚ್ಚರಿಕೆಯ ಎರಡು ದೃಷ್ಟಾಂತ.

ಬೆಂಬಿಡದ ದುಃಖ.

ದುಃಖಸಂಪುಟದಲ್ಲಡಗಿಸುವ ಸುಖ.

ಅಜ್ಞಾನದ ಮರಿ-ಚಿಂತೆಯಿಂದ ಸುಜ್ಞಾನದ ನಾಶ.

ಚಿಂತೆಗೆ ಚಿಕಿತ್ಸೆ ನೀಡಿದ ಋಜುಯೋಗಿರಾಜರು.

॥ ಶ್ರೀ ಗುರುಭ್ಯೋ ನಮಃ ॥

1. ಚಿಂತೆಯ ಸ್ವರೂಪ

ಶ್ರೀ ಹರಿಯು ಕರುಣಿಸಿದ ಸಂಪತ್ತುಗಳಲ್ಲಿ ಚಿಂತೆಯೂ ಒಂದು ಸಂಪತ್ತೆನಿಸಿದೆ. ಏಕೆಂದರೆ ಚಿಂತೆ ಎಂದರೆ ಬಿಡದೆ ನೆನೆಯುವುದು ಎಂದರ್ಥ. ಬಿಡದೆ ನೆನೆಯುವುದೇ ಧ್ಯಾನ ಎನಿಸುತ್ತದೆ. ಧ್ಯಾನವೇ ಸಾಧಕರಿಗೆ ಬೇಕಾದ ಸಂಪ್ಪತ್ತು. ಆದ್ದರಿಂದ ಚಿಂತೆ = ಧ್ಯಾನ ಎಂದರೆ ತಪ್ಪಾಗಲಾರದು.

ಲೋಕದ ಸಂಗತಿಗಳನ್ನೇ ಬಿಡದೆ ನೆನೆದರೆ ಆತ್ಮಗ್ಲಾನಿಯಾಗುತ್ತದೆ. ಲೋಕನಾಥನನ್ನು ಬಿಡದೆ ನೆನೆದರೆ ಆತ್ಮೋದ್ಧಾರವಾಗುತ್ತದೆ. ಆದ್ದರಿಂದ ಯಾವುದನ್ನು ಬಿಡದೆ ನೆನೆಯಬೇಕು ಎಂಬುದನ್ನು ನಾವೇ ವಿಚಾರಮಾಡಬೇಕು. ವಿಚಾರ ಮಾಡಲರಿಯದ ಮಂದಿಗೆ ಗೀತಾಚಾರ್ಯನೇ ವಿಚಾರ ಮಾಡುತ್ತಾ 'ಲೋಕದ ಸಾವಿರಾರು ಸಂಗತಿಗಳನ್ನೇ ಚಿಂತಿಸುವ ಮನುಜರು ಆಸುರೀಗುಣದವರು' ಎಂದು ಹದಿನಾರನೇ ಅಧ್ಯಾಯದಲ್ಲಿ ವಿವರಿಸಿದ್ದಾನೆ.

'ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ'

ಎಂದು.

ಸಾಮಾನ್ಯವಾಗಿ ಲೋಕದ ಜನರ ಚಿಂತೆಯ ಕ್ರಮವನ್ನು ಶ್ರೀಕೃಷ್ಣ ನಿರೂಪಿಸುವ ಕ್ರಮ ಹೀಗಿದೆ.

- ನಾನು ಇಷ್ಟು ಧನವನ್ನು ಇಂದು ಸಂಗ್ರಹಿಸಿದೆ.
- ಈ ಧನದಿಂದ ನನ್ನ ಈ ಬಯಕೆಯನ್ನು ಪೂರೈಸಿಕೊಳ್ಳುತ್ತೇನೆ.
- ನನ್ನ ಬಳಿ ಒಟ್ಟು ಇಷ್ಟು ಧನವಿದೆ.
- ಇದು ನಾಳೆಯ ದಿನ ಅಧಿಕವಾಗುತ್ತದೆ.
- ನಾನೇ ರಾಜನಾಗಿದ್ದೇನೆ.
- ಇಷ್ಟು ಮಂದಿ ಶತ್ರುಗಳನ್ನು ಕೊಂದಿರುವೆ.
- ನಾಳೆ ಉಳಿದ ಶತ್ರುಗಳನ್ನು ಕೊಲ್ಲುವೆ.
- ನಾನು ಸಕಲಭೋಗ ಉಳ್ಳವ.
- ನಾನು ಸಕಲ ಸಾಧನೆಗಳ ಗುರಿ ಮುಟ್ಟಿದವ.
- ಸರ್ವಸಮರ್ಥ. ಸುಖೀಪುರುಷ.

❖ ನನ್ನಲ್ಲಿ ತುಂಬಿದ ಸಂಪತ್ತಿದೆ.
❖ ಶ್ರೇಷ್ಠವಾದ ಕುಲದಲ್ಲಿ ಹುಟ್ಟಿದ್ದೇನೆ.
❖ ನನಗೆ ಸಮನಾದ ವ್ಯಕ್ತಿಯೇ ಇಲ್ಲ.
❖ ನಾನು ಹೋಮ ಮಾಡುತ್ತೇನೆ.
❖ ದಾನ ಮಾಡುತ್ತೇನೆ.

ಹೀಗೆ ಎಲ್ಲೆಡೆಯೂ ಅಹಂಕಾರದಿಂದ ಕೂಡಿದವರಾಗಿ ಸಾವಿರ ಮೋಹಸಂಕೋಲೆಗಳಲ್ಲಿ ಸುತ್ತುತ್ತಾರೆ. ಒಂದು ದಿನ ನಿತ್ಯನರಕದಲ್ಲಿ ಬೀಳುತ್ತಾರೆ.

ಹೀಗೆ ಬಾಹ್ಯವಾದ ಸುಖಗಳನ್ನೆಲ್ಲಾ ತಾನೇ ಪಡಿಯುವವನೆಂಬ ಚಿಂತೆಗೆ ತುತ್ತಾದ ಮನುಜ ಅಧಃಪತನಕ್ಕೆ ಗುರಿಯಾಗುತ್ತಾನೆ. ಇಂತಹ ಬಹಿರ್ಮುಖವಾದ ಇಂದ್ರಿಯಗಳಿಗೆ ಬಲಿಯಾದ ಮನುಜರನ್ನು ಅಂತರ್ಮುಖಿಗಳನ್ನಾಗಿಸಿ ಶಾಶ್ವತ ಸುಖದ ಹತ್ತಿರ ಕೊಂಡೊಯ್ಯಲು ಶ್ರೀಮದ್ವಾದಿರಾಜ ಗುರುಸಾರ್ವಭೌಮರು 'ಚಿಂತಾಖಂಡನ'; ಎಂಬ ಸ್ತೋತ್ರ ಒಂದನ್ನು ರಚಿಸಿ ಮಹದುಪಕಾರ ಮಾಡಿದ್ದಾರೆ. ಈ ಸ್ತುತಿಯೇ 'ಚಿಂತೆಗೊಂದು ಚಿಕಿತ್ಸೆ' ಎಂಬ ನಾಮಾಂತರದಿಂದ ಅನುವಾದಗೊಂಡಿದೆ.

ಲೋಕದ ಜನರನ್ನೆಲ್ಲ ತಾಪತ್ರಯಗಳೆಂಬ ಚಿಂತೆ ಆಕ್ರಮಿಸಿದೆ. ಈ ಚಿಂತೆಗೆ ಮುಖ್ಯ ಕಾರಣ 'ನಾನು' ಎಂಬ ಅಹಂಕಾರ. 'ನಾನು ಈ ಸುಖವನ್ನು ಪಡೆದೇ ತೀರುತ್ತೇನೆ' ಎಂಬ ಅಹಂಕಾರದಿಂದ ಪ್ರತಿಯೊಬ್ಬನೂ ಪ್ರವೃತ್ತಿ ಮಾಡುತ್ತಾನೆ. ಪಡೆಯಲಾಗದಾಗ 'ಪಡೆಯಲಾಗಲಿಲ್ಲವಲ್ಲ' ಎಂಬ ಚಿಂತೆಗೆ ತುತ್ತಾಗುತ್ತಾನೆ. ಹಾಗೆಯೇ 'ನಾನು ಈ ಕಷ್ಟದಿಂದ ದೂರವಾಗುತ್ತೇನೆ'ಎಂಬ ಅಹಂಕಾರದಿಂದ ಪ್ರವೃತ್ತಿಮಾಡುತ್ತಾನೆ. ಸಾಧ್ಯವಾಗದಿದ್ದಾಗ 'ಅಯ್ಯೋ ನನ್ನಿಂದ ಕಷ್ಟ ಪರಿಹರಿಸಿಕೊಳ್ಳಲಾಗಲಿಲ್ಲ' ಎಂದು ಕೊರಗುತ್ತಾನೆ. ಹೀಗೆ ನಾನು ಎಂಬ ಹಮ್ಮು ದುಃಖದ ಮಡುವಿನಲ್ಲಿ ಮುಳುಗಿಸುತ್ತದೆ. ಮತ್ತು ಹೆಚ್ಚಿನ ದುಃಖಕ್ಕೆ ಭಾಗಿಯಾಗುತ್ತಾನೆ. ಹೀಗೆ 'ನಾನು' ಎಂಬ ಅಹಂಕಾರ ಚಿಂತೆಗೆ ಮೂಲವಾದರೆ ಚಿಂತೆಯೇ ದುಃಖಕ್ಕೆ ಮೂಲಕಾರಣವಾಗಿದೆ.

ಜೀವರೆ! ನೀವು ಲೋಕದ ಚಿಂತೆಗಳಿಂದ ಸಾಧಿಸಿದ್ದಾದರೂ ಏನು? ಅತಿಯಾದ ಚಿಂತೆ, ಏನು ಮಾಡಬೇಕೆಂಬ ಕರ್ತವ್ಯಪ್ರಜ್ಞೆಯನ್ನು ಕಡೆದು ಹಾಕುತ್ತದೆ. ಧರ್ಮದ ಎಚ್ಚರವನ್ನು ನಾಶ ಮಾಡುತ್ತದೆ. ಧರ್ಮಪ್ರಜ್ಞೆಯನ್ನು ಕಳೆದುಕೊಂಡವ ಧಾರ್ಮಿಕ

ಸತ್ಸಂಕಲ್ಪಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲಾರ. ಹೀಗೆ ನಿತ್ಯವೂ ಕ್ಷುಲ್ಲಕವಿಷಯಕಾಮನೆಗಳ ಚಿಂತೆಯಿಂದಾಗಿ ಕರ್ತವ್ಯಕರ್ಮಗಳ ಸಂಕಲ್ಪವ್ಯರ್ಥ ವಾಗುತ್ತದೆ. ಅಷ್ಟೇ ಅಲ್ಲದೆ ಬಹುದುರ್ಲಭವಾದ ಮಾನವಜನ್ಮವೆಂಬ ಅನರ್ಘ್ಯರತ್ನವು ಅಜ್ಞಾನವೆಂಬ ಭಾವಿಯಲ್ಲಿ ಜಾರಿಬೀಳುತ್ತದೆ. ಯಯಾತಿ ಮಹಾರಾಜನು ವಿಷಯ ಕಾಮನೆಗಳ ಚಿಂತೆಯಿಂದ ತನ್ನ ಕರ್ತವ್ಯಕರ್ಮಗಳಿಂದಲೇ ಜಾರಿಬಿದ್ದ. ಕಾಮನೆಯ ಹಮ್ಮಿನಿಂದ ಸ್ವರ್ಗಚ್ಯುತನಾದ. ಧರ್ಮಚ್ಯುತನೂ ಆದ. ಹೀಗೆ ಜೀವನದ ಪರಮಪುರುಷಾರ್ಥವನ್ನೇ ನಾಶಪಡಿಸುವ ಪ್ರಾಪಂಚಿಕಚಿಂತೆಯಿಂದ ಏನು ಪ್ರಯೋಜನ?

2. ಸುಖದುಃಖಗಳು ಹರಿ ಅಧೀನ

ನಮ್ಮೆಲ್ಲರಿಗೂ ಸುಖದುಃಖಗಳು ನಮ್ಮಿಂದ ಎಂಬ ಅಜ್ಞಾನವಿದೆ. ಈ ಅಜ್ಞಾನವೇ ಅಹಂಕಾರಕ್ಕೆ ನಾಂದಿಯಾಗಿದೆ. 'ಸುಖವು ನನ್ನಿಂದ' ಎಂಬ ಹಮ್ಮಿನಿಂದ ಸುಖಪಡೆಯಲು ಹೋಗಿ ದುಃಖಕ್ಕೆ ಭಾಗಿಯಾಗುತ್ತಾನೆ. ದುಃಖದ ಪೊರೆಯಿಂದ ನಿರ್ಮುಕ್ತರಾಗಲು ಬಯಸಿ ಮತ್ತೂ ಹೆಚ್ಚಿನ ದುಃಖಕ್ಕೆ ಭಾಗಿಗಳಾಗುತ್ತಾರೆ. ಪಡೆಯಬೇಕಾದ ಸುಖ ಪಡೆಯಲಾಗದಿದ್ದಾಗ ಚಿಂತೆಗೊಳಗಾಗುತ್ತಾರೆ. ತಡೆಯಬೇಕಾದ ದುಃಖ ತಡೆಯಲಾಗದಿದ್ದಾಗ ಚಿಂತೆಯ ಮಡುವಿನೊಳು ಮುಳುಗುತ್ತಾರೆ.

ಹಾಗಾದರೆ ಸುಖದುಃಖಗಳು ಯಾರಿಂದ ?

'ಸುಖಮೀಶೇಚ್ಛಯಾ ನೃಣಾಂ ದುಃಖಂ ಚಾಪಿ ತದಿಚ್ಛಯಾ'

ಹರಿಯ ಇಚ್ಛೆಯಿಂದ ಸುಖ. ಹರಿಯ ಇಚ್ಛೆಯಿಂದಲೇ ದುಃಖ. ನಮ್ಮ ಇಚ್ಛೆಯಂತೆ ಏನೂ ನಡೆಯದು. ಏನಾದರೂ' ಸಂಭವಿಸಿದರೂ ಅದು ಹರಿ ಇಚ್ಛೆ ಎಂದೇ ಭಾವಿಸಬೇಕು. ನಮ್ಮ ಪೂರ್ವಪ್ರಾರಬ್ಧಗಳನ್ನು ನಿಮಿತ್ತವನ್ನಾಗಿಟ್ಟುಕೊಂಡು ಭಗವಂತನು ಸುಖದುಃಖಗಳನ್ನು ಕೊಡುತ್ತಾನೆ. ಆದ್ದರಿಂದ ನಮ್ಮ ಜೀವನದಲ್ಲಿ ಸುಖದುಃಖಗಳೆರಡನ್ನೂ ಹರಿಪ್ರಸಾದವೆಂದು ಸ್ವೀಕರಿಸಬೇಕು. 'ಪ್ರಾಪ್ತಂ ಪ್ರಾಪ್ತಂ ಉಪಾಸೀತ' ಎಂದು ಭಾಗವತವೂ ಇದನ್ನೇ ಹೇಳಿತು. ದಾಸರಾಯರೂ 'ಹರಿ ಚಿತ್ತ ಸತ್ಯ. ನರ ಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು' ಎಂದಿದ್ದಾರೆ.

ಸಕಲ ಮಾನವರೂ ಈ ಎಚ್ಚರವಿಲ್ಲದೆ 'ನನ್ನ ಮನೆ ಮಕ್ಕಳು ಮಡದಿ

ಎಲ್ಲವನ್ನೂ ನಾನೇ ಸಲಹುವವನು. ಅವರಿಗೆ ಸುಖ ನನ್ನಿಂದ. ಅವರನ್ನು ಈ ಕಷ್ಟದಿಂದ ಪಾರುಮಾಡುತ್ತೇನೆ' ಎಂಬ ಅಹಂಕರ್ತೃತ್ವ ಅಭಿಮಾನಕ್ಕೆ ತುತ್ತಾಗಿ ಚಿಂತೆಗೆ ಈಡಾಗುತ್ತಾರೆ.

ಅಜ್ಞಾನ

↓

ಅಹಂಕಾರ

↓

ಚಿಂತೆ

ಅಜ್ಞಾನ ಅಹಂಕಾರಗಳೇ ಚಿಂತೆಗೆ ಮುಖ್ಯಕಾರಣಗಳು. ಮೋಕ್ಷಕ್ಕೆ ವಿರೋಧಿಗಳಾಗಿ ಸಂಸಾರಕ್ಕೆ ಕಾರಣವಾದವುಗಳು ಇವುಗಳೇ. ಮುಕ್ತಿಕಾಮುಕರೆಲ್ಲ ಅಜ್ಞಾನ ಮತ್ತು ಅಹಂಕಾರಗಳೆಂಬ ಶತ್ರುಗಳನ್ನು ಕಡೆದೊಗೆಯಬೇಕು. ಇದನ್ನು ಕಾಠಕೋಪನಿಷತ್ತು ಸಾರಿದೆ-

ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ ಗ್ರಂಥಯಃ ।
ಅಥ ಮರ್ತ್ಯೋಽಮೃತೋ ಭವತಿ ಏತಾವದನುಶಾಸನಮ್ ॥

2-315

'ಬಯಕೆಗೆಲ್ಲ ಮೂಲವಾದ ಅವಿದ್ಯೆ, ಹಮ್ಮು, ಕರ್ಮಗಳು, ನಾಶವಾದ ಮೇಲೆ ಈಶಪದವಿ ಲಭ್ಯವೆಂದು ಶಾಸ್ತ್ರವು' ಎಂದು.

ಶ್ರೀಮದಾಚಾರ್ಯರು ಭಾಷ್ಯದಲ್ಲಿ ಇದನ್ನೇ ಸ್ಪಷ್ಟಪಡಿಸುತ್ತಾರೆ-

ಮಿಥ್ಯಾಜ್ಞಾನಗ್ರಂಥಿಭಿಸ್ತು ನಿತರಾಂ ಮುಚ್ಯತೇ ಯದಾ ।
ತದಾಽಮೃತತ್ವಮೇವೈತಿ ತದರ್ಥಂ ಚಾನುಶಾಸನಮ್ ॥ ಎಂದು.

ಎಲ್ಲಿಯ ತನಕ ಅಜ್ಞಾನ, ಅಹಂಕಾರಗಳು ದಮನವಾಗುವುದಿಲ್ಲವೋ ಅಲ್ಲಿಯ ತನಕ ಮುಕ್ತಿಯೂ ಇಲ್ಲ. ಚಿಂತೆಯೂ ತಪ್ಪಿದ್ದಲ್ಲ.

3. ಬಯಕೆಗಳ ಬೆನ್ನೇರದಿರಿ

ನಮ್ಮೆಲ್ಲರಿಗೂ ಸುಖದ ಬಯಕೆಯಿದೆ. ಸುಖ ಸಿಗುತ್ತಿಲ್ಲ. ದುಃಖ ಬೇಡವೆಂದರೂ ಬಿಡುತ್ತಿಲ್ಲ. ಈ 'ಸುಖದುಃಖಗಳಲ್ಲಿ ನಾವು ಅಸ್ವತಂತ್ರರು ಎಂಬ ಎಚ್ಚರ ಇದ್ದರೂ ಹರಿಯ ಅಧೀನ ಎಂಬ ಎಚ್ಚರವಿಲ್ಲ. ಒಟ್ಟಿನಲ್ಲಿ ಹುಚ್ಚರಂತೆ

ವರ್ತಿಸುತ್ತಿದ್ದೇವೆ. ಇದಕ್ಕೆ ಅತಿಯಾದ ವಿಷಯಾಭಿಲಾಷೆಯೇ ಕಾರಣವಾಗಿದೆ. ಆದರೆ ಅಲ್ಪವಾದ ವಿಷಯಸುಖವನ್ನೂ ಪಡೆಯಲಾಗದಷ್ಟು ಅಸ್ವಾತಂತ್ರ್ಯ ನಮ್ಮಲ್ಲಿದೆ. ಇದಕ್ಕೊಂದು ದೃಷ್ಟಾಂತವನ್ನು ಶ್ರೀಮದ್ವಾದಿರಾಜರು ನೀಡುತ್ತಾರೆ-

ಒಬ್ಬ ಬ್ರಾಹ್ಮಣನಿದ್ದ. ಅವನಿಗೆ ತಿಂಡಿ ತಿನಿಸುಗಳಲ್ಲಿ ಅತಿಯಾದ ಅಭಿರುಚಿ. ಆದರೆ ಅವನ ದುರ್ದೈವದಿಂದ ಅವನ ಮಡದಿ ಉತ್ತಮ ಪಾಕಪ್ರವೀಣಳಾಗಿರಲಿಲ್ಲ. ಇವನಿಗೆ ಜಿಹ್ವೆಯನ್ನೂ ಗೆಲ್ಲಲಾಗಿರಲಿಲ್ಲ. ಮಡದಿಯ ಅಡುಗೆಯಿಂದ ಬೇಸತ್ತ ಮಡಿಬ್ರಾಹ್ಮಣ ತಾನೇ ನಳಪಾಕವನ್ನು ತಯಾರಿಸುವುದಾಗಿ ತೀರ್ಮಾನಿಸಿದ. ಅನೇಕದಿನಗಳಿಂದ ಗಳಿಸಿದ ಸಂಪತ್ತಿನಿಂದ ಸಿಹಿತಿಂಡಿಗೆ ಬೇಕಾದ ಪದಾರ್ಥಗಳನ್ನು ಕೊಂಡು ತಂದ. ಮಡಿ ಎಂದು ಒಲೆ ಹಚ್ಚಿದ. ಮೂರು ಗಂಟೆಗಳ ಕಾಲ ಹೊಗೆಯಿಂದ ಕಣ್ಣು ಚುಚ್ಚಿಕೊಂಡ. ಕೈ ಸುಟ್ಟುಕೊಂಡ. ಪಾಕ ತಯಾರಾಯಿತು. ಪಾಕಪ್ರವೀಣನೆಂಬ ಹಮ್ಮಿನಿಂದ ಮಡದಿ ಮಕ್ಕಳನ್ನೆಲ್ಲ ಬಳಿಗೆ ಕರೆದ. ಎಲ್ಲರಿಗೂ ಮಿಠಾಯಿಗಳನ್ನು ಕೊಟ್ಟ. ಎಲ್ಲರೂ ಬಾಯ್ಗಿಟ್ಟು ಚಪ್ಪರಿಸಿದರು. ಕೊನೆಗೆ ತಾನೂ ಒಂದು ತುಂಡನ್ನು ಬಾಯಿಗೆ ಹಾಕಿಕೊಂಡ. ಜೋರಾಗಿ ಜಗಿದ. ಆದರೆ ಜಗಿದದ್ದು ಮಿಠಾಯಿಯನ್ನಲ್ಲ, ತನ್ನ ನಾಲಿಗೆಯನ್ನು. ಇಷ್ಟು ಹೊತ್ತು ಯಾವುದಕ್ಕಾಗಿ ಬವಣೆ ಪಟ್ಟನೋ ಅದೆಲ್ಲವೂ ವ್ಯರ್ಥಆಯಿತು. ನಾಲಿಗೆಯಲ್ಲಿ ನೆತ್ತರು ಬಂದು ಅನರ್ಥವಾಯಿತು.

ಇಲ್ಲಿ ವಿಚಾರ ಮಾಡಿ. ಬ್ರಾಹ್ಮಣ ಹತ್ತಾರು ದಿನದ ಶ್ರಮದಿಂದ ಸಂಗ್ರಹಿಸಿದ ಧನ, ಪಾಕಮಾಡಿದ ಶ್ರಮ, ಸಮಯ ಎಲ್ಲವೂ ವ್ಯರ್ಥವಾಯಿತು. ಎಲ್ಲರಿಗೂ ಸುಖಪಡಿಸುವೆನೆಂಬ ಭ್ರಮೆಯೂ ನಾಶವಾಯಿತು. ತನ್ನ ಹಲ್ಲುಗಳಿಂದಲೇ ರಕ್ಷಣೆ ಪಡೆಯಲಾಗದವ ಮತ್ತೊಬ್ಬರಿಗೆ ರಕ್ಷಕನಾಗುವುದಾದರೂ ಹೇಗೆ ? ಇಂತಹ ಪ್ರಮಾದಗಳನ್ನು ನಾವು ಪ್ರತಿನಿತ್ಯ ಅನುಭವಿಸಿದರೂ ಪುನಃ ಉನ್ಮತ್ತರಂತೆ ವರ್ತಿಸುತ್ತೇವೆ. ಆದ್ದರಿಂದಲೇ ಪುರಂದರದಾಸರು-

'ನಾಯಿ ಬಂದದಪ್ಪ ಅಣ್ಣಾ ಅತ್ತಲಾಗಿರಿ ॥ ಪ ॥
ನಾಯಿ ಅಂದರೆ ನಾಯಿಯಲ್ಲ
ಮಾನವ ಜನ್ಮದ ಹೀನ ನಾಯಿ ॥ ಅ. ಪ॥
....
ದಿವ್ಯಶ್ರೀ ಪುರಂದರ ವಿಟ್ಠಲರಾಯನ ಮನ
ಮುಟ್ಟಿ ಭಜಿಸದೆ ಹೋದ ನಾಯಿ'

ಎಂದಿದ್ದಾರೆ.

ಜೀವನದಲ್ಲಿನ ಅತಿಯಾದ ಆಸೆ ನಮ್ಮ ಬುದ್ಧಿಯನ್ನು ಹಾಳುಮಾಡಿದೆ. ಅಹಂಕಾರಕ್ಕೆ ಎಡೆಮಾಡಿದೆ. ನಾವು ಪಡುವ ಲೌಕಿಕ ಆಸೆ ಸುಖಕ್ಕೆ ಕಾರಣವಾಗುವುದಾದರೆ ಅಡ್ಡಿಯಿಲ್ಲ. ಆದರೆ ದುಃಖಕ್ಕೆ ಕಾರಣವಾಗುವುದಾದರೆ ಈ ಆಸೆಗೇನು ಬೆಲೆ. ಆದ್ದರಿಂದಲೇ ಭಾಗವತವು -

'ಆಶಾ ಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಂ' ಚಿಂತೆಗೆ ಕಾರಣವಾಗುವ ಆಸೆಯನ್ನು ಬಿಡಿರಿ! ಆಶಾತ್ಯಾಗಿಗಳಾಗಿ ಸುಖಕಾಣಿರಿ ! ಎಂದು.

ಶ್ರೀವಾದಿರಾಜರ ಮಾತಿಗೆ ಸಂವಾದಿಯಾಗಿ ಶ್ರೀಗೋಪಾಲ ದಾಸರ ಒಂದು ದೃಷ್ಟಾಂತವನ್ನು ನೋಡೋಣ-

ಒಂದು ನರಿ ಇತ್ತು. ಅದಕ್ಕೆ ಎಲ್ಲಿಲ್ಲದ ಆಸೆ. ಅತಿಯಾದ ಆಸೆಯಿಂದ ಮೊಲದ ಮಾಂಸವನ್ನರಸಿ ಹೊರಟಿತು. ಆಸೆಗೆ ಅನುಗುಣವಾಗಿ ಲಭಿಸಿದ ಮೊಲಗಳನ್ನು ಹಿಡಿದು ತಿಂದಿತು. ಆದರೆ ತಿಂದದ್ದು ಅತಿ ಆಯಿತು. ಹೊಟ್ಟೆ ತುಂಬಿದರೂ ಬಯಕೆ ನೀಗದೆ ಪುನಃ ತಿನ್ನಲು ಬಯಸಿತು. ಅತಿಯಾದ ಆಹಾರಸೇವನೆಯಿಂದ ತಿಂದದ್ದೆಲ್ಲವೂ ವಾಂತಿಯಾಯಿತು. ಅದರ ಪರಿಣಾಮವಾಗಿ ಪುನಃ ಹಸಿವಾಯಿತು. ಆಹಾರ ಬಯಸಿ ಹೊರಟ ನರಿಗೆ ಎಷ್ಟು ಅರಸಿದರೂ ಆಹಾರ ದೊರೆಯಲಿಲ್ಲ. ಅರಣ್ಯವೆಲ್ಲ ಸುತ್ತಿ ತಾನು ಕಕ್ಕಿದ ವಾಂತಿಯ ಬಳಿಯೇ ಬಂದಿತು. ತಾನೇ ಕಕ್ಕಿದ ಮಾಂಸದ ಅಮೇಧ್ಯವನ್ನೇ ಮೋಹದಿಂದ ಮೂಸಿತು. ಆಸೆಯ ಮನದ ಮೋಸದ ನರಿಗೆ, ವಾಂತಿಯು ತಾನೇ ಕಕ್ಕಿದ ಹೊಲಸು ಎಂಬುದು ಮರೆತುಹೋಗಿತ್ತು. ಹೊಸ ತಿನಿಸೆಂದು ನೆಕ್ಕಿತು. ಆಹಾ ಎಂತಹ ಸೊಗಸೆಂದು ಚಪ್ಪರಿಸಿತು. ನಾಲಿಗೆಗೆ ಸೊಗಸಾದರೂ ಕ್ರಿಮಿಭೂಷಿತವ ಮನವು ಅನಾರೋಗ್ಯಕ್ಕೆ ನಾಂದಿಯಾಯಿತು. ತಿಂದದ್ದೆಲ್ಲ ಪುನಃ ವಾಂತಿಯಾಯಿತು. ಇಷ್ಟಾದರೂ ಆಸೆಯನ್ನು ಮಾತ್ರ ಕಕ್ಕಿರಲಿಲ್ಲ. ಪುನಃ ಆಹಾರವನ್ನು ಬಯಸಿ ಹೊರಟ ನರಿಯ ಮುಂದಿನ ಅವಸ್ಥೆಯನ್ನು ಬಣ್ಣಿಸುವ ಅಗತ್ಯವಿಲ್ಲ.

ನಮ್ಮ ಜೀವನವೂ ಈ ನರಿಯ ಜೀವಕ್ಕಿಂತ ಹೊರತಾಗಿ ಇಲ್ಲ. ನಾವು ಆಸೆಯ ನರಿಗಳಾಗಿ ಭವಕಾಂತಾರದಲ್ಲಿ ಸಂಚರಿಸುತ್ತಿದ್ದೇವೆ. 'ಕಣ್ಣೆ ಕಾಮದ ಬೀಜ' ಎಂದು ಕನಕದಾಸರು ನುಡಿದಂತೆ, ಕಂಡದ್ದೆಲ್ಲವೂ ಬೇಕು ಎಂದು ಸಾಗುತ್ತಿದ್ದೇವೆ. ಆಸೆಗಳ ತೀರ ಮುಟ್ಟಲಾಗದೆ, ಅಂಟಿಸಿಕೊಂಡ ಆಮಿಷಗಳನ್ನು ಜೀರ್ಣಿಸಿಕೊಳ್ಳಲೂ ಆಗದೆ, ತನುವನ್ನೇ ಬಿಟ್ಟು ತೆರಳಿದ್ದೇವೆ. ಮತ್ತೆ ಜನ್ಮವೆತ್ತಿ ಇಲ್ಲಿಗೆ ಬಂದಿದ್ದೇವೆ. ಆದರೆ

ದೇಹ ಬದಲಾದರೂ ಆಸೆ ಬದಲಾಗಿಲ್ಲ. ನಿಸ್ಸಾರವೆಂದು ಪರಿತ್ಯಜಿಸಿದ ಸಂಪತ್ತನ್ನು ಮತ್ತೆ ಮೋಹದಿಂದ ನೆಕ್ಕಿದೆವು. ಸಂಸಾರವೆಂಬ ಅನಾರೋಗ್ಯಕ್ಕೆ ಕಾರಣವಾಯಿತು. ಆದರೂ ಎಚ್ಚರ ಬರಲಿಲ್ಲ. ಹೀಗೆ ಮೋಹದ ಜಾಲದಲ್ಲಿ ಸಿಕ್ಕಿಬಿದ್ದ ಜೀವನ ಅವಸ್ಥೆಯನ್ನು ಕಂಡು ದಾಸರು ನೀಚೋಪಮಾನದಿಂದ ಸುಂದರವಾಗಿ ಬಣ್ಣಿಸಿದ್ದಾರೆ.

ವಿಷಯಪದಾರ್ಥಗಳ ಸ್ವೀಕಾರವೇ ದೋಷ ಎನ್ನುವುದು ದಾಸರ ಅಭಿಪ್ರಾಯವಲ್ಲ. 'ಮೋಹದಿಂದ ಸ್ವೀಕರಿಸುವುದು ದೋಷ' ಎಂದು ಅಭಿಪ್ರಾಯ! ಹರಿ ಕೊಟ್ಟ ಪ್ರಸಾದ ಎಂಬ ಎಚ್ಚರ ಬೇಕು. ಅದನ್ನೇ ದಾಸವರೇಣ್ಯರು -

'ಹರಿಯ ಕರುಣದೊಳಾದ ಭಾಗ್ಯವ
ಹರಿ ಸಮರ್ಪಣೆ ಮಾಡಿ ಬದುಕಿರೋ ।
ಸಿರಿ ಪುರಂದರ ವಿಟ್ಠಲರಾಯನ
ಚರಣಕಮಲವ ನಂಬಿ ಬದುಕಿರೋ'

ಎಂದರು.

4. ಆಸೆಗೆ ಸಿಲುಕಿ ಮೋಸಹೋಗದಿರಿ

ಆಸೆಯು ನಮ್ಮ ಜೀವನದ ಕಡುವೈರಿ ಎಂದು ತಿಳಿದೂ ಅತಿಯಾದ ಆಸೆಗೆ ತುತ್ತಾದರೆ ಮಹತ್ತರ ಭಯವನ್ನು ಅನುಭವಿಸಬೇಕಾಗುತ್ತದೆ.

ಯಾರು ಯಾರು ಮಹತ್ತರ ಬಯಕೆಗಳಿಗೆ ತುತ್ತಾಗುತ್ತಾರೆಯೋ ಅವರೆಲ್ಲರೂ ಮಹಾವಿಪತ್ತುಗಳಿಗೆ ಬಲಿಯಾಗುತ್ತಾರೆ. ಈ ನಿಯಮಕ್ಕೆ ಭಂಗವಿಲ್ಲ. ಹಿರಣ್ಯಕಶಿಪು, ರಾವಣ, ಕುಂಭಕರ್ಣ, ಜರಾಸಂಧ, ಇವರೆಲ್ಲರೂ ಅತಿಯಾದ ಆಸೆಯಿಂದ ಬಗೆಬಗೆಯ ವರಗಳನ್ನು ಬಯಸಿದರು. ಸಾವಿರ ವರ್ಷಗಳ ಸಾಧನೆಯನ್ನು ಕಾಮನೆಗೆ ಸೀಮಿತಗೊಳಿಸಿದರು. ಬ್ರಹ್ಮರುದ್ರರೂ ಅವರ ಕಾಮನೆಗೆ ನೆರವಾದರು. ಆದರೇನಂತೆ. ಅವರೆಲ್ಲರ ಬಯಕೆಯ ಮಹಾವರಗಳೇ ಭೀಕರ ನರಕಾದಿ ಅನರ್ಥಗಳಿಗೆ ಕಾರಣವಾಯಿತು. ಇಂತಹ ದುರ್ಜನರ ಇತಿಹಾಸ ಕಣ್ಣಮುಂದೆಯೇ ಇರುತ್ತಿರಲು ಪುನಃ ಕಾಮನೆಯ ಬೆನ್ನು ಹತ್ತಿದವ ಮೂರ್ಖನೆ ಸರಿ.

ಇಷ್ಟೇ ಅಲ್ಲದೆ ಪ್ರತಿಯೊಬ್ಬರ ಆಸೆಯ ಹಿನ್ನೆಲೆಯಲ್ಲಿ ಶ್ರೀಹರಿಯೇ ರಕ್ಷಕನಾಗಿಹ ಎಂಬ ನಂಬಿಕೆಯ ಕೊರತೆಯಿದೆ. ನಂಬಿಕೆಯ ಕೊರತೆಯಿಂದ ತಲ್ಲಣಿಸುತ್ತಿರುವ ಮಂದಿಗಾಗಿ ಕನಕದಾಸರು-

'ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ'

ಎಂದರೆ, ಪುರಂದರ ದಾಸರು-

'ಏಕೆ ಚಿಂತಿಸುತ್ತಿದ್ದಿ ಕೋತಿ ಮನವೆ
ಲೋಕನಾತನ ಭಜಿಸಿ ಸುಖಿಯಾಗು ಮನವೆ'

ಎಂದಿದ್ದಾರೆ.

ಭಗವಂತನು ಸಕಲ ದೇಶಕಾಲಗಳಲ್ಲಿ ವ್ಯಾಪ್ತನಾಗಿದ್ದಾನೆ. ಕರುಣಾಪೂರ್ಣ ಹೃದಯನಾಗಿದ್ದಾನೆ.

ಶ್ರೀವಿಷ್ಣುತೀರ್ಥರು-'ಯತ್ರ ಯತ್ರ ಗತಿರ್ಮಮೇಶ್ವರ ತತ್ರ ತೇಽಸ್ತು ಪದಾಂಬುಜಂ'- 'ಹರಿಯ ಮಂಗಲಪಾದವು ನಾನು ಹೋದಲೆಲ್ಲ ಶ್ವೇತಛತ್ರದಂತೆ ರಕ್ಷಕವಾಗಲಿ' ಎಂದು ಆಲೋಚನೆ ಮಾಡಿದಲ್ಲಿ ಭೀತಿಗೆ ಕಾರಣವೇ ಇಲ್ಲ ಎಂದಿದ್ದಾರೆ..

ಅನೇಕ ಮಂದಿ ಉಪಜೀವನಕ್ಕೆ ಏನಾದರೂ ಒಂದು ಕೆಲಸ ಬೇಕೆಂದು ದಿನವಿಡೀ ಒದ್ದಾಡುತ್ತಾರೆ. ಬದುಕಿನಲ್ಲಿ ಸಿಕ್ಕಿಬಿದ್ದು ಬವಣೆ ಪಡುತ್ತಾರೆ. ಆದರೆ ಎಲ್ಲದಕ್ಕೂ ನಾವು ಅಸ್ವತಂತ್ರರಾದ್ದರಿಂದ, ಜೀವನವನ್ನು ಇದೇ ಕ್ರಮದಲ್ಲಿ ನಡೆಸುತ್ತೇವೆ ಎಂದು ನಿರ್ಧರಿಸಲಾಗದು. ಶ್ರೀವಾದಿರಾಜರ ಈ ಅಭಿಪ್ರಾಯಕ್ಕೆ ಪುರಂದರದಾಸರ ಪದ್ಯವೂ ಹೊಂದಿಕೆಯಾಗುತ್ತದೆ.

'ಏಕೆ ಚಿಂತಿಪೆ ಬರಿದೇ ನೀ । ವಿಧಿ ಬರೆದ ವಾಕು ತಪ್ಪದು ಪಣೆಯೊಳು ॥ ಮರುಳೆ ॥ ಪ॥

ಹುಟ್ಟಲಿಕಾ ಮೊದಲೆ ತಾಯು । ಮೊಲೆಯೊಳಗೆ । ಇಟ್ಟಿದ್ದ್ಯೋ ಕ್ಷೀರವ । ತೊಟ್ಟಲೊಳು ಮಲಗುವಾಗ । ಗಳಿಸಿ ನೀ ಇಟ್ಟು ಕೊಂಡುಣುತಿದ್ದೀಯ । ಮರುಳೆ ॥ 1 ॥

ಇದಕ್ಕೆ ಸಂವಾದಿಯಾಗಿ ಸುಭಾಷಿತ ಒಂದನ್ನೂ ನೋಡಬಹುದು-

ವೃತ್ತ್ಯರ್ಥಂ ನಾತಿಚೇಷ್ಟೇತ ಸ ಹಿ ಧಾತ್ರೈವ ನಿರ್ಮಿತಾ ।
ಗರ್ಭಾದುತ್ಪತಿತಂ ಜಂತೌ ಮಾತುಃ ಪ್ರಸವತಃ ಸ್ತನೌ ।

ಉಪಜೀವಿಕೆಗೆ ಹೆಚ್ಚು ಹಚ್ಚಿಕೊಂಡು ಕೊರಗದಿರು. ಮುಂದಿನದ್ದೇನೆಂದು

ಶ್ರೀಹರಿಯ ದೃಷ್ಟಿಯಲ್ಲಿ ನಿಶ್ಚಯವಾಗಿದೆ. ಮಗುವು ತಾಯಿಯ ಗರ್ಭದಿಂದ ಹೊರಬಂದೊಡನೆಯೇ ತಾಯಿಯ ಮೊಲೆಗಳಲ್ಲಿ ಹಾಲು ಚಿಮ್ಮುವುದಿಲ್ಲವೇ ? ತಾಯಿಯು ಮಗುವಿನ ಜವಾಬ್ದಾರಿಯನ್ನು ಭರಿಸಿದ್ದರೂ ಸ್ತನಗಳಲ್ಲಿ ಹಾಲು ಹರಿಯ ಕರುಣೆಯಿಂದಲೇ ಹರಿಯಬೇಕು. ಮಗುವು ಹುಟ್ಟುತ್ತ ಬೆತ್ತಲಾಗಿ ಬಂದರೂ ಅಮೃತತುಲ್ಯವಾದ ಹಾಲನ್ನು ಭಗವಂತನೇ ಕರುಣಿಸುತ್ತಾನೆ. ಆದ್ದರಿಂದ ಹರಿಯ ಇಚ್ಛೆಯನ್ನು ಅನುಸರಿಸಬೇಕು.

ಹಾಗಾದರೆ ಬದುಕಿನ ಬಗ್ಗೆ ನಡೆಸುವ ಚಿಂತನೇ ಅಪರಾಧವೇ ? ಖಂಡಿತವಾಗಿಯೂ ಅಲ್ಲ. ಬದುಕಿನ ಸೂತ್ರ ಹಿಡಿದ ಅಚ್ಯುತನನ್ನು ಚಿಂತಿಸಿದರೆ ಬದುಕಿನ ಬಗ್ಗೆ ಚಿಂತಿಸಿದಂತೆಯೇ. ಸುಂದರವಾದ ಬದುಕು ನಮ್ಮದಾಗುತ್ತದೆ. ನಮ್ಮ ಬದುಕು ಸುಂದರವಾಗಬೇಕಾದರೆ ಭಗವಂತನ ಸದ್ಗುಣ ಸೌಂದರ್ಯಗಳ ಚಿಂತನೆ ಮಾಡಬೇಕು. 'ತಂ ಯಥಾ ಯಥಾ ಉಪಾಸತೇ ತಥೈವ ಭವತಿ' 'ಅಚ್ಯುತ' ಎಂದು ಚಿಂತಿಸಿದರೆ ನಾವು ಎಂದೂ ಜೀವನ ಕಕ್ಷೆಯಿಂದ ಚ್ಯುತರಾಗುವುದಿಲ್ಲ. ಏಕೆಂದರೆ ಅಚ್ಯುತ ಶಬ್ದದ ನಿರ್ವಚನವೇ ಹೀಗೆ -

- 'ಕದಾಪಿ ಸ್ವಪದಾತ್ ನ ಚ್ಯವತೇ ಭ್ರಶ್ಯತ ಇತಿ ಅಚ್ಯುತಃ'
- 'ಐಶ್ವರ್ಯಾತ್ ಸ್ವಪ್ರಭುತ್ವತಃ ಕದಾಽಪಿ ನ ಚ್ಯವತ ಇತಿ ಅಚ್ಯುತಃ'
- 'ದೇಶತಃ ಕಾಲತಃ ಗುಣತಶ್ಚ ಚ್ಯುತಿರಹಿತತ್ವಾದಚ್ಯುತಃ'
- 'ಶ್ರೀಹರಿಯು ತನ್ನ ಸ್ಥಾನದಿಂದ ಎಂದೂ ಭ್ರಷ್ಟನಾಗಲಾರ'
- 'ದೇಶ, ಕಾಲ, ಗುಣಗಳಿಂದಲೂ ಚ್ಯುತಿ ಇಲ್ಲದವ'

ಎಂದು ಆಲೋಚಿಸಿದರೆ ನಮ್ಮ ಸ್ಥಾನ ಪ್ರಭುತ್ವ ಸಕಲ ಸೌಭಾಗ್ಯಗಳೂ ಜೀವನ ಉದ್ದಕ್ಕೂ ಹರಿದು ಬರುತ್ತವೆ. ದೇಹ ಮನಸ್ಸುಗಳಿಗೆ ಸಂಬಂಧಿಸಿದ ಸಕಲವ್ಯಾಧಿಗಳು ನಾಶವಾಗುತ್ತವೆ. ಕೃಷ್ಣಾಮೃತಮಹಾರ್ಣವದಲ್ಲಿ ಆಚಾರ್ಯರು ನುಡಿದ ಗೀತೆ ಇದು-

ಅಚ್ಯುತಾನಂತಗೋವಿಂದನಾಮೋಚ್ಚಾರಣಭೇಷಜಾತ್ ।
ನಶ್ಯಂತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಮ್ ॥ ಎಂದು.

ಹೀಗೆ 'ಸಮಗ್ರಜೀವನದ ಸಮಸ್ಯೆಗಳೆಲ್ಲವನ್ನು ಅಚ್ಯುತ' ನಾಮ ಸಂಕೀರ್ತನೆಯಿಂದ ಪರಿಹರಿಸಿಕೊಳ್ಳಿರಿ'ಎಂದು ಶ್ರೀವಾದಿರಾಜರು ಸ್ವಾನುಭವವನ್ನು 'ಅಚ್ಯುತಂ ಚಿಂತಯ' ಎಂಬ ಮಾತಿನ ಮೂಲಕ ತಿಳಿಸಿದ್ದಾರೆ.

ನಾಮದಲ್ಲಿನ ಶಕ್ತಿ ಅತೀಂದ್ರಿಯವಾದ್ದರಿಂದ ಇಷ್ಟೇ ಎಂದು ನಮಗೆ ಹೇಳಲಾಗದು. ಶಾಸ್ತ್ರದಿಂದ ವಿಶೇಷವನ್ನೂ ಸಾಮಾನ್ಯವಾಗಿ ತಿಳಿದು ಪ್ರವೃತ್ತಿ ಮಾಡಬೇಕು.

5. ಹರಿಕರುಣೆಗೆಣೆಯುಂಟೆ ?

ಪ್ರಶ್ನೆ-ಸಮಸ್ಯೆಗಳು ಅಲ್ಪವಾಗಿದ್ದಾಗ ಹರಿಸಂಕೀರ್ತನೆ ಮಾಡಿ ಸುಮ್ಮನಾಗಬಹುದು. ಪ್ರಬಲವಾದ ಆಪತ್ತುಗಳಿಗೆ ತುತ್ತಾದಾಗ ಪುರುಷಪ್ರಯತ್ನದಿಂದಲೇ ಎದುರಿಸಬೇಕಲ್ಲವೇ ? ನಮ್ಮ ಪ್ರಯತ್ನಕ್ಕೆ ಬೆಲೆ ಇದೆ ಅಲ್ಲವೇ ?

ಉತ್ತರ-ಪುರುಷ ಪ್ರಯತ್ನಕ್ಕೆ ಬೆಲೆ, ಪುರುಷೋತ್ತಮನ ಪ್ರೇರಕತ್ವದ ಹಿನ್ನೆಲೆಯಲ್ಲಿ ನಮ್ಮ ಪ್ರಯತ್ನವು ಹರಿಸಂಕಲ್ಪದಂತೆ ನಡೆಯಲಿ ಎಂದು ಮುನ್ನಡೆಯಬೇಕು. ಭವಬೇಗುದಿಯಲ್ಲಿ ಬೆಂದು ನೊಂದು ಬಸವಳಿದ ಮಂದಿಯ ಉದ್ಧಾರಕ್ಕಾಗಿಯೇ ಸನ್ನದ್ಧನಾದ ಶ್ರೀಹರಿಯಿರಲು ಎಂತಹ ಆಪತ್ತಿಗೂ ಹೆದರುವ ಅಗತ್ಯವಿಲ್ಲ.

ಇತಿಹಾಸದ ಪುಟಗಳನ್ನು ತೆರೆದುನೋಡಿದಾಗ ನಮ್ಮ ಪೂರ್ವಜ್ಞಾನಿಗಳೆಲ್ಲರೂ ಆಪತ್ತಿನ ಪರಿಹಾರಕ್ಕೆ ಕಂಡುಕೊಂಡ ಸೂತ್ರ ಇದೆ ಎಂದು ತಿಳಿಯುತ್ತದೆ. ಎಂತಹ ಆಪತ್ತುಗಳು ಬಂದರೂ ಹರಿ ಎಂಬ ಸಂಪತ್ತನ್ನು ಬಿಡದ ಮಹಾನುಭಾವರವರು. ಇದಕ್ಕೆ ಕೆಲವು ದೃಷ್ಟಾಂತಗಳನ್ನು ನೋಡೋಣ-

'ಆಪತ್ತು' ಎಂದ ಕೂಡಲೇ ನಮಗೆ ಮೊದಲು ತೋರುವ ವ್ಯಕ್ತಿ ಕುಂತಿ. ಹರಿ ಎಂಬ ಸಂಪತ್ತು ಪಡೆದವಗೆ ಆಪತ್ತುಗಳೂ ಸ್ವಾಗತಾರ್ಹವಾಗುತ್ತವೆ' ಎಂದು ಇವಳನ್ನು ನೋಡಿ ತಿಳಿಯಬಹುದು.

ಸಕಲ ವಿಪತ್ತುಗಳನ್ನೂ ಉತ್ತಮಪ್ರಾರ್ಥನೆಗಳಿಂದ ದಾಟಿದ ಮಹಾನುಭಾವಳಿವಳು. ಅಷ್ಟೇ ಏನು, ಪಾಂಡವರನ್ನೂ ತನ್ನ ಪ್ರಾರ್ಥನೆಯಿಂದ ಆಪತ್ತುಗಳಿಂದ ಪಾರು ಮಾಡಿದಳು.

ಪರೀಕ್ಷಿತ, ಶಮೀಕರ ವಿಷಯದಲ್ಲಿ ಅಪರಾಧವೆಸಗಿ ಶೃಂಗಿಯ ಶಾಪಕ್ಕೆ ಗುರಿಯಾದ. ತಕ್ಷಕನ ಮೃತ್ಯುವಿಗೆ ಭಯಪಡದೆ ಹರಿಯನ್ನು ಸ್ತುತಿಸಿದ. ಇದರಿಂದ ನಿತ್ಯವೂ ಬೆಂಬಿಡದ ಮೃತ್ಯುವಿನ ಮೃತ್ಯುವಿನಿಂದಲೇ ಮುಕ್ತನಾದ.

ಹರಿಸ್ಮರಣೆಯ ತಾತ್ಕಾಲಿಕಚಿಂತೆಗೆ ಚಿಕಿತ್ಸೆ ನೀಡುವುದಿಲ್ಲ. ಹುಟ್ಟೆಂಬ ಚಿಂತೆಗೇ ಚಿಕಿತ್ಸೆ ನೀಡುತ್ತದೆ ಎನ್ನುವುದಕ್ಕೆ ಪರೀಕ್ಷಿತನೇ ಸಾಕ್ಷಿ.

ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನಿಗೆ ಬಂದ ಆಪತ್ತುಗಳು ಲೆಖ್ಖಕ್ಕೆ ಸಿಗವು. ಸಮುದ್ರದ ಮಧ್ಯದಲ್ಲಿ ಸರಪಳಿ ಕಟ್ಟಿ ಹಾಕಿದರು. ಅವನ ಮೇಲೊಂದು ದೊಡ್ಡ ಪರ್ವತವನ್ನೂ ಹಾಕಿದರು. ಆದರಿಂದ ಸಮುದ್ರದ ಪಾತಾಳವನ್ನೇ ಮುಟ್ಟಿದ. ಆದರೇನಂತೆ, ಪ್ರಹ್ಲಾದನನ್ನು ಕಂಡ ಜಲಚರಪ್ರಾಣಿಗಳೆಲ್ಲವೂ ಹೆದರಿದವು. ಭಕ್ತಾನುಕಂಪಿಯಾದ ಭಗವಂತ ತಾನೇ ಬಂದು ಪ್ರಹ್ಲಾದನ ಮೈದಡವಿದ. ಅತ್ಯುಗ್ರವಿಪತ್ತುಗಳೆಲ್ಲವೂ ಹರಿದಯೆಯಿಂದ ಪರಿಹಾರವಾಗುತ್ತಿರುವುದನ್ನು ಕಂಡ ಪ್ರಹ್ಲಾದನ ಕಂಠ ಕಟ್ಟಿತು. ರೋಮಕೋಟಿ ನಿಮಿರಿನಿಂತವು. ಕರಮುಗಿದು ಬಾಯ್ತೆರದ -

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥

(ವಿಷ್ಣುಪುರಾಣ. 19-65) ಎಂದು.

ಪ್ರಹ್ಲಾದ ಮರುದಿನ ಮತ್ತೆ ಮನೆಗೆ ಬಂದ. ಹಿರಣ್ಯಕಶಿಪು ನಡುಗಿದ. ಬದುಕಿ ಬಂದ ಪ್ರಹ್ಲಾದ ಸಾಮಾನ್ಯನಲ್ಲ ಎಂದು ಕೊಂಡ. 'ನಾನು ನೀಡಿದ ಉಗ್ರ ಆಪತ್ತನ್ನು ಹೇಗೆ ಎದುರಿಸಿದೆ' ಎಂದು ತಂದೆ ಕೇಳಿದಾಗ, ಪ್ರಹ್ಲಾದ ನೀಡಿದ ಉತ್ತರ-

'ಶ್ರೀವಾಸುದೇವ ಸ್ಮರಣಾನುಭಾವಃ'

'ಹರಿಸ್ಮರಣೆಯಿಂದ ಆಪತ್ತನ್ನು ಪರಿಹರಿಸಿಕೊಂಡೆ ಎಂದು ಉತ್ತರಿಸಿದ. ಇಂಥಹ ದೃಷ್ಟಾಂತಗಳು ಕಣ್ಮುಂದೇ ಇರಲು ಅದನ್ನು ನೆನೆಯದೆ ಬದುಕಬೇಕೆ' ಹರಿಯ ನೆನೆಯದ ಬದುಕು ಬೇಕೆ ?

ದೈನ್ಯದಿಂದ ಭವಾಟವಿಯಲ್ಲಿ ಅಲೆಯುವ ಮಂದಿಗಳ ಆಪತ್ತುಗಳನ್ನು ಶ್ರೀಹರಿಯೇ ಪರಿಹರಿಸುವವನೆನ್ನಲು ಸಾಟಿ ಸಿಗದ ಕೋಟಿ ದೃಷ್ಟಾಂತಗಳಿವೆ. ಸಕಲಬ್ರಹ್ಮಾದಿದೇವತೆಗಳೂ ಯಾರ ದಯೆಯಿಂದ ಬದುಕು ಹಸನಗೊಳಿಸಿ ಕೊಂಡಿದ್ದಾರೋ ಅಂತಹವನ ಬಳಿ ನಮ್ಮ ದೀನತೆ ಎಲ್ಲಿ ?

ವೃಕನೆಂಬ ಅಸುರ ರುದ್ರನನ್ನು ಜಪಿಸಿದ. ರುದ್ರ ಒಲಿದ. ಅಸುರ ವರ ಕೇಳಿದ. 'ಯಾರ ತಲೆಯಲ್ಲಿ ನನ್ನ ಕೈ ಇಡುವೆನೋ ಅವರು ಭಸ್ಮವಾಗಬೇಕು' ಎಂದು. 'ತಥಾಸ್ತು' ಎಂದ. ವೃಕ ಆ ವರವನ್ನು ಹರನ ಮೇಲೆ ಪ್ರಯೋಗಿಸಲು ಭರದಿಂದ ಸಾಗಿದ. ಸಂಸಾರ ಪ್ರಭವನಾದ ಭವನೂ ಭಯದಿಂದ ಓಡಿದ. ಕೇಶವನನ್ನು ಬೇಡಿದ.

ಕೇಶವನು ವಟುರೂಪ ಧರಿಸಿ ವೃಕನನ್ನು ವಂಚಿಸಿದ. 'ರುದ್ರನು ನಿನಗೆ ಮೋಸವೆಸಗಿದ್ದಾನೆ' ಎಂದ. ವೃಕಾಸುರ 'ನನ್ನ ತಪಶ್ಶಕ್ತಿ ಎಲ್ಲ ವ್ಯರ್ಥವಾಯಿತಲ್ಲ. ಅಯ್ಯೋ!' ಎಂದು ಪರಿತಪಿಸುತ್ತಾ ಕೈಯನ್ನು ತನ್ನ ತಲೆಯಲ್ಲಿಟ್ಟುಕೊಂಡ. ತಲೆಯೊಡೆದು ಭಸ್ಮವಾದ.

ಇದೇ ರೀತಿ ಭಸ್ಮಾಸುರನ ಆಪತ್ತಿಗೂ ತುತ್ತಾದ ರುದ್ರನನ್ನು ಮೋಹಿನಿರೂಪದಿಂದ ಮೋಹಿಸಿ ಸಂಹರಿಸಿದ. ಭಯಂಕರ ರುದ್ರನ ಆಪತ್ತುಗಳನ್ನೇ ಪರಿಹರಿಸಿದ ಶ್ರೀ ಹರಿ, ದೀನಮಾನವರ ಹೀನ ಭಯವ ಪರಿಹರಿಸನೇ ?

- ಶ್ರೀ ಹರಿಯ ಭಕ್ತಳಾದ ದ್ರೌಪದಿಯ ಮಾನ ಸಂರಕ್ಷಕನಾದ.
- ಗರ್ಭದಲ್ಲಿನ ಪರೀಕ್ಷಿತನನ್ನು ದ್ರೌಣ್ಯಸ್ತ್ರದಿಂದ ಸಂರಕ್ಷಿಸಿದ.
- ಪಶುಪತಿಯಿಂದ ದಗ್ಧನಾದ ದಕ್ಷಗೆ ಭವ್ಯವ್ಯಕ್ತಿತ್ವ ಕೊಟ್ಟ
- ಹಂಸಡಿಬಿಕರಿಂದ ನೊಂದ ದುರ್ವಾಸಮುನಿಯ ಮಾನ ರಕ್ಷಿಸಿದ.

ಹರಿಕರುಣೆಗೆ ಕಳೆದ ದೃಷ್ಟಾಂತಗಳೇಕೆ ? ಕಲಿಯುಗದಲ್ಲಿ ಇಂದು ನಾವೆಲ್ಲರೂ ಅನುಭವಿಸುತ್ತಿರುವ ದೃಷ್ಟಾಂತವೇ ಇದೆ.

ಜಗತ್ತೆಲ್ಲವೂ 'ನಾನೇ ದೇವರೆಂಬ' ಅಜ್ಞಾನದ ಘನನಿದ್ರೆಯಲ್ಲಿ ಮಲಗಿದ್ದಾಗ ತ್ರಿಯುಗಹೂತಿಯಾದ ಶ್ರೀಹರಿ ಸತ್ಯಲೋಕದ ಮುಖ್ಯಪ್ರಾಣನನ್ನು ಧರೆಯ ಸುಜನರ ಉದ್ಧಾರಕ್ಕಾಗಿ ಕಳುಹಿಸಿದ. ತತ್ವಗಳ ಬೆಳಕಿನಲ್ಲಿ ಮುನ್ನಡೆಯುವಂತೆ ಮಾಡಿದ. ಸಂಸಾರದ ಮುಳ್ಳು ಚುಚ್ಚದಂತೆ ಸಲಹಿದ ಹರಿಕರುಣೆಗೆ ಇದಕ್ಕಿಂತಲೂ ಮಿಗಿಲಾದ ದೃಷ್ಟಾಂತ ಬೇಕೆ ?

ಇಷ್ಟೆಲ್ಲಾ ಆಪತ್ತುಗಳನ್ನು ಪರಿಹರಿಸುವ ಸ್ವಾಮಿ ಎಲ್ಲಿಯೋ ಇಲ್ಲ. ಹೃದಯದಲ್ಲೇ ಇದ್ದಾನೆ. ಸ್ವತಃ ತಾನೇ ತನ್ನ ಅಸ್ತಿತ್ವವನ್ನು ಸಾರಿದ್ದಾನೆ -

'ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।'

'ಭಗವಂತನು ಸಕಲ ಭೂತಗಳ ಬಗೆಯಲ್ಲಿ ನೆಲೆಗೊಂಡಿಹ' ಎಂದು.

ಹೀಗೆ 'ವಿಪತ್ತುಗಳೆಲ್ಲವೂ ಹರಿ ಎಂಬ ಸಂಪತ್ತಿನಿಂದ ಪರಿಹಾರ' ಎಂಬುದು ಸಿದ್ಧವಾದರೂ, ಇದನ್ನರಿಯದೆ ಚಿಂತೆಗೊಳಗಾಗುವ ಮಂದಿಗೇನನ್ನೋಣ.

ಶ್ರೀ ಪುರಂದರದಾಸರು 'ಹುಚ್ಚಪ್ಪಗಳಿರಾ!' ಎಂದಿದ್ದಾರೆ.

6. ಪ್ರೀತಿ ಇರಲಿ ಮಮತೆ ಬೇಡ

ಮುಂದೆ ಶ್ರೀ ವಾದಿರಾಜರು ಅತಿ ಮಮತೆಯು ಚಿಂತೆಗೆ ಕಾರಣ ಎಂದು ಪ್ರತಿಪಾದಿಸುತ್ತಾರೆ.

'ಹರಿಯೇ ಸಂರಕ್ಷಕ' ಎಂಬ ನಂಬಿಕೆಯ ಕೊರತೆ ಚಿಂತೆಗೆ ಕಾರಣವಾದಂತೆ 'ನಾನು', 'ನನ್ನದು' ಎಂಬ ಮೋಹವೂ ಚಿಂತೆಗೆ ಕಾರಣವಾಗುತ್ತದೆ.

ಮನೆ, ಮಕ್ಕಳು, ಮಡದಿಯರಲ್ಲಿನ ಅತಿಯಾದ ಮೋಹ ಹರಿಯು ಸಂರಕ್ಷಕ ಎನ್ನುವ ಎಚ್ಚರವನ್ನು ತಪ್ಪಿಸುತ್ತದೆ. ಚಿಂತೆಗೆ ಕಾರಣವಾಗುತ್ತದೆ.

ನಿತ್ಯವಾದ ವಸ್ತುವನ್ನು ನಿತ್ಯಸ್ಮರಿಸುವವರಿಗೆ ನೀಡಬೇಕು. ಎರಡು ದಿನ ಬದುಕುವರಿಗೆ ಹತ್ತುಕೋಟಿ ಕೊಟ್ಟರೇನು ಪ್ರಯೋಜನ. ನಮ್ಮ ಬದುಕೇ ಅಸ್ಥಿರವಾದಾಗ ನನ್ನವರೆಂಬ ಅತಿಮೋಹ ಎಷ್ಟು ಸರಿ ? ನಾವು ಮೆಚ್ಚಿದ ಸಂಸಾರ ಅನಿತ್ಯವೆಂಬ ಎಚ್ಚರಬೇಕು. ನಮ್ಮ ನೆಚ್ಚಿನ ಕಂಸಾರಿ ನಿತ್ಯನಾದವನೆಂಬ ಅಚ್ಛೋದದಲ್ಲಿ ಮನವ ಸ್ವಚ್ಛಗೊಳಿಸಿಕೊಳ್ಳಬೇಕು.

ನಮ್ಮ ಪಾಂಚಭೌತಿಕತನುವನ್ನೇ ತಾನೆಂದು ಭ್ರಮಿಸಿ ನನ್ನದೆಂಬ ಅಹಂಕಾರದಲ್ಲಿ ಮುಳುಗಿದ್ದೇವೆ. ಒಂದುದಿನ ಯಮದೇವ ತನ್ನ ಸದನಕ್ಕೆ ಎಳೆದು ಒಯ್ಯುವಾಗ ಅಚ್ಚುಮೆಚ್ಚಿನ ಮಡದಿ ನೆಚ್ಚಿನ ಮನೆ ಮಕ್ಕಳು, ಯಾವುದೂ ಬಳಿ ಬಾರವು. ದಾಸರ ನುಡಿಯೂ ಇದಕ್ಕೆ ಪೋಷಕವಾಗಿದೆ-

'ಯಾರು ಬರುವರು ನಿನ್ನ ಹಿಂದೆ ಇದ್ದ -
ಯಮಭಟರು ಬಾರೆಂದು ಸೆಳೆದೊಯ್ಯುವಾಗ
ಸತಿಸುತರು ಬರುವುದಿಲ್ಲ.
ಹಿತಮಾನ್ಯಕ್ಷೇತ್ರ ಬರುವುದಿಲ್ಲ.
ಜನನಿ ಜನಕರು ಬರುವುದಿಲ್ಲ'

ಎಂದು ಜೊತೆಗೆ ಬಾರದ ವ್ಯಕ್ತಿಗಳ ಕೈಯಲ್ಲಿ ಅನರ್ಘ್ಯವಾದ ಪ್ರೀತಿಯನ್ನೇಕೆ ನೀಡಿ ಮೋಸ ಹೋಗಬೇಕು. ಜೊತೆಗೆ ಬರುವ ವ್ಯಕ್ತಿಯ ಕೈಯಲ್ಲಿ ಜೋಪಾನವಾಗಿಡಬೇಕು. ದಾಸರು, ಕೊನೆಗೆ ಬರುವ ವ್ಯಕ್ತಿಗಳು ಯಾರು ಎಂದು ತಾವೇ ಉತ್ತರಿಸುತ್ತಾರೆ.

'ಹನುಮಯ್ಯನ ಹೊರತು ಬೇರೆ ಗತಿಯಿಲ್ಲ' ಎಂದು.

ಹನುಮ = ಮುಖ್ಯಪ್ರಾಣ, ಅವನ ಅಯ್ಯ = ಸ್ವಾಮಿ ಶ್ರೀರಾಮಚಂದ್ರ. ಹರಿ-ವಾಯುಗಳನ್ನು ಬಿಟ್ಟು ನಮಗೆ ಯಾರೂ ಗತಿಯಿಲ್ಲ. ಹೀಗಿರಲು ನಮ್ಮವರಲ್ಲದವರಿಗೆ ಪ್ರೀತಿ ಎಂಬ ಸಂಪತ್ತನ್ನೇಕೆ ಕೊಡುತ್ತೀರಿ ?

ಉತ್ತಂಕನ ನಲ್ನುಡಿಯೂ ಹೀಗೆಯೇ ಇದೆ -

ಮಮ ಮಾತಾ ಮಮ ಪಿತಾ ಮಮ ಭಾರ್ಯಾ ಮಮಾತ್ಮಜಾಃ ।
ಮಮೇದಮಿತಿ ಜಂತೂನಾಂ ಮಮತಾ ಬಾಧತೇ ವೃಥಾ ॥

'ನನ್ನ ತಾಯಿ ತಂದೆ ಎಂಬ
ಮೋಹಮಡದಿ ಮಕ್ಕಳೆಂಬ
ಮೋಹಜಾಲವೆಲ್ಲ ನರಗೆ-
ಬಾಧೆ ವ್ಯರ್ಥ ಕೊಡುವುದು' ಎಂದು.

ಇಷ್ಟೇ ಅಲ್ಲದೆ ಯಾರು ನಮ್ಮನ್ನು ಪರಿಪೂರ್ಣ ಪ್ರೀತಿಸುತ್ತಾರೆಯೋ ಅವರಿಗೆ ನಮ್ಮ ಅನರ್ಘ್ಯವಾದ ಪ್ರೀತಿ ಎಂಬ ಸಂಪತ್ತನ್ನು ಧಾರೆ ಎರೆಯಬೇಕು. ಮನುಷ್ಯರು ನಮ್ಮ ಪ್ರೀತಿಯನ್ನು ಪರಿಪೂರ್ಣವಾಗಿ ಸ್ವೀಕರಿಸಲು ಅಸಮರ್ಥರು. ಇದಕ್ಕೊಂದು ಕಥೆಯಿದೆ.

ಒಬ್ಬ ಶ್ರೀಮಂತರಾಜನಿದ್ದ. ಮನೆ ಮಡದಿ ಮಕ್ಕಳು ಎಲ್ಲವನ್ನೂ ಮಮತೆಯಿಂದ ಸಾಕಿ ಸಲಹುತ್ತಿದ್ದ. ಒಂದು ದಿನ ದೈವ ಸಂಕಲ್ಪದಂತೆ ಇದ್ದಕ್ಕಿದಂತೆ ಮೃತನಾದ. ಮಮತೆ ಅಂಟಿಸಿಕೊಂಡ ರಾಜನನ್ನು ಯಮಭಟರು ನಿಷ್ಕರುಣೆಯಿಂದ ಸೆಳೆದೊಯ್ಯ ಹತ್ತಿದರು. ಅವರನ್ನು ಬಿಡಲಾಗದ ರಾಜ ಬೊಬ್ಬೆ ಹೊಡೆದ. ಎಷ್ಟು ಅತ್ತರೂ ಕರುಣೆಯಿಲ್ಲದ ಯಮಭಟರು ಸೆಳೆದೇ ನಡೆದರು. ಆದರೂ ಕೊನೆಗೊಮ್ಮೆ ಅವರಿಗೆ ಇವನ ಮಮತೆಯ ಗೋಳಾಟ ಕಂಡು ಕರುಣೆ ಹುಟ್ಟಿತು. ರಾಜನ ಅತಿಯಾದ ಮಮತೆ ಯಮಕಿಂಕರರಿಗೂ ಕರುಣೆ ಹುಟ್ಟಿಸಿತು. ಕ್ಷಣಕಾಲ ಹೆಂಡತಿಯನ್ನು ನೋಡಿ ಬರುವುದಾಗಿ ಹೇಳಿದ. ಆಗಲೆಂದು ಬಿಟ್ಟರು.

ರಾಜ ತನ್ನ ಶವದ ಬಳಿ ಬಂದ. ನೆಂಟರಿಷ್ಟರೆಲ್ಲ ಸುತ್ತುವರೆದಿದ್ದರು. ರಾಜನ ಮೋಹದ ಪತ್ನಿಯು ಜೋರಾಗಿ ಅಳುತ್ತಿದ್ದಳು. ಆದರೆ ಅವಳ ಅಳುವಿನಲ್ಲಿ ತ್ಯಾಗ

ಇರಲಿಲ್ಲ. ಸ್ವಾರ್ಥ ಇತ್ತು. 'ನನ್ನ ಗಂಡ ಸತ್ತ. ಇನ್ನು ನಾನು ಹೇಗೆ ಬದುಕಲಿ! ನನ್ನ ಜೀವನದ ಸುಖ ನಿಂತಿತಲ್ಲ' ಎಂದು ವಿಲಪಿಸುತ್ತಿದ್ದಳು. ಇದನ್ನು ಕಂಡ ರಾಜ, ಯಮಪುರಿಗೆ ತಾನಾಗಿಯೇ ನಡೆದನಂತೆ. ಏಕೆಂದರೆ 'ತಾನು ಎಷ್ಟು ಮೋಹದಿಂದ ಹೆಂಡತಿಯನ್ನು ಸಲಹಿದ್ದರೂ ಹೆಂಡತಿ ತನ್ನ ಬದುಕಿನ ಬಗ್ಗೆಯೇ ಆಲೋಚಿಸುತ್ತಿದ್ದಾಳೆ. ನನ್ನ ಬಗ್ಗೆ ಪ್ರೀತಿ ಸ್ವಾರ್ಥಕ್ಕಾಗಿ ಇತ್ತು ಎಂಬ ಎಚ್ಚರ ರಾಜನಿಗೆ ಬಂದಿತ್ತು.

ಇದು ವಾಸ್ತವ ಸಂಗತಿ. ಪ್ರತಿಯೊಬ್ಬರ ಪ್ರೀತಿಯಲ್ಲಿಯೂ ಏನೋ ಒಂದು ಸ್ವಾರ್ಥ ಇರುತ್ತದೆ. ಆದರೆ ನಾವು ಭಗವಂತನಲ್ಲಿ ಪ್ರೀತಿ ಮಾಡಿದರೆ ನಮ್ಮನ್ನು ಭಗವಂತನು ಸ್ವಾರ್ಥ ಬಿಟ್ಟು ಪ್ರೀತಿಸುತ್ತಾನೆ. ಇಷ್ಟು ಎಚ್ಚರವಿದ್ದರೂ ಸಾಕು. ನಮ್ಮ ಬದುಕು ಹೇಗೆ ಸಾಗುತ್ತದೆ. ಎಂದು ದಾಸರು ಬಣ್ಣಿಸುತ್ತಾರೆ-

'ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ
ಮತ್ತೊಬ್ಬ ಮಗನ ಉಪನಯನ ನಾಳೆ.
ಅರ್ಥಿಯಾಗಿದೆ ಬದುಕು ಸಾಯಲಾರೆನು ಎನಲು
ಮೃತ್ಯುಹೆಡತಲೆಯಲ್ಲಿ ನಗುತಿರ್ಪುದರಿಯೇ"

ಎಂದು.

ಜೀವರ ನಿಜವಾದ ಬದುಕು ಹೇಗಿದೆ ಎನ್ನಲು ಒಂದು ಸುಂದರಶ್ಲೋಕವಿದೆ.-

ಯಥಾ ವ್ಯಾಲಗಲಸ್ಥೋಽಪಿ
ಭೇಕೋ ದಂಶಾನಪೇಕ್ಷತೇ ।
ತಥಾ ಕಾಲಾಹಿನಾ ಬದ್ಧೋ
ಲೋಕೋ ಭೋಗಾನಶಾಶ್ವತಾನ್ ॥

ಒಂದು ಕಪ್ಪೆ ಇತ್ತು. ಅದಕ್ಕೆ ನೊಣ ನುಂಗುವ ಆಸೆ. ಕಪ್ಪೆಗೆ ನೊಣ ಒಂದು ಕಾಣಿಸಿತು. ನೊಣ ನುಂಗುವ ಆಸೆಯಿಂದ ಕಪ್ಪೆ ಕುಪ್ಪಳಿಸುತ್ತ ಮುಂದೆ ಸಾಗಿತು. ಆದರೆ ಹರಿಸಂಕಲ್ಪ ಬೇರೆ ಇತ್ತು. ಕಪ್ಪೆಯು ನೊಣವನ್ನು ನುಂಗುವ ಮುನ್ನ ಕಪ್ಪೆಯನ್ನು ಹಾವೊಂದು ನುಂಗಲು ಬಯಸಿತು. ಅದರಂತೆ ಕಪ್ಪೆಯನ್ನು ಹಾವು ಹಿಂಬದಿಯಿಂದ ಹಿಡಿಯಿತು. ಕಪ್ಪೆ ಹಾವಿನ ಬಾಯಿಗೆ ಆಹಾರವಾಗಿದ್ದರೂ ಅದಕ್ಕೆ ತನ್ನ ಸಾವಿನ ಬಗ್ಗೆ ಎಚ್ಚರವೇ ಇಲ್ಲ. ನೊಣ ನುಂಗಬೇಕೆಂಬ ಆಸೆ, ಮೃತ್ಯುವನ್ನೇ ಮರೆಸಿತ್ತು. ಹಾವಿನ ಹೆಡೆಯಲ್ಲಿಯೇ ಕುಳಿತು ನೊಣ ನುಂಗಲು ಹವಣಿಸುತ್ತಿತ್ತು.

ನಮ್ಮ ಜೀವನವೂ ಕಪ್ಪೆಯಂತೆಯೇ. ನಾವು ಕಪ್ಪೆಯಂತೆ ಹಾರುವ ಮಂದಿ. ಆಸೆಗಳಿಗಾಗಿ ದೇಹಕ್ಕೆ ಸಾಮರ್ಥ್ಯವಿಲ್ಲದಿದ್ದರೂ ಹಾರಾಡುತ್ತಾ ಕಾಲನೆಂಬ ಮೃತ್ಯುವಿನೊಂದಿಗೆ ರೋಗಗಳೆಂಬ ಸಾವಿರ ಮೃತ್ಯುಭೃತ್ಯರ ಆಕ್ರಮಣವಾಗಿದ್ದರೂ ನಮಗೆ ಎಚ್ಚರವೇ ಇಲ್ಲ. ಮೋಸದ ಮೋಹದ ಆಸೆಗೆ ಸಿಲುಕಿಕೊಂಡಿದ್ದೇವೆ.

ಜೀರ್ಯಂತಿ ಜೀರ್ಯತಃ ಕೇಶಾಃ
ದಂತಾ ಜೀರ್ಯಂತಿ ಜೀರ್ಯತಃ ।
ಧನಾಶಾ ಜೀವಿತಾಶಾ ಚ
ಜೀರ್ಯತೋಽಪಿ ನ ಜೀರ್ಯತಃ ॥

ಮುಪ್ಪಡರಿಸಿಕೊಂಡ ತರುವಾಯ ಕೂದಲು ಉದುರಿ ಬೀಳುತ್ತವೆ ಹಲ್ಲು ಉದುರುತ್ತವೆ. ಆದರೆ ಮತ್ತೂ ಬದುಕಬೇಕು. ಮತ್ತೂ ಹಣವನ್ನೂ ಸಂಗ್ರಹಿಸಬೇಕೆಂಬ ಬಯಕೆಗಳು ಉದುರುವುದೇ ಇಲ್ಲ. ಸಾವಿರ ಭೋಗಪ್ರಪಂಚಕ್ಕೆ ಅಂಟಿಸಿಕೊಳ್ಳುತ್ತೇವೆ. ಮೋಹದ ಕಣ್ಣುಗಳಿಂದ ಒಣ್ಣದ ಪ್ರಪಂಚವನ್ನು ಬಯಸಿ ಒಂದು ದಿನ ಮೃತ್ಯುವಿಗೆ ತುತ್ತಾಗುತ್ತೇವೆ. ಇಂತಹ ಕಠೋರಸತ್ಯವನ್ನು ಈ ಸುಭಾಷಿತ ಸುಂದರವಾಗಿ ತಿಳಿಸುತ್ತದೆ. ಇದು ಹೃದಯದಲ್ಲೂ ಅನುಭವದ ಹಿನ್ನೆಲೆಯಲ್ಲಿ ಪಡಿಮೂಡಿದರೆ ಜೀವನದಲ್ಲಿ ಒಂದಾದರೂ ಹೆಜ್ಜೆಯನ್ನು ಮುಂದಿಡಲು ಸಾಧ್ಯವಾಗುತ್ತದೆ.

ಮಮಕಾರ ಮಾಡುವುದೇ ದೋಷವಲ್ಲ. ಅದನ್ನು ಕೇವಲ ತನ್ನವರಲ್ಲಿ ಮಾತ್ರ ಸೀಮಿತಗೊಳಿಸುವುದು ದೋಷ. ಪ್ರಪಂಚದಲ್ಲಿರುವರೆಲ್ಲರೂ ತನ್ನವರೆಂಬ ಮಮತೆ ಗುಣವೆನಿಸುತ್ತದೆ.

'ತ್ಯಕ್ತವ್ಯೋ ಮಮಕಾರಸ್ತ್ಯಕ್ತುಂ ಯದಿ ಶಕ್ಯತೇ ನಾಸೌ
ಕರ್ತವ್ಯೋ ಮಮಕಾರಃ ಕಿಂತು ಸಃ ಸರ್ವತ್ರ ಕರ್ತವ್ಯಃ'

'ಮಮಕಾರವ ಬಿಡಿ. ಅದು ಆಗದೆಡೆ ಅದನ್ನು ಹಿಡಿ.
ಆದರೆ ಅದನು ಎಲ್ಲರ ವಿಷಯದಲ್ಲಿಯೂ ಹಿಡಿ.'

ಇದನ್ನರಿತು ದೋಷದೂರನಾದ ಅಶೇಷಗುಣಭರಿತನಾದ ಶೇಷಶಾಯಿಯಾದ ಕೇಶವನ ಸೇವೆಯಲ್ಲಿ ಸತಿಸುತರನ್ನು ತನ್ನ ಸಾಧನಶರೀರವನ್ನು ತೊಡಗಿಸಿದರೆ ಮಹಾಕ್ಲೇಶರಾಶಿಗಳೆಲ್ಲಾ ನಾಶವಾಗುತ್ತದೆ. ಆಶಾವಿಶೇಷಗಳು ಫಲಿಸುತ್ತವೆ. ಇದರಲ್ಲಿ ಸಂಶಯಲೇಶವೂ ಇಲ್ಲ.

7. ಪ್ರಾರಬ್ಧ ಬಿಡದು

ಜಗತ್ತಿನ ಸಮಸ್ತ ಜೀವಜಾತಗಳಲ್ಲಿ ಯಾರಿಗೂ ಕಷ್ಟಗಳು ಬಯಸಿಬಂದಿಲ್ಲ. ಯಾರೂ ಕಷ್ಟವನ್ನು ಬಯಸುವುದೂ ಇಲ್ಲ. ಬಂದ ಕಷ್ಟವನ್ನು ಪರಿಹರಿಸಿಕೊಳ್ಳಲೂ ಸಮರ್ಥರಲ್ಲ. ನಿರಂತರ ದುಃಖಗಳೆಂಬ ಮಡುವಿನಲ್ಲಿ ಜನರೆಲ್ಲರೂ ತಮಗರಿವಿಲ್ಲದಂತೆಯೇ ಮುಳುಗಿ ಏಳುತ್ತಿದ್ದಾರೆ.

ಈ ವಿಷಯದಲ್ಲಿ ನರ ನಾರಿ ಸುರ ಅಸುರರೆಲ್ಲರೂ ಅಸಮರ್ಥರಾಗಿದ್ದಾರೆ. ಬ್ರಹ್ಮಾದಿ ಸಮಸ್ತಜೀವರಿಗೆ ನಿಯಾಮಕನಾದ ಭಗವಂತ ತನ್ನ ಶಕ್ತಿಯನ್ನು ಕಸಿದುಕೊಂಡರೆ ಯಾವ ಆಟವೂ ನಡೆಯದು.

ಸ್ಕಾಂದಪುರಾಣದ ನುಡಿ ಹಿಗೆ ಹೇಳುತ್ತದೆ-

ಶ್ವಪಚಾದಪಿ ಕಷ್ಟತ್ವಂ ಬ್ರಹ್ಮೇಶಾನಾದಯಸ್ಸುರಾಃ ।
ತದೈವಾಚ್ಯುತ ಯಾಂತ್ಯೇವ ಯದೈವ ತ್ವಂ ಪರಾಙ್ಮುಖಃ ॥

ಬ್ರಹ್ಮಾದಿ ದೇವತೆಗಳೂ ಸಹ ಭಗವಂತನಿಂದ ವಿಮುಖರಾದರೆ ಹೀನಯೋನಿಯ ಶ್ವಪಚನಿಗಿಂತಲೂ ಹೆಚ್ಚಿನ ಕಷ್ಟಕ್ಕೆ ಭಾಗಿಗಳಾಗುತ್ತಾರೆ. ದೇವತೆಗಳ ಸ್ಥಿತಿಯೇ ಹೀಗಿರಲು ಅಸುರ ನರನಾರಿಯರ ಪಾಡನ್ನು ಪ್ರತ್ಯೇಕ ಹೇಳಬೇಕಿಲ್ಲ.

ಸುಖದುಃಖಗಳು ನಮ್ಮ ಪ್ರಾರಬ್ಧವನ್ನವಲಂಬಿಸಿಕೊಂಡು ಬರುತ್ತವೆ. ನಾವು ಮಾಡಿದ ಸುಕೃತ ದುಷ್ಕೃತಗಳಿಗೆ ನಾವೇ ಕಾರಣರಾಗಿದ್ದೇವೆ.

'ಆತ್ಮನಾ ಹಿ ಕೃತಂ ಪಾಪಮಾತ್ಮನೈವ ಹಿ ಭುಜ್ಯತೇ'

ನಮ್ಮ ಸಕಲ ಕೆಲಸಗಳನ್ನು ನೋಡಲು ಮೇಲೊಬ್ಬ ದೇವನಿದ್ದಾನೆ.

'ದೇವೋ ಯಾತಿ ಭುವನಾನಿ ಪಶ್ಯನ್ ।' (ಋಗ್ವೇದ)

ನಮ್ಮ ಶುಭಾಶುಭ ಕರ್ಮಗಳೇ ಸುಖದುಃಖಗಳಿಗೆ ಕಾರಣ ಎನ್ನಲು ಮತ್ತೊಂದು ಪ್ರಮಾಣ ಸಂವಾದಿಯಾಗಿದೆ -

ಶುಭೇನ ಕರ್ಮಣಾ ಸೌಖ್ಯಂ ದುಃಖಂ ಪಾಪೇನ ಕರ್ಮಣಾ ।
ಕೃತಂ ಫಲತಿ ಸರ್ವತ್ರ ನಾಕೃತಂ ಭುಜ್ಯತೇ ಕ್ವಚಿತ್ ॥

ಇದನ್ನೇ ಶ್ರೀಪುರಂದರದಾಸರು 'ಪೂರ್ವಜನ್ಮದ ಕರ್ಮವಿದು ಬೆನ್ನು ಬಿಡದು' ಎಂದಿದ್ದಾರೆ.

ಶ್ರೀಮದ್ವಾದಿರಾಜರೂ ಯುಕ್ತಿಮಲ್ಲಿಕೆಯಲ್ಲಿ -

'ಪ್ರಾಗ್ಜನ್ಮಾರ್ಜಿತದುಷ್ಕರ್ಮ ದುಃಖಮೂಲಂ ಧ್ರುವಂ ನೃಣಾಂ'
ಎಂದು ಸಮರ್ಥಿಸಿದ್ದಾರೆ.

ಇದರಂತೆ ಶ್ರುತಿಯೇ ಸಾರಿದ ಒಂದು ನುಡಿಯೂ ಇದೆ-

ಯೇ ರಮಣೀಯಚರಣಾಃ
ತೇ ರಮಣೀಯಾಂ ಯೋನಿಮಾಪದ್ಯಂತೇ ।
ಯೇ ಕಪೂಯಚರಣಾಃ
ತೇ ಕಪೂಯಾಂ ಯೋನಿಮಾಪದ್ಯಂತೇ ॥ ಎಂದು

ಆದರೆ ಇಲ್ಲಿ ಸಹಜವಾಗಿ ಒಂದು ಸಂಶಯಕ್ಕೆ ಅವಕಾಶವಿದೆ. ಇಂದು ನಾವೆಲ್ಲರೂ ಬಹುತೇಕ ಅಂದುಕೊಂಡ ಫಲಗಳನ್ನು ಪಡೆಯುತ್ತಿದ್ದೇವೆ. ಬೇಡವಾದ ಕಷ್ಟಗಳನ್ನು ಪರಿಹರಿಸಿ ಕೊಳ್ಳುತ್ತಿದ್ದೇವೆ. ಹೀಗಿರಲು ಸುಖದುಃಖಗಳು ನಮ್ಮ ಹಿಡಿತದಲ್ಲಿಯೇ ಇಲ್ಲ ಎಂಬ ಮಾತು ಎಷ್ಟು ಸರಿ?

ಇದಕ್ಕೆ ಉತ್ತರವಿಷ್ಟೆ. 'ಇವತ್ತಿನ ಈ ನನ್ನ ಕರ್ಮದಿಂದ ಈ ಸುಖ ಪಡೆದಿರುವೆ'ಎಂದು ನಾವು ತಿಳಿಯುತ್ತೇವೆ. ಆದರೆ ಇಂದಿನ ಸುಖರೂಪ ಕಾರ್ಯಕ್ಕೆ ಜನ್ಮಾಂತರದ ಸುಕೃತವೇ ಕಾರಣ ಎಂದು ಶಾಸ್ತ್ರ ಹೇಳುತ್ತದೆ. ಇಂದಿನ ದುಃಖಕ್ಕೂ ಜನ್ಮಾಂತರದ ದುಷ್ಕರ್ಮವೇ ಕಾರಣವಾಗಿದೆ. ಎಂದೋ ಮಾಡಿದ ಅಪರಾಧದ ಫಲವನ್ನು ಇಂದು ಅನುಭವಿಸುತ್ತೇವೆ. ಇಂದಿನ ಕರ್ಮವೂ ಹಿಂದಿನ ಪ್ರಾರಬ್ಧಕ್ಕೆ ಸಂಬಂಧಪಟ್ಟದ್ದು. 'ಸುಖದುಃಖಗಳೆಲ್ಲವೂ ಹರಿ ಸಂಕಲ್ಪದಂತೆಯೇ ನಡೆಯುತ್ತವೆ' ಎಂಬುದು ಬಾಹ್ಯವಾದ ಇಂದ್ರಿಯಗಳಿಂದ ಬಾಹ್ಯಪ್ರಪಂಚವನ್ನು ಕಾಣುವ ಮಂದಿಗೆ ಅರ್ಥವಾಗದು. ಹರಿಯ ವ್ಯಾಪಾರವು ಬ್ರಹ್ಮಾದಿಗಳಿಗೆ ಪೂರ್ಣ ತಿಳಿಯದು. ಹೀಗಿರಲು ನರರ ಪಾಡೇನು ? ಎನ್ನುತ್ತಾರೆ ಶ್ರೀವ್ಯಾಸರಾಜರು-

'ಹರಿ ನಿನ್ನ ರೋಮಕೂಪದಲ್ಲಿ ಜೀವಿಪ
ಸರಸಿಜಭವಾಂಡಕೋಟಿಯಲಿ ॥ಪಲ್ಲವಿ॥

ಇರುತ್ತಿಪ್ಪ ಬ್ರಹ್ಮರುದ್ರಾದಿಜೀವರುಗಳು
ಹರಿ ನಿನ್ನ ಮಹಿಮೆಯ ಪರ್ಮೆಯ ಬಲ್ಲರೆ ||ಅ-ಪ||

ಹರಿಯ ಕರುಣೆಯೆಂಬ ರಸಪಾಕದ ರುಚಿಯನ್ನನುಭವಿಸಿದವ ಸಂಸಾರದ ಹೀನಸುಖಗಳಿಗೆ ಬಾಯ್ತೆರೆಯನು. ಹರಿಯು ನಮ್ಮ ಜೀವನವನ್ನು ಪ್ರವೇಶಿಸಿದರೆ ಆಗುವ ಪರಿಣಾಮವೇನೆಂದು ವ್ಯಾಸರಾಜರು ಹೀಗೆ ಹೇಳುತ್ತಾರೆ-

ಬಿಸಿಲು ಬೆಳದಿಂಗಳಾಯಿತು ತಾ-
ಮಸ ಹೋಗಿ ಜ್ಞಾನೋದಯವಾಯಿತು ।
ಕುಸುಮನಾಭನು ತಾ ಬಂದಿರೆ ಅಲ್ಲಿ -
ವಿಷಹೋಗಿ ಅಮೃತವಾಯಿತು ನೋಡಾ || ಪ||
ಜಾಣೆಯರಸನೋಡು ರಂಗನು ಅವ
ತಾನಾಗಿ ಬೆನ್ನಬಿಡ ನಮ್ಮನು
ಏನಾದರೂ ಅಗಲದೆಲೆ ನಮ್ಮ
ಮಾನಾಭಿಮಾನದೊಡೆಯ ಶ್ರೀಕೃಷ್ಣ || ಎಂದು.

ಅನಿಮಿತ್ತ ಬಂಧುವೆನಿಸಿದ ಭಗವಂತನು ನಿತ್ಯವೂ ರಕ್ಷಕನಾಗಿದ್ದಾನೆ. ಹರಿ ಇಚ್ಛೆಯಿಂದ ಸಂಕಷ್ಟಗಳು ಸಂಭವಿಸುತ್ತವೆ. ಹರಿ ಇಚ್ಛೆಯಿಂದಲೇ ಇಷ್ಟಾರ್ಥಗಳು ಕೈಗೂಡುತ್ತವೆ. ಹೀಗೆ ತಿಳಿದು ಭಕ್ತವತ್ಸಲನನ್ನು ಭಕ್ತಿಯಿಂದ ಭಜಿಸಿ ಅವನ ಇಚ್ಛೆಯಿಂದಲೇ ಮಹಾಕ್ಲೇಶಗಳನ್ನು ದಾಟಬೇಕು.

8. ಶಕ್ತಿದಾತಾ ಭಗವಂತ

ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿ ಈ ಎರಡನ್ನು ದೇವತೆಗಳಿಗೂ ಹೊಂದಲಾಗದು. ಎನ್ನುವದನ್ನು ಮುಂದಿನ ಮಾತುಗಳಿಂದ ಸಮರ್ಥಿಸುತ್ತಾರೆ.

ತನ್ನ ಇಷ್ಟ ತನ್ನಿಂದ ಪಡೆದುಕೊಳ್ಳಲಾಗದು ಎಂಬುದಕ್ಕೆ ರುದ್ರದೇವರೇ ಸ್ಪಷ್ಟಸಾಕ್ಷೀ. ಚತುರಾಸ್ಯನ ಭ್ರೂಲತೆಗಳಿಂದ ಉಮಾಮನೋಹರ ಉದಿಸಿ ಬಂದ. ಹುಟ್ಟಿದ ರುದ್ರಗೆ ತೊಟ್ಟುಕೊಳ್ಳಲು ವಸ್ತ್ರವಿಲ್ಲ. ಇರಲು ಸ್ಥಾನವಿಲ್ಲ. ಇವುಗಳನ್ನು ತನ್ನಿಂದ ಪಡೆಯಲಾಗುತ್ತಿಲ್ಲ. ಬಯಕೆಯ ಬೆನ್ನೇರಿ ರೋದಿಸಿದ ಶಿವನಿಗೆ 'ರುದ್ರ' ಎಂಬ ಹೆಸರು ಬಂತು. ಇದನ್ನೇ ಶ್ರುತಿಯು ಸಾಧಿಸಿತು-

'ಸೋऽರೋದೀತ್ ಯದರೋದೀತ್ ತದ್ ರುದ್ರಸ್ಯ ರುದ್ರತ್ವಂ' ಎಂದು.

ಈ ಶ್ರುತಿಗೆ ಸಂವಾದಿಯಾಗಿ ಭಾಗವತದ ತೃತೀಯಸ್ಕಂಧದ ಹದಿಮೂರನೇ ಅಧ್ಯಾಯವನ್ನೂ ನೋಡಬಹುದು.

'ಸ ವೈರುರೋದ ದೇವಾನಾಂ ಪೂರ್ವಜೋ ಭಗವಾನ್ ಭವಃ ।
ನಾಮಾನಿ ಕುರು ಮೇ ಧಾತಃ ಸ್ಥಾನಾನಿ ಚ ಜಗದ್ಗುರೋ ॥'
ಇತಿ ತಸ್ಯ ವಚಃ ಪಾದ್ಮೋ ಭಗವಾನ್ ಪರಿಪಾಲಯನ್ ।
ಅಭ್ಯಧಾದ್ ಭದ್ರಯಾ ವಾಚಾ ಮಾ ರೋದೀಸ್ತತ್ ಕರೋಮಿ ತೇ ।
ಯದರೋದೀಃ ಸುರಶ್ರೇಷ್ಠ ಸೋದ್ವೇಗ ಇವ ಬಾಲಕಃ ।
ತತಸ್ತ್ವಾಮಭಿಧಾಸ್ಯಂತಿ ನಾಮ್ನಾ ರುದ್ರ ಇತಿ ಪ್ರಜಾಃ ॥
ಹೃದಿಂದ್ರಿಯಾಣ್ಯಸುರ್ವ್ಯೋಮ ವಾಯುರಗ್ನಿರ್ಜಲಂ ಮಹೀ ।
ಸೂರ್ಯಶ್ಚಂದ್ರಸ್ತಪಶ್ಚೈವ ಸ್ಥಾನಾನ್ಯೇಕಾದಶಾನಿ ಭೋ ॥
ಮನ್ಯುರ್ಮನುರ್ಮಹಾನಾಸೋ ಮಹಾನ್ ಶಿವ ಋತಧ್ವಜಃ ।
ಮರುರೇತಾ ಭವಃ ಕಾಲೋ ವಾಮದೇವೋ ಧೃತವ್ರತಃ ॥

ಭಾಗವತದ ನುಡಿಗಳನ್ನು ಹೀಗೆ ವಿವರಿಸಬಹುದು -

ಪಶುಪತಿಯು ಸುರಪತಿಗಿಂತಲೂ ಮೊದಲು ಕ್ಷಿತಿಯೊಳುದಿಸಿದ. ಬೆತ್ತಲಾಗಿ ಬಂದ ದಿಗಂಬರ ತನ್ನ ಕೊರತೆಗಳನ್ನು ನೀಗಿಸಿಕೊಳ್ಳಲು ಬ್ರಹ್ಮನ ಬಳಿ ಬಿನ್ನೈಸಿಕೊಂಡ 'ತಂದೆಯೇ! ನನಗೆ ನಾಮಕರಣ ಮಾಡು. ಸ್ಥಾನನೀಡು' ಎಂದು ರೋದಿಸಿದ ಮಗನಿಗೆ ಪರಬ್ರಹ್ಮನು ರುದ್ರನೆಂದೇ ಕರೆದ. ಏಕಾದಶಸ್ಥಾನಗಳೆನಿಸಿದ ಮನಸ್ಸು, ಇಂದ್ರಿಯಗಳು, ಭೂತಾಕಾಶ, ಪ್ರಾಣ, ವಾಯು, ಅಗ್ನಿ, ಜಲ, ಪೃಥಿವೀ, ಸೂರ್ಯ, ಚಂದ್ರ ತಪಸ್ಸು ಗಳಿಗೆ ನಿಯಾಮಕನನ್ನಾಗಿ ಮಾಡಿದ. ಜೊತೆಗೆ ಹನ್ನೊಂದು ನಾಮಾಂತರಗಳನ್ನು ಜೋಡಿಸಿದ ಮನ್ಯು, ಮನು, ಮಹಾನಾಸ, ಮಹಾದೇವ, ಶಿವ, ಋತಧ್ವಜ, ಮರುರೇತಸ್, ಭವ, ಕಾಲ, ವಾಮದೇವ, ಧೃತವ್ರತ ಎಂಬ ನಾಮಗಳಿಂದ ಪ್ರಸಿದ್ಧಿಗೊಳಿಸಿದ.

ಹೀಗೆ 'ರುದ್ರ' ಎಂಬ ಹೆಸರೇ ಶಿವನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ರುದ್ರನ ಕೊರತೆಗಳ ಜೊತೆಗೆ ಅವನ ಅಸ್ವಾತಂತ್ರ್ಯವನ್ನು ಸ್ಥಿರಗೊಳಿಸುತ್ತಿದೆ.

ಇಲ್ಲಿ ತಿಳಿಯಬೇಕಾದ ಮತ್ತೊಂದು ಸಂಗತಿಯು ಇದೆ. ರುದ್ರ ದೇವರಿಗೆ ಬ್ರಹ್ಮದೇವ ಕರುಣಿಸಿದ ಸ್ಥಾನ, ಮಾನ, ನಾಮಗಳೂ ಹರಿಯ ಕರುಣಾಬಲದಿಂದಲೇ. ಇದನ್ನು ಶ್ರೀಮದಾಚಾರ್ಯರು ಸೂತ್ರಭಾಷ್ಯದಲ್ಲಿ ಸ್ಪಷ್ಟಪಡಿಸಿರುವರು.

ಚತುರ್ಮುಖಃ ಶತಾನಂದೋ ಬ್ರಹ್ಮಣಃ ಪದ್ಮಭೂರಿತಿ ।
ಉಗ್ರೋ ಭಸ್ಮಧರೋ ನಗ್ನಃ ಕಪಾಲೀತಿ ಶಿವಸ್ಯಚ ॥
ವಿಶೇಷನಾಮಾನಿ ದದೌ ಸ್ವಕೀಯಾನ್ಯಪಿ ಕೇಶವಃ ॥

(ಬ್ರಾಹ್ಮ ಪುರಾಣ)

ಚತುರ್ಮುಖ, ಶತಾನಂದ, ಪದ್ಮಭೂ, ಎಂಬ ನಾಮಗಳು ಭಗವಂತನ ನಾಮಗಳೇ, ಬ್ರಹ್ಮದೇವರಿಗೆ ತಾನೇ ಕರುಣೆಯಿಂದ ಕೊಟ್ಟನಾಮಗಳಿವು.

ಉಗ್ರ, ಭಸ್ಮಧರ, ನಗ್ನ, ಕಪಾಲೀ, ಎಂಬ ತನ್ನ ನಾಮಗಳನ್ನು ರುದ್ರನಿಗೆ ಕರುಣೆಯಿಂದ ಕೊಟ್ಟ. ಒಟ್ಟಿನಲ್ಲಿ ಸಕಲ ಚೇತನಾತೇನಾತ್ಮಕ ಪ್ರಪಂಚವು ಹರಿಕರುಣೆಯ ಜಲಧಾರೆಯಿಂದ ಚೈತನ್ಯ ತುಂಬಿಸಿಕೊಂಡಿದೆ.

ರುದ್ರದೇವರ ಈ ಚರಿತ್ರೆಯನ್ನು ಕಂಡಾಗ ರುದ್ರದೇವರಲ್ಲಿ ಅಸ್ವಾಂತತ್ರ್ಯ, ಅಲ್ಪತೆ, ಲೋಭ, ಆಸೆಗಳು ಕಾಣಿಸುತ್ತವೆ. ಈ ಕೋಪಗಳಿಂದ ಯುಕ್ತನಾದವಗೆ ತನ್ನ ಸಹಜ ಶಕ್ತಿಯಿಂದ ದುಃಖವನ್ನು ಪರಿಹರಿಸಿಕೊಳ್ಳಲೂ ಆಗದು.

ಇದನ್ನು ಶ್ರೀವಾದಿರಾಜರು ಸರಸಭಾರತೀವಿಲಾಸದಲ್ಲಿ ಸಮರ್ಥಿಸುತ್ತಾರೆ-

'ಸ ವೈ ರುರೋದ ದೇವಾನಾಂ ಪೂರ್ವಜೋ ಭಗವಾನ್ ಭವಃ ।
ನಾಮಾನಿ ಕುರು ಮೇ ಧಾತಃ ಸ್ಥಾನಾನಿ ಚ ಜಗದ್ಗುರೋ ॥
ಇತಿ ಭಾಗವತೇ ಸ್ಪಷ್ಟಮುಕ್ತತ್ವಾದ್ ಧನಲೋಭತಃ ।
ಯದ್ ರುರೋದ ತತೋ ರುದ್ರೋ ಜನ್ಮಪ್ರಭೃತಿ ಲೋಭವಾನ್ ॥
ಮತ್ಸರಾತ್ ಕುತ್ಸಿತಮತೇರ್ಲೋಭಾದ್ ರೋದನಕಾರಿಣಃ ।
ಕ್ರೋಧಾದ್ ದಕ್ಷಶಿರಶ್ಛೇತ್ತುಃ ಕಾಮಾದ್ ಗೌರ್ಯರ್ಧದೇಹಿನಃ ॥
.............॥
ಅಸಮಂಜಸತಾ ತ್ವಸ್ಯ ಕಿಂ ವಾಚ್ಯಾಶೋಚ್ಯಕರ್ಮಣಃ ॥

ಮತ್ಸರದಿಂದ ಕುತ್ಸಿತಮತಿಯಾದ, ಸ್ಥಾನದ ಆಸೆಯಿಂದ ಕಾಡಿ ಬೇಡಿ

ರೋದಿಸಿದ, ಕ್ರೋಧದಿಂದ ದಕ್ಷನ ವಕ್ಷಃಸ್ಥಳವನ್ನೇರಿ ಕತ್ತನ್ನು ಕತ್ತರಿಸಿದ, ಕಾಮದಿಂದ ಗೌರಿಯ ಅರ್ಧದೇಹವನ್ನೇ ಕದ್ದು ಅರ್ಧನಾರೀಶ್ವರನೆನಿಸಿದ. ದಯನೀಯ ಸ್ಥಿತಿಗೆ ಸಿಕ್ಕಿಬಿದ್ದ ರುದ್ರನ ಅಸಮಂಜಸತೆ ಎಂಬ ಕೋಪವನ್ನು ಮತ್ತೂ ಬಣ್ಣಿಸಬೇಕೇ ? ಎನ್ನುತ್ತಾರೆ.

ಈ ಮಾತುಗಳಿಗೆಲ್ಲ ಶ್ರೀವ್ಯಾಸರ - 'ಪತ್ಯುರಸಾಮಂಜಸ್ಯಾತ್' ಎಂಬ ಸೂತ್ರವನ್ನೇ ಆಧಾರವಾಗಿಟ್ಟುಕೊಂಡಿದ್ದಾರೆ.

ರುದ್ರದೇವರ ಸ್ಥಿತಿಯೇ ಇಷ್ಟು ನೀಚವಾಗಿರಲು, ನಿರಂತರ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ನಾರುವ ಕೆರೆಗಳಲ್ಲಿ ಮುಳುಗೇಳುತ್ತಲಿರುವ ಹೀನ ಮಾನವರ ಸ್ಥಿತಿಯನ್ನು ಬಣ್ಣಿಸಬೇಕೆ. ಸುಖದುಃಖಗಳ ಪ್ರತ್ಯೇಕ ಹೊಣೆಗಾರಿಕೆ ಇಲ್ಲವೆಂದು ಸಮರ್ಥಿಸಬೇಕೇ ಎಂಬುದು ಶ್ರೀಮದ್ ವಾದಿರಾಜರ ಕಾಕುಧ್ವನಿ.

ಅವಿಚ್ಛಿನ್ನಭಕ್ತರಲ್ಲಿ ಉತ್ತಮರಾದ ರುದ್ರ ದೇವರ ಸ್ಥಿತಿಯನ್ನು ಇಷ್ಟು ಸುಂದರವಾಗಿ ಚಿತ್ರಿಸಿದ ಬಳಿಕ ಅಲ್ಪಮತಿಯ ಮಾನವರೆಲ್ಲರೂ ನಿಶ್ಚಿತವಾಗಿಯೂ ಆತ್ಮಾವಲೋಕನವನ್ನು ಮಾಡಿಕೊಂಡು ಶ್ರೀಹರಿಯನ್ನೇ ದೃಢವಾಗಿ ನಂಬುತ್ತಾರೆಂಬುದು ಶ್ರೀವಾದಿರಾಜರ ಹಾರ್ದ.

ಇಷ್ಟು ತಿಳಿದರೂ ಇಲ್ಲಿ ಸಂಶಯಕ್ಕೊಂದು ಅವಕಾಶವಿದೆ. ರುದ್ರದೇವರಿಗೆ ಬ್ರಹ್ಮದೇವರಿಗೆ ಹೆಸರು, ಸ್ಥಾನಗಳನ್ನು ಕೊಟ್ಟ ಭಗವಂತನೂ ಮತ್ತೊಬ್ಬರಿಂದಲೇ ಏಕೆ ಬದುಕಿರಬಾರದು ? ಹರಿಯೂ ಸುಖದುಃಖಗಳ ವಿಷಯದಲ್ಲಿ ನಮ್ಮಂತೆ ಅಸ್ವತಂತ್ರನಾದರೆ ಸುಖದುಃಖಗಳಿಗೆ ನೇತಾರರಾದವರು ಒಬ್ಬರೂ ಇಲ್ಲವೆಂದಾಗುತ್ತದೆಯಲ್ಲ.' ಎಂದರೆ ಅದಕ್ಕೆ ಶ್ರುತಿಯಿಂದ ಉತ್ತರಿಸುತ್ತಾರೆ -

'ನರ್ತೇ ತ್ವತ್ ಕ್ರಿಯತೇ ಕಿಂಚಿದಿತ್ಯಾಹಾಸ್ಯಾಚ್ಯುತಂ ಪ್ರಭುಮ್ ॥

ಎಂದು ಶ್ರುತಿವಾಕ್ಯಗಳೆಲ್ಲವೂ ಶ್ರೀಹರಿಗೆ ನಿರವಧಿಕ ಸ್ವಾತಂತ್ರ್ಯವನ್ನು ಘೋಷಿಸುತ್ತಿವೆ. ಯಾರು ನಿವಧಿಕ ಸ್ವತಂತ್ರನೋ ಅವನು ಸುಖದುಃಖಗಳ ನಿಯಾಮಕನು. ಈಗ ರಾಜರು ಸೂಚಿಸಿದ ಶ್ರುತಿಯನ್ನೇ ನೋಡೋಣ-

'ನಿಷುಸೀದ ಗಣಪತೇ ಗಣೇಷು ತ್ವಾಮಾಹುರ್ವಿಪ್ರತಮಂ ಕವೀನಾಮ್ ।

ನ ಋತೇ ತ್ವತ್ ಕ್ರಿಯತೇ ಕಿಂಚನಾರೇ ಮಹಾಮರ್ಕಂ ಮಘವನ್ ಚಿತ್ರಮರ್ಚ ॥'

'ಸರ್ವೇಂದ್ರೀಯಗಳ ನೇತಾರನಾದ ಶ್ರೀಹರಿಯೇ! ಭಕುತಿಯಿಂದ ಭಜಿಸುವ ನಿನ್ನ ಭಕ್ತರ ಇಂದ್ರಿಯಗಳಲ್ಲಿ ಚೆನ್ನಾಗಿ ಸನ್ನಿಹಿತನಾಗು. ನೀನು ಪರಮಾನಂದ ಸ್ವರೂಪನಾಗಿರುವಿ. ಆಶ್ಚರ್ಯಕರನೂ ಪೂಜ್ಯನೂ ಆಗಿರುವಿ. ನಿನ್ನ ಹೊರತಾಗಿ ಮತ್ತ್ಯಾರೂ ಇಂತಹ ಸ್ಥಾನವನ್ನಲಂಕರಿಸಿಲ್ಲ. ನೀನೇ ಪೂಜಕರಲ್ಲಿ ನಿಂತು ನಿನ್ನನ್ನು ಪೂಜಿಸಿಕೋ. ಈ ಮೂಲಕ ಅಸ್ವತಂತ್ರ ಪೂಜಕರಾದ ಜೀವರೆಲ್ಲರಿಗೂ ನಿನ್ನ ಅನನ್ಯವಾತ್ಸಲ್ಯಧಾರೆಯನ್ನು ಹರಿಸಿ ಉದ್ಧರಿಸು.'

ಹೀಗೆ ಶ್ರುತಿಯು ಲಕುಮಿವಲ್ಲಭನ ಇಚ್ಛೆಇಲ್ಲದೆ ಯಾವ ಕಾಲದೇಶಗಳಲ್ಲಿಯೂ ಒಂದು ಕ್ಷುಲ್ಲಕವಾದ ಹುಲ್ಲೂ ಅಲ್ಲಾಡದೆಂದು ತಿಳಿಸುತ್ತದೆ.

ಇಂತಹ ಸುಂದರ ಸತ್ಯವನ್ನು ಶ್ರುತಿಮಾತೆಯೂ ಕರುಣೆಯಿಂದ ಬಯಲಿಗೆಳೆದು ನಗ್ನಗೊಳಿಸಿದರೂ ಕಣ್ಪಟ್ಟಿಕಟ್ಟಿಕೊಂಡು ಭವಕಲ್ಲಿಗೆ ಢಿಕ್ಕಿ ಹೊಡೆಯುವ ಅಂಧರಿಗೇನೆಂದು ಹೇಳಬೇಕು. ಸುಖದುಃಖಗಳಿಗೆ ತಮ್ಮ ಹೊಣೆಗಾರಿಕೆಯಿದೆ ಎಂದು ಅಜ್ಞಾನ ಅಹಂಕಾರದಿಂದ ವರ್ತಿಸುತ್ತಿದ್ದೇವೆ. ಚಿಂತೆಯ ಸಂತೆಯಲ್ಲಿ ಚಿತ್ತವನ್ನು ಮಾರಿಕೊಂಡಿದ್ದೇವೆ. ಇಷ್ಟೆಲ್ಲ ಹಚ್ಚಿಕೊಂಡು ಬಲಿಯಾಗುವ ಬದಲು ಅಚ್ಯುತನೊಬ್ಬನನ್ನೇ ನಿರ್ಮಲ ಮನಸ್ಸಿನಿಂದ ಚಿಂತಿಸುತ್ತಾ ಸಾಗಿದರೆ ಭವದ ಚಿಂತೆಯೇ ಪರಿಹಾರಾಗುತ್ತದಲ್ಲವೇ.

9. ಹರಿಯು ಇಷ್ಟನಾದಲ್ಲಿ ಕಷ್ಟಗಳಿಲ್ಲ

ಅಲ್ಲ! ಸುಖದುಃಖಗಳ ನೇತಾರರೂ ನಾವಲ್ಲ. ಹರಿಯೆ ನೇತಾರನೆಂಬುದು ಸರಿಯೆ. ಆದರೆ ಹರಿಯನ್ನು ಮೊರೆಹೊಕ್ಕರೆ ನಮ್ಮ ಕಷ್ಟಪರಿಹಾರ ಆಗಿಯೇ ತೀರುತ್ತದೆ, ಎನ್ನಲು ಮನಸ್ಸು ಒಪ್ಪುತ್ತಿಲ್ಲ. ನಂಬಿದ ಭಕುತರಿಗೆ ಇಂಬುನೀಡಿದ್ದಾನೆಂಬಲು ಪ್ರಬಲ ದೃಷ್ಟಾಂತಗಳುಂಟೇ ?

'ಉಂಟು' ಎನ್ನುತ್ತಾರೆ ಶ್ರೀಮದ್ವಾದಿರಾಜರು. ಪ್ರಾಮಾಣಿಕರಾದ ಪಾಂಡವರಿಗೆ ಕಷ್ಟಕೊಡಬೇಕೆಂದೇ ಹುಟ್ಟಿಕೊಂಡ ದುಷ್ಟರು ದುರ್ಯೋಧನಾದಿಗಳು. ದುರ್ಯೋಧನ ಹುಟ್ಟಿನಿಂದಲೇ ಪಾಂಡವರ ಹುಟ್ಟನ್ನಡಗಿಸಬೇಕೆಂದು ಪ್ರಯತ್ನಪಟ್ಟ. ವಿನಾಶವ ಬಯಸಿ ವಿಷಸೇರಿಸಿ ಅನ್ನ ಉಣಿಸಿದ. ಅಸುವ ಹೊಡೆಯುವೆನೆಂದು ಸಿಂಧುವಿನಲ್ಲಿ ಎಸೆದ. ಕರಕಲು ಮಾಡುವೆನೆಂದು ಅರಗಿನ ಮನೆಯಲ್ಲಿರಿಸಿದ.

ಅಕ್ಷಕಿತವರಿಂದ ಸೋಲಿಸಿ ರಾಜ್ಯ ಕಸಿದುಕೊಂಡು ಕಾಡಿಗಟ್ಟಿದ. ಆದರೆ ಹರಿಕರುಣೆಯ ಬಲದಿಂದ ಪುಷ್ಟರಾದ ಪಾಂಡವರು ಕುಷ್ಟರು ಕೊಟ್ಟ ಕಷ್ಟಗಳನ್ನೆಲ್ಲ ಮೆಟ್ಟಿನಿಂತರು.

ಕೊನೆಗೆ ಕಾಡಿನಲ್ಲಿಯೇ ಪಾಂಡವರ ಜೀವನದ ಗಡಿಯನ್ನು ಮುಟ್ಟಿಸಬೇಕೆಂದು ದುಷ್ಟದುರ್ಯೋಧನಾದಿಗಳು ಆಗಮಿಸಿದರು. ಇವರಿಗೆ ಅರ್ಧ ಸಾತ್ವಿಕರಾದ ಕರ್ಣಧೃತರಾಷ್ಟ್ರಾದಿಗಳ ಸಹಾಯ ಬೇರೆ. ಆದರೇನಂತೆ ಹರಿಕರುಣೆಯ ನೆರಳಿನಲ್ಲಿ ಪಾಂಡವರು ಸಕಲ ಆಪತ್ತುಗಳನ್ನು ಪರಿಹರಿಸಿಕೊಂಡರು. ಪ್ರತಿನಿತ್ಯವೂ ರಾಜನೆನಿಸಿದ ದುರ್ಯೋಧನನಿಗೂ ಇಲ್ಲದ ಮೃಷ್ಟಾನ್ನವನ್ನು ಸುವರ್ಣದ ತಟ್ಟೆಗಳಲ್ಲುಂಡರು. ತನು-ಮನಗಳ ನೈರ್ಮಲ್ಯವನ್ನು ಉಳಿಸಿ ಬೆಳೆಸಿಕೊಂಡರು. ಸಾವಿರಾರು ಬ್ರಹ್ಮನಿಷ್ಠರಿಗೆ ಅನ್ನದಾತರಾಗಿ ದೇಹ ಸಂರಕ್ಷಿಸಿದರು. ವೇದ ವಿದ್ಯೆಯಿಂದ ದೇಶವನ್ನು ಬೆಳೆಸಿದರು. ಹರಿಕರುಣೆಗೆ ಇದಕ್ಕೆ ಮಿಗಿಲಾದ ಸಾಕ್ಷಿ ಬೇಕೆ ?

ಒಂದು ದಿನ ಕೌರವ ಪಾಂಡವರೆಲ್ಲರೂ ಸಾರ್ವಜನಿಕ-ರೊಟ್ಟಿಗೆ ನೆರೆದ ಸಭೆ. ತತ್ವಜ್ಞಾನಿಗಳೆಲ್ಲ ಬೀಡುಬಿಟ್ಟ ಸಭೆ. ನೋಡುವ ಮಂದಿಗೆಲ್ಲ ಮಾನವೀಯ ಮೌಲ್ಯಗಳನ್ನೆಲ್ಲ ಉತ್ತುಂಗಶಿಖರಕ್ಕೇರಿಸುವ ಸಭೆ ಎಂದು ತೋರುವ ಸಭೆ. ಆದರೇನಂತೆ ದುಶ್ಯಾಸನನು ಏಕವಸ್ತ್ರದಲ್ಲಿನ ಸೈರಂಧ್ರಿಯನ್ನು ಸಭೆಯ ಮಧ್ಯಕ್ಕೆ ಸೆಳೆದು ತಂದು ವಿವಸ್ತ್ರಳನ್ನಾಗಿಸಲು ಯತ್ನಿಸಿದ.

ಪಾರ್ಥನ ಸತಿಯ ಸ್ಥಿತಿ ಚಿಂತಾಜನಕವಾಯಿತು. ಅತ್ಯಂತ ದುಃಖಸಂತಪ್ತಳಾಗಿ ಭೀಷ್ಮದ್ರೋಣಾದಿಗಳಲ್ಲಿ ಮೊರೆ ಇಟ್ಟಳು. ನೆರೆದ ವಿದ್ವಜ್ಜನರೆಲ್ಲ ಗರಬಡಿದವರಂತೆ ಕುಳಿತರು. ವಿದುರನ ನೀತಿಗಳು ಆಕಾಶದ ಖಡ್ಗಪ್ರಹಾರದಂತಾಯಿತು. ವೀರಕ್ಷತ್ರಿಯ ಮಾತೆಯ ಮಾನ ಬಯಲಿನ ಮಧ್ಯೆ ಬೀದಿಪಾಲಾಗುತ್ತಿದ್ದರೂ ಎದುರಿಸುವ ಎದೆಗಾರಿಕೆ ಯಾರಿಗೂ ಬರಲಿಲ್ಲ. ಎದೆಗಾರಿಕೆ ಇದ್ದ ಸಿದ್ಧಪುರುಷ ಭೀಮನೂ ಸಹಿಸಿಕೊಂಡ. ಏಕೆಂದರೆ ಭೀಮನ ಭಾಗವತಧರ್ಮಕ್ಕೆ ಅದು ಹರಿಸಂಕಲ್ಪವೆಂಬ ಭಾಗವತ ಧರ್ಮದ ತಡೆಬಂತು- ಇದೊಂದು ಅದ್ಭುತ ಸಂಗತಿ ಎಂದು ಶ್ರೀ ವಾದಿರಾಜರೇ ಸರಸಭಾರತೀವಿಲಾಸದಲ್ಲಿ ಪ್ರತಿಪಾದಿಸುತ್ತಾರೆ-

ಇದು ತು ಮಹದಾಶ್ಚರ್ಯಂ
ಸಭಾಮಧ್ಯೇ ವೃಕೋಧರಃ ।
ಸ್ವಭಾರ್ಯಾಯೈ ದ್ರುಹ್ಯತೋऽಪಿ
ಸೇಹೇ ಸ್ನೇಹೇನ ಕೇಶವೇ॥ *(ಸ.ಭಾ.ವಿ.6-19)*

ತನ್ನ ಸತೀ ದ್ರೌಪದಿಯ ಜಡೆಯನ್ನು ಹಿಡಿದು ಸೆಳೆದರೂ ಭೀಮ ದ್ರೋಹಿಗಳ ಅಸುವನ್ನು ಅಪಹರಿಸಲಿಲ್ಲ ಎಂಬುದು ಅತ್ಯಂತ ಆಶ್ಚರ್ಯಕರ ಸಂಗತಿ. ಆದರೆ ಇದಕ್ಕೆ ಕಾರಣವಿಷ್ಟೇ. ಭೀಮ ದುರಾತ್ಮರನ್ನು ಧರೆಗೆ ವರೆಸುವ ಮುನ್ನ ಹರಿಸಂಕಲ್ಪ ನೋಡಿದ. ಹರಿಸಂಕಲ್ಪದಲ್ಲಿ ಸಂಹರಿಸಬೇಕೆಂದಿರಲಿಲ್ಲ. ಹರಿಭಕ್ತನಾದ ಭೀಮ ಇದನ್ನರಿತು ಮೌನ ಧರಿಸಿದ. ಭೀಮನ ಮೌನಕ್ಕೆ ಕಾರಣ ಹರಿಯಲ್ಲಿನ ಭಕ್ತಿ ಗೌರವಗಳೇ ಹೊರತು ಅಸಾಮರ್ಥ್ಯವಲ್ಲ.

ಒಟ್ಟಿನಲ್ಲಿ ಏನೇ ಆಗಲಿ, ದ್ರೌಪದಿಯ ಮಾನಸಂರಕ್ಷಣೆಗೆ ಯಾರೂ ಮುಂದಾಗಲಿಲ್ಲ. ಹತ್ತಿರದಲ್ಲಿದ್ದರೂ ಜೀವಚ್ಛವದಂತಿರುವ ಜನರನ್ನು ಕಂಡು ದ್ರೌಪದಿ ಅನನ್ಯಗತಿ ಶ್ರೀಪತಿಯೇ ಎಂದು ಅನನ್ಯಮನಸ್ಸಿನಿಂದ 'ಹಾ ಕೃಷ್ಣ ದ್ವಾರಕಾವಾಸಿನ್ ಕ್ವಾಸಿ ಯಾದವನಂದನ' ಮುಂತಾದ ಅನನ್ಯಶರಣಾಗತಿಸ್ತುತಿಗಳಿಂದ ಪ್ರಾರ್ಥಿಸಿದಳು. ತಕ್ಷಣ ಶ್ರೀಹರಿ ಆಕೆಯ ದೇಹದಲ್ಲಿ ಬಲು ಬೆಲೆ ಬಾಳುವ ಅಕ್ಷಯವಾದ ಸೀರೆಯ ರಾಶಿಗಳನ್ನು ಸೃಷ್ಟಿಸಿ ಅನುಗ್ರಹಿಸಿದ. ಈ ವಿಷಯವನ್ನು

'ನಾನಾರಾಗವಿರಾಗಾಣಿ ವಸನಾನಿ ಯಥಾಪ್ರಭೋ ।
ಪ್ರಾದುರ್ಭವಂತಿ ಶತಶೋ ಧರ್ಮಸ್ಯ ಪರಿಪಾಲನಾತ್ ॥
ತತೋ ಹಲಹಲಾಶಬ್ದಸ್ತತ್ರಾಸೀದ್ ಘೋರದರ್ಶನಃ ।
ತದದ್ಭುತಮಿಮಂ ಲೋಕೇ ವೀಕ್ಷ್ಯ ಸರ್ವೇ ಮಹೀಭೃತಃ ॥'

ಮುಂತಾದ ಮಹಾಭಾರತದ ವಚನಗಳು, ದ್ರೌಪದಿಯ ದಿವ್ಯವಾದ ನಾನಾವರ್ಣದ ದುಕೂಲಗಳು ಶೈಲಸದೃಶವಾಗಿ ಸೃಷ್ಟಿಗೊಂಡಿದ್ದವೆಂಬುದನ್ನು ಅಲ್ಲಿದ್ದ ಸಭಾಸದರೆಲ್ಲರೂ ಅತ್ಯಾಶ್ಚರ್ಯದಿಂದ ಕೃಷ್ಣನ ಮಹಿಮೆಯ ಬಗ್ಗೆ ಉದ್ಗಾರ ವ್ಯಕ್ತಪಡಿಸಿದುದನ್ನು ವಿವರಿಸುತ್ತವೆ. ದಯಾಸಾಗರನೆನಿಸಿದ ದಾಮೋದರನ ಕರುಣೆಗೆ ಪಾರ ಉಂಟೆ ?

ಇಲ್ಲೊಂದು ಸ್ವಾರಸ್ಯವನ್ನು ಗಮನಿಸಬೇಕು. ಶ್ರೀಮದ್ ವಾದಿರಾಜರು **'ಆರ್ತಾಂ ಪಾರ್ಥಸತೀಂ' ಕಃ ಕಷ್ಟಾತ್ ಪ್ರಾಗ್ ವ್ಯಮೋಚಯತ್?'** 'ದುಃಖಿತಳಾದ ಪಾರ್ಥನ ಸತಿಯನ್ನು ಕಷ್ಟದಿಂದ ಪಾರು ಮಾಡಿದವರಾರು ?' ಎಂದು ಪ್ರಶ್ನಿಸಿದ್ದಾರೆ.

ಇಲ್ಲಿ 'ಆರ್ತಾಂ ಪಾರ್ಥಸತೀಂ' ಎಂಬ ವಿಶೇಷಣಗಳು 'ದುಃಖ ಆದದ್ದು, ಇಂದ್ರನ ಪತ್ನಿಗೆ' ಎಂದು ತಿಳಿಸುತ್ತಿವೆ. ದ್ರೌಪದಿಗೆ ದುಃಖ ಆದದ್ದು ಎಂದು ಭಾವಿಸಿದರೆ

ದ್ರೌಪದಿಗೆ ತುಂಬಾ ಅಜ್ಞಾನವಿದೆ ಎಂದು ಹೇಳಿದಂತೆ. ಏಕೆಂದರೆ ದುಃಖ ಎನ್ನುವುದು ಅಜ್ಞಾನದ ಮರಿ, ದ್ರೌಪದಿಗೆ ಅಜ್ಞಾನವು ಶಾಸ್ತ್ರ ಸಮ್ಮತವಲ್ಲ, ಮತ್ತು ದುರ್ಯೋಧನಾದಿಗಳಿಂದ ದುಃಖ ಅನುಭವಿಸುವಷ್ಟು ಪ್ರಾರಬ್ಧ ದ್ರೌಪದಿಗೆ ಇಲ್ಲವೇ ಇಲ್ಲ. ಶಚಿ ಶ್ಯಾಮಲೆಯರಿಗೆ ಶಾಪಕಾರಣವಿದೆ.

ಭರತನ ಅರ್ಧಾಂಗಿಯನನು ಮುಟ್ಟುವ ಸಾಮರ್ಥ್ಯ ದುಷ್ಟರಿಗೆ ಖಂಡಿತಾ ಇಲ್ಲವೆಂದು ವಾದಿರಾಜರೇ ಸಮರ್ಥಿಸಿದ್ದಾರೆ -

'ವಾತಾದ್ ಭೀತಾಽಸುರಾ ವಾಯೋಃ ಪತ್ನೀಂ ಪತ್ಯಂಕಗಾಂ ಸದಾ ||
ಯದ್ ದ್ರಷ್ಟುಮಪಿ ಶಕ್ತಾ ನೋ ಸಾಪಿ ಶುಕ್ಲಾ ಭವತ್ ತತಃ |
ಸ್ವಸ್ಪರ್ಶಂ ಸಹಮಾನೋಽಪಿ ಪತ್ನೀಸ್ಪರ್ಶಂ ಸಹೇತ ಕಃ ||'

(ಸ. ಭಾ. ವಿ. 5-32-33)

ವಾಯುದೇವರ ಗದಾಪ್ರಹಾರದಿಂದ ಹೆದರಿದ ಅಸುರರು ಅವನ ತೊಡೆಯನ್ನೇರಿದ ಭಾರತಿಯನ್ನು ನೋಡಲೂ ಕೂಡ ಶಕ್ತರಾಗುವುದಿಲ್ಲ. ಆದ್ದರಿಂದ ಅವಳೂ ಶುಕ್ಲಳಾದಳು. ತನ್ನನ್ನೇ ಮುಟ್ಟಲು ಬಿಡದವ ತನ್ನ ಹೆಂಡತಿಯನ್ನು ಮುಟ್ಟಲು ಬಿಡುತ್ತಾನೆಯೋ ? ಖಂಡಿತಾ ಇಲ್ಲ.

'ಅತೋಽಭೂದ್ ಭಾರತೀ ಶುಕ್ಲತಮಾ ವೇದವಿದಾಂ ಮತೇ'

ಆದ್ದರಿಂದ ವೇದಬಲ್ಲವರ ಅಭಿಪ್ರಾಯದಂತೆ ಭಾರತೀ ದೇವಿಯೂ ಶುಕ್ಲತಮಳೇ (ಅತಿಪರಿಶುದ್ಧಳೇ) ಆದಳು. ಹೀಗೆ ಶ್ರೀ ವಾದಿರಾಜರ ಒಂದು ಸಣ್ಣ ವಾಕ್ಯದಲ್ಲಿಯೇ ವಿಶ್ವತೋಮುಖ ವ್ಯಾಖ್ಯಾನ ಅಡಗಿದೆ ಎಂಬುದನ್ನು ಅವರ ಮಾತುಗಳಿಂದಲೇ ತಿಳಿಯಬಹುದು.

ಹರಿಯು ಭಕ್ತರ ಕಷ್ಟವನ್ನು ಪರಿಹರಿಸುತ್ತಾನೆ ಎನ್ನಲೂ ಹರನೂ ದೃಷ್ಟಾಂತನಾಗಿದ್ದಾನೆ.

ಪುರಹರನನ್ನು ಭಸ್ಮಾಸುರನು ಭಕ್ತಿಯಿಂದ ಭಜಿಸಿದ. ಹರನು ಪ್ರತ್ಯಕ್ಷನಾಗಿ ವರಬೇಡು ಎಂದ. ಅಸುರನು ನನ್ನ ಕೈಗೆ ಭಸ್ಮ ಮಾಡುವ ಶಕ್ತಿ ನೀಡೆಂದ. ನೀಡಿದ. ಮೊದಲನೇ ಪ್ರಯೋಗ ಹರನ ಮೇಲೆ ನಡೆಸಿದ. ತಾನು ಕೊಟ್ಟ ವರವೇ ಹರಗೆ ಮುಳಿವಾಯಿತು. ದಾರಿಕಾಣದೆ ಪುರಹರ ಮುರಹರನನ್ನರಸಿ ಸಾಗಿದ. ಹರನ

ಸ್ಥಿತಿಯನ್ನರಿತ ಮುರಾರಿ ಅಸುರವರನನ್ನು ವಂಚಿಸಿ ಹರನನ್ನು ರಕ್ಷಿಸಿದ. ಹೀಗೆ ನೂರಾರು ಆಪತ್ತುಗಳಲ್ಲಿಯೂ ಬೆಂಬಿಡದೆ ರಕ್ಷಿಸುವ ಕರುಣಾಳುವೇ ಬಳಿ ಇದ್ದಾಗ ರಕ್ಷಿಪನೋ ಎಂಬ ಸಂಶಯ ಎಷ್ಟು ಸರಿ?

ವಿರೋಚನನ ತಂದೆಯಾದ ಪ್ರಹ್ಲಾದನು ನೂರೆಂಟು ಆಪತ್ತುಗಳನ್ನು ಹರಿಕರುಣೆ ಎಂಬ ನಾವೆಯಿಂದ ದಾಟಿದ. ಸಕಲ ಆಪತ್ತುಗಳಿಂದಲೂ ಮುಕ್ತನಾದ ಬಗೆಯನ್ನು ಹಿಂದೆಯೇ ನೋಡಿದ್ದೇವೆ.

10. 'ಶ್ರೀಕೃಷ್ಣನು ಸಖನಾಗಲಿ"

'ಜಗತ್ತಿನ ಭಯವನ್ನೆಲ್ಲ ಪರಿಹರಿಸುವವನು ಭಗವಂತ' ಎಂಬ ಜ್ಞಾನವಿದ್ದರೂ, 'ಜನರಿಂದ ನಮಗೆ ಒಳಿತು' ಎಂದು ಅವರ ಉಪಚಾರ ಪ್ರಶಂಸೆಗಳಲ್ಲಿ ನಿರತರಾಗಿದ್ದೇವೆ. 'ನನ್ನ ಮಿತ್ರರು ಇವರು' 'ನನ್ನ ಶತ್ರುಗಳಿವರು' ಎಂದು ವಿಭಜಿಸಿಕೊಂಡಿದ್ದೇವೆ. ಈ ಬುದ್ಧಿಭ್ರಮೆಯೆ ದುಃಖಕ್ಕೆ ಕಾರಣವಾಗುತ್ತದೆ. ಸಜ್ಜನರಿಗೆ ಮಿತ್ರನಾದ ಶ್ರೀಹರಿಯು, ಯಾರಿಗೆ ಮಿತ್ರನಾಗುತ್ತಾನೆಯೋ ಅವರಿಗೆ ಶತ್ರುಗಳೂ ಮಿತ್ರರಾಗುವರು. ದೈತ್ಯರ ಶತ್ರುವಾದ ಶ್ರೀಹರಿಯು, ಯಾರಿಗೆ ಶತ್ರುವಾಗುವನೋ ಅವರಿಗೆ ಮಿತ್ರರೂ ಶತ್ರುಗಳಾಗುವರು. ಆದ್ದರಿಂದ ಭಗವಂತನು ನಮಗೆ ಮಿತ್ರನಾಗಬೇಕು. ಲೋಕದ ಮಿತ್ರರು ಪ್ರತಿಯಾಗಿ ಬಯಸಿ ಮಿತ್ರತ್ವವನ್ನು ಊರ್ಜಿತಗೊಳಿಸಿಕೊಂಡರೆ ಇದಕ್ಕೆ ಅಪವಾದವಾಗಿ ಅನಿಮಿತ್ತ ಬಂಧು ಎನಿಸಿದ ಶ್ರೀಹರಿ ಸ್ವಾರ್ಥದ ಲೇಶವೂ ಇಲ್ಲದೆ ಉಪಕರಿಸುವ ಮಿತ್ರನೆನಿಸಿದ್ದಾನೆ. ಇಂತಹ ಮಿತ್ರನಿಗೆ ನಾವು ಕೊಡಬೇಕಾದ್ದೇನೂ ಇಲ್ಲ. ಹೃದಯದ ಪರಿಶುದ್ಧ ಭಾವನೆ ಒಂದು ಕೊಟ್ಟರೆ ಸಾಕು. ಇದನ್ನು ಅರಿಯದ ನಮ್ಮ ಸ್ಥಿತಿ ಹೇಗೆ ಸಾಗುತ್ತಿದೆ ಎಂದು ವಾದಿರಾಜರು ಹೇಳುತ್ತಾರೆ-

ಕಸ್ಯ ಕಸ್ಯ ಪ್ರಿಯಂ ಬ್ರೂಮಃ ಸ್ತುಮಃ ಕಂ ಕಂ ಪದೇ ಪದೇ |
ಕಸ್ಮೈ ಕಸ್ಮೈ ದಿಶಾಮೋಽರ್ಥಂ ಕಸ್ಮಾದ್ವಾಸ್ಮತ್ಪ್ರಯೋಜನಮ್ ||

'ಕಂಡ ಕಂಡವರಿಗೆ ಒಳ್ಳೆಯ ಮಾತನ್ನಾಡುತ್ತೇವೆ. ಹೆಜ್ಜೆ ಹೆಜ್ಜೆಗೂ ಪರಸ್ತುತಿಯಲ್ಲಿ ನಿರತರಾಗಿರುತ್ತೇವೆ. ಯಾರು ಯಾರಿಗೋ ಧನಸಹಾಯ ಮಾಡುತ್ತೇವೆ. ಜನರಿಂದ ನಮಗಾದ ಪ್ರಯೋಜನ ಏನು ? ನಮ್ಮೆಲ್ಲ ಮಾತು ಕೃತಿ ಮನಸ್ಸುಗಳ ವರ್ತನೆಗೆ ಒಂದು ಗುರಿ ಬೇಕು. ಗುರಿಯಿಲ್ಲದ ಈ ಮೂರರ ಕೃತಿ ವ್ಯರ್ಥವೆ ಸರಿ. ಇಂದು ಒಬ್ಬನನ್ನು ಹೊಗಳುತ್ತೇವೆ. ನಾಳೆ ನಮ್ಮನ್ನವನು ಮರೆಯುತ್ತಾನೆ. ಇಂದು

ಉಪಕೃತನಾದವ ನಾಳೆದಿನ ಅಪಕಾರವನ್ನೇ ಮಾಡುತ್ತಾನೆ. ಮನುಜರ ರಜೋಬುದ್ಧಿಯ ವರ್ತನೆಯೇ ಹೀಗೆ. ಆದ್ದರಿಂದ ಎಂದೆಂದೂ ಮರೆಯದ ಶ್ರೀಹರಿಯನ್ನು ದಿನಕ್ಕೊಂದು ಬಾರಿಯಾದರೂ ಸರಿಯಾಗಿ ನೆನೆಯಬೇಕೆಂಬ ಎಚ್ಚರವಿರಬೇಕು. ಹರಿ-ವಾಯುಗುರುಗಳ ಚಿಂತನೆಯ ಅಡಿಯಲ್ಲಿ ಬದುಕಿನ ಅಡಿಗಳನ್ನು ಮುಂದಿಡಬೇಕು.

ಜೀವನದಲ್ಲಿ ಹರಿ ಪ್ರಾಣರ ಚಿಂತನೆ, ಅವರ ವಿಷಯಕ ಜ್ಞಾನಗೊಂಡಲ್ಲಿ ಜೀವನ ತ್ರಾಣ ನಿಶ್ಚಿತ. ಆದ್ದರಿಂದ

ಕಸ್ಯ ಕಸ್ಯ ಪ್ರಿಯಂ ಬ್ರೂಮಃ

ಕಸ್ಯ=ಭಗವತಃ, ಕಸ್ಯ= ಮುಖ್ಯಪ್ರಾಣಸ್ಯ, ಪ್ರಿಯಂ = ಸೂತ್ರಭಾಷ್ಯಭಾವಂ, ಬ್ರೂಮಃ =ವದೇಮ.

'ಕಂ ಬ್ರಹ್ಮಾ ಖಂ ಬ್ರಹ್ಮಾ! ಎನ್ನುವ ಶ್ರುತಿಯು 'ಕ' ಎಂದರೆ ಭಗವಂತ ಎಂದು ಹೇಳುತ್ತಿದೆ. ಅದರಂತೆ 'ಕಶ್ಚ ಈಶಶ್ಚ ಕೇಶೌ ತೌ ವರ್ತಯತೀತಿ ಕೇಶವಃ' ಎಂಬ ವ್ಯುತ್ಪತ್ತಿಯಲ್ಲಿ 'ಕ' ಎಂದರೆ ಮುಖ್ಯಪ್ರಾಣ ಎಂದರ್ಥ. ಆದ್ದರಿಂದ ಕಸ್ಯ ಕಸ್ಯ=ಹರಿ-ವಾಯುಗಳಿಗೆ ಪ್ರಿಯಂ ಬ್ರೂಮಃ = ಇಷ್ಟವಾದ ಮಾತನ್ನು ಆಡೋಣ.

'ಸ್ತುಮಃ ಕಂ ಕಂ ಪದೇ ಪದೇ'

ನಮ್ಮ ಮಾತುಕೃತಿಗಳೆಲ್ಲವೂ ಮೂಲಭೂತರಾಗಿ ಯಾರಿಂದ ನಡೆಯುತ್ತಿವೆಯೇ ಅಂತಹ ಹರಿವಾಯುಗಳನ್ನು ಹೆಜ್ಜೆ ಹೆಜ್ಜೆಗೂ ಸ್ತುತಿಸೋಣ. ನಮ್ಮ ಜೀವನದ ಅಮೂಲ್ಯವಾದ ಕರ್ತವ್ಯಗಳ ಫಲಗಳನ್ನು -**'ಕಸ್ಮೈಕಸ್ಮೈ ದಿಶಾಮೋಽರ್ಥಂ'** ಮುಖ್ಯ ಪ್ರಾಣಾಂತರ್ಗತ ಭಗವಂತನಿಗೆ ಸಮರ್ಪಿಸೋಣ. **'ಕಸ್ಮಾದ್ವಾಽಸ್ಮತ್ಪ್ರಯೋಜನಮ್'** ಭಗವಂತನಿಂದಲೇ ನಮಗೆ ಪ್ರಯೋಜನ. ಹೀಗೆ ನೇರವಾದ ಸತ್ಯವನ್ನು ತೋರಿಸಿಕೊಟ್ಟರೂ ಬಣ್ಣದ ಬದುಕು ಬೇಕೆ? ಹೀಗೆ ಬದುಕಬೇಕೆ ?

ನಮ್ಮ ಜೀವನದಲ್ಲಿ ಸುಖದುಃಖಗಳು ಬಂದಾಗ ಬೇರೆ ಸಖರನ್ನು ಬಯಸುವುದಕ್ಕಿಂತ ಶ್ರೀಹರಿಯನ್ನೇ ಬಯಸಬೇಕು. 'ಸುಖವಾಗಲೀ ಬಹು ದುಃಖವಾಗಲೀ ಸಖ ನೀನಾಗಿರು ಪಾಂಡುರಂಗ' ಎಂಬ ಎಚ್ಚರಬೇಕು.

'ಸುಖದುಃಖಸಮಸ್ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಃ ತುಲ್ಯನಿಂದಾತ್ಮಸಂಸ್ತುತಿಃ ॥'

ಸುಖಕ್ಕೆ ಎಷ್ಟು ಮಹತ್ವವೋ ದುಃಖಕ್ಕೂ ಅಷ್ಟೇ ಮಹತ್ವ ನೀಡಬೇಕು. ಎರಡರ ಬಗ್ಗೆಯೂ ಅತಿಯಾಗಿ ಹಚ್ಚಿಕೊಳ್ಳಬಾರದು. ಹೊನ್ನು ಮಣ್ಣುಗಳಲ್ಲಿ ಪ್ರಿಯ ಅಪ್ರಿಯಗಳಲ್ಲಿ, ಸ್ತುತಿನಿಂದನೆಗಳಲ್ಲಿಯೂ ಮನಸ್ಸನ್ನು ಹರಿಬಿಡಬಾರದೆಂಬ ಎಚ್ಚರ ಮುಪ್ಪುರಿಗೊಳ್ಳಬೇಕು.

ಸುಖವನ್ನೇನೋ ಸೈರಿಸಿಕೊಳ್ಳಬಹುದು. ದುಃಖ ಬಂದಾಗ ಹೇಗೆ ಸಹಿಸಿಕೊಳ್ಳುವುದು ? ದುಃಖವು ವ್ಯಕ್ತಿಯಿಂದ ಬಂದದ್ದೋ ? ನಮ್ಮ ಪ್ರಾರಬ್ಧದಿಂದ ಬಂದದ್ದೋ ಎಂದು ಕ್ಷಣಕಾಲ ವಿಮರ್ಶಿಸಬೇಕು.

ಭಾಗವತ ಹೇಳುತ್ತದೆ-

'ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ
ಪರೋ ದದಾತೀತಿ ಕುಬುದ್ಧಿರೇಷಾ॥'

'ಸುಖದುಃಖಗಳನ್ನು ಮತ್ತೊಬ್ಬ ವ್ಯಕ್ತಿ ಕೊಡುತ್ತಾನೆಂಬುದು ಅಲ್ಪಚಿಂತನೆ. ನಮ್ಮ ಪ್ರಾರಬ್ಧಕ್ಕೆ ಅವನೊಬ್ಬ ನಿಮಿತ್ತ. ಈ ದುಃಖದ ಮೂಲಕ ಈ ವ್ಯಕ್ತಿಯಲ್ಲಿ ನಿಂತ ಶ್ರೀಹರಿ ನನ್ನ ಪ್ರಾರಬ್ಧವೆಂಬ ಕಶ್ಮಲವನ್ನು ಪರಿಹರಿಸಿದ ಎಂಬ ಎಚ್ಚರ ಬಂದರೆ ದುಃಖವು ಸುಖವಾಗುತ್ತದೆ.

ಇನ್ನೂ ಸುಖ ಬಂದಾಗ ಉನ್ಮತ್ತರಾಗಿ ಅವನು ನನಗೆ ಸುಖ ನೀಡಿದ ಎಂದು ಭಗವಂತನನ್ನು ಮರೆತು ನಡೆದುಕೊಂಡರೆ ಅನೇಕ ಜನ್ಮಗಳಿಗೆ ದುಃಖವು ಕಾರಣವಾಗುತ್ತದೆ. ಸುಖವೂ ದುಃಖಾತ್ಮಕವಾಗುತ್ತದೆ. ಆದ್ದರಿಂದ ಎರಡರಲ್ಲಿಯೂ ಸಮತ್ವದಿಂದ ವರ್ತಿಸಿ ಹರಿಯ ಎಚ್ಚರವನ್ನು ಜಾಗೃತಗೊಳಿಸಿಕೊಳ್ಳಬೇಕು.

'ಪರೋಪದೇಶಸಮಯೇ ಜನಾಃ ಸರ್ವೇಽಪಿ ಪಂಡಿತಾಃ।
ಸ್ವಸ್ಯಾನುಷ್ಠಾನಸಮಯೇ ಮುನಯೋಽಪಿ ನ ಪಂಡಿತಾ: ॥

ಮತ್ತೊಬ್ಬರಿಗೆ ತಿಳಿ ಹೇಳುವಾಗ ಎಲ್ಲರೂ ಬಲ್ಲವರೇ. ತನ್ನ ಆಚರಣೆಗೆ ಬಂದಾಗ ಜ್ಞಾನಿಯೂ ದಡ್ಡನೇ ಎಂಬ ಒಂದು ಮಾತಿದೆ. ಸುಖ ಬಂದರೆ ಸರಿ. ಜನರಿಂದ ಅತಿಯಾದ ನಿಂದನೆ ಅಪಮಾನಗಳಿಂದ ದುಃಖ ಉಂಟಾದರೆ ಹರಿಯ ಎಚ್ಚರ ದೂರವಾಗುತ್ತದೆ. ಜ್ಞಾನಿಗಳೂ ವಿಷಣ್ಣವದನರಾಗುತ್ತಾರೆ. ದುಃಖ ದಾಟುವ ಬಗೆ ಹೇಗೆ ?

ದುಃಖದ ಬಗ್ಗೆ ಸರಿಯಾದ ಆಲೋಚನೆ ಮಾಡಿದಲ್ಲಿ ದುಃಖಕ್ಕೆ ಅವಕಾಶವೇ ಇಲ್ಲ. ಅಜ್ಞಾನವೇ ದುಃಖಕ್ಕೆ ಮೂಲ. ದುಃಖವನ್ನು ದಾಟಲೂ ಈ ಚಿಂತನೆಯು ಸಹಾಯ ಮಾಡೀತು -

ಮನ್ನಿಂದಯಾ ಯದಿ ಜನಃ ಪರಿತೋಷಮೇತಿ
ನನ್ವಪ್ರಯತ್ನಸುಲಭೋಽಯಮನುಗ್ರಹೋ ಮೇ ।
ಶ್ರೇಯೋರ್ಥಿನೋಽಪಿ ಪುರುಷಾಃ ಪರಿತುಷ್ಟಿಹೇತೋಃ
ದುಃಖಾರ್ಜಿತಾನ್ಯಪಿ ಧನಾನಿ ಸಮುತ್ಸೃಜಂತಿ ॥

'ನನ್ನ ನಿಂದೆಯಿಂದ ಒಬ್ಬ ವ್ಯಕ್ತಿಗೆ ಆನಂದವಾಗುತ್ತದೆಯಾದರೆ, ಅದು ನನ್ನ ಜೀವನದಲ್ಲಿ ಬಂದ ಸೌಭಾಗ್ಯ' ಎಂದು ಭಾವಿಸುತ್ತೇನೆ ಏಕೆಂದರೆ, ಜೀವನದ ಭಾಗ್ಯವನ್ನು ಬಯಸುವ ಮಂದಿಯೆಲ್ಲ ಮತ್ತೊಬ್ಬರಿಗೆ ಮುದ ನೀಡಲು ತಾವು ಕಷ್ಟದಿಂದ ಸಂಗ್ರಹಿಸಿದ ಹಣವನ್ನೆಲ್ಲ ದಾನ ಮಾಡುತ್ತಾರೆ. ನಾನು ಏನೂ ಮಾಡದೆ ನನ್ನಿಂದ ಅವನಿಗೆ ಆನಂದವಾಗುತ್ತದೆಯಾದರೆ ಇದು ಭಾಗ್ಯವಲ್ಲವೇ ? ಎಂಬ ಆಲೋಚನೆ ಬಂದಾಗ ದುಃಖಕ್ಕೆ ಅವಕಾಶವೇ ಇಲ್ಲ.

ಒಟ್ಟಿನಲ್ಲಿ ಬದುಕಿನಲ್ಲಿ ಬರುವ ಸುಖದುಃಖ, ಶತ್ರುಮಿತ್ರರ ಪಾತ್ರ ಎಷ್ಟು ಎಂದು ಆಲೋಚಿಸಿ ಅದಕ್ಕೆ ನೇತಾರನಾದ ಹರಿಯನ್ನು ನಂಬಿದರೆ ಬದುಕು ಹಸನಗೊಳ್ಳುತ್ತದೆ.

11. ಎಚ್ಚರಿಕೆಯ ಎರಡು ದೃಷ್ಟಾಂತ

1. ಹರಿಯು ಶತ್ರುವಾದರೆ ಮಿತ್ರನೂ ಶತ್ರುವಾಗುತ್ತಾನೆ. ಎಂದು ಹಿಂದೆ ಹೇಳಿದ ತಮ್ಮ ಮಾತಿಗೆ ತಾವೇ ಎರಡು ದೃಷ್ಟಾಂತ ಕೊಡುತ್ತಾರೆ.

2. ಹರಿಯು ಮಿತ್ರನಾದರೆ ಶತ್ರುವೂ ಮಿತ್ರನಾಗುತ್ತಾನೆ.

1) ಜಗತ್ತಿನಲ್ಲಿ ತಂದೆಯ ಸಂಹಾರಕ್ಕೆ ಮಗನೆಂದೂ ಕಾರಣನಾಗಲಾರ. ಮಗನನ್ನೇ ಸಂಹರಿಸಬೇಕೆಂದು ತಂದೆಯೂ ಬಯಸಲಾರ. ಆದರೆ ಹರಿಯ ಶತ್ರುವಾದ ಹಿರಣ್ಯಕಶಿಪುವಿಗೆ ಹರಿಯ ಮಿತ್ರನಾದ ತನ್ನ ಸುಪುತ್ರನೇ ಶತ್ರುವಾದ. ಸುಪುತ್ರನನ್ನು ಹರಿಯ ಮೇಲಿನ ದ್ವೇಷದಿಂದ ಕೊಲ್ಲಲ್ಲು ಅನುವಾದ. ಆದರೆ ಹರಿಯನ್ನೇ ಮಿತ್ರನನ್ನಾಗಿ ಪಡೆದಿದ್ದ ಪ್ರಹ್ಲಾದನು ತಂದೆಯಾದ ಹಿರಣ್ಯಕಶಿಪುವನ್ನು ಸಂಹರಿಸಬಯಸಲಿಲ್ಲ. ಏಕೆಂದರೆ ಪ್ರಹ್ಲಾದನಿಗೆ 'ದುಃಖಕೊಡುವ ಶಕ್ತಿ ತನ್ನಪ್ಪನಿಗಿಲ್ಲ'

ಎಂಬ ಎಚ್ಚರ ಇತ್ತು. ಪುಟ್ಟ ಮಗುವಾದ. ಪ್ರಹ್ಲಾದನೆ ತನ್ನಪ್ಪನ ಬಳಿ ಕೆಚ್ಚೆದೆಯಿಂದ ಬಾಯ್ಬಿಚ್ಚಿದಾಗ ತತ್ವಜ್ಞಾನ ಸಂಪುಟದಿಂದ ಕಳಚಿಬಿದ್ದ ಮಾತಿದು-

ನ ಕೇವಲಂ ಮೇ ಭವತಶ್ಚ ರಾಜನ್
ಸ ವೈ ಬಲಂ ಬಲಿನಾಂ ಚಾಪರೇಷಾಮ್ ||

ಜಗತ್ತಿನ ಸಕಲಜೀವರಿಗೂ ಶಕ್ತಿದಾತ ಭಗವಂತನೊಬ್ಬನೇ. ಈ ಸತ್ಯ ನಿಶ್ಚಿತವಾಗಿರಲು ಸುಖವನ್ನಾಗಲೀ ದುಃಖವನ್ನಾಗಲೀ ನೀಡಲು ನೀನ್ಯಾರು ? ಎಂದು ಪ್ರಶ್ನಿಸಿದ.

ನನ್ನನ್ನೇ ಯಾರೆಂದು ಪ್ರಶ್ನಿಸುತ್ತೀಯೋ ಎಂದು ಖಡ್ಗ ಎತ್ತಿ ಕಡಿಯಲು ಬಂದಾಗ 'ಸುಖ ದುಃಖಗಳ ಸ್ವಾಮಿತ್ವ ನನ್ನದು' ಎಂದು ಪ್ರಕಟಪಡಿಸಲು ಶ್ರೀಹರಿಯು ನರಸಿಂಹನಾಗಿ ಕಂಬದಲ್ಲಿ ಮೂಡಿಬಂದು ಹಿರಣ್ಯಕಶಿಪುವನ್ನು ತಡೆದು ಹೊಡೆದ. ತೊಡೆಯಲ್ಲಿ ಕೆಡವಿ, ಕೂರುಗುರುಗಳಿಂದ ಉದರ ಬಗೆದು ಪ್ರಾಣವನ್ನೆ ಅಪಹರಿಸಿದ.

ಇಲ್ಲಿ ನೋಡಿ ಹರಿಯು ಹಿರಣ್ಯಕಶಿಪುವಿಗೆ ಶತ್ರುವಾಗಿದ್ದ. ಆದ್ದರಿಂದ ಮಗನಂಥ ಮಿತ್ರನೂ ಪ್ರಾಣತೆಗೆಯುವ ಶತ್ರುವಾದ. ಇದಕ್ಕೆ ಕಾರಣ ಪ್ರಹ್ಲಾದ ಅಲ್ಲ. ಹಿರಣ್ಯಕಶಿಪುವಿನ ಅಜ್ಞಾನ. ಪ್ರಹ್ಲಾದನಿಗೆ ಭಗವಂತನು ಮಿತ್ರನಾದ್ದರಿಂದ ಹಿರಣ್ಯಕಶಿಪುವಿನಂತಹ ಸಮರ್ಥ ಅಸುರನನ್ನು ಕೇವಲ ಹರಿಯ ದಯದಿಂದ ಸಂಹರಿಸಿದ. ಅಪ್ಪನಿಂದ ದುಃಖ ಪರಿಹರಿಸಿಕೊಳ್ಳಲು ಹರಿಚಿಂತನೆ ಎಂಬ ಸಂಜೀವಿನಿಯೊಂದೇ ಸಾಕಾಯಿತು.

2) ಹರಿಯು ಮಿತ್ರನಾದರೆ ಶತ್ರುವೂ ಮಿತ್ರನಾಗುತ್ತಾನೆ ಎನ್ನಲು ಪರೀಕ್ಷಿತನ ಕಥೆಯೇ ಸಾಕ್ಷಿಯಾಗಿದೆ. ಶಮೀಕನ ಮಗನಾದ ಶೃಂಗಿಯು ಪರೀಕ್ಷಿತನಿಗೆ ಏಳನೇ ದಿನದಲ್ಲಿ ತಕ್ಷಕ ನಿನ್ನನ್ನು ಕಚ್ಚಲಿ ಎಂದು ಶಪಿಸಿದ. ಶಾಪದಿಂದ ಹೆದರಿದ ಪರೀಕ್ಷಿತನು ಗಂಗೆಯ ನಡುವೆ ಸೌಧ ನಿರ್ಮಿಸಿದ. ತಕ್ಷಕನನ್ನು ವೈರಿಯನ್ನಾಗಿ ತಿಳಿದ. ಆದರೆ ಶುಕರ ಮುಖದಿಂದ ಭಾಗವತವನ್ನು ಪಾನ ಮಾಡಿದ ಬಳಿಕ 'ಶತ್ರು' 'ಮಿತ್ರ' ಎನ್ನುವ ಚಿಂತನೆಯೇ ತಪ್ಪು ಎನಿಸಿತು. ತಕ್ಷಕನ ಭಯ ದೂರವಾಯಿತು. ಆದರೂ ಮುನಿಕುವರನ ಶಾಪ ವ್ಯರ್ಥವಾಗಬಾರದೆಂದು ಚಿಂತಿಸಿದ. ಹಣ್ಣಿನ ರಾಶಿಯಲ್ಲಿದ್ದ ಕೀಟ ಒಂದನ್ನು ಕಂಡ. ಈ ಕೀಟವೇ ತಕ್ಷಕನಾಗಿ ನನಗೆ ಕಚ್ಚಲಿ ಎಂದು ಬಯಸಿದ. ಅದರಂತೆ ರೂಕ್ಷವಿಷದ ತಕ್ಷಕ ತಕ್ಷಣದಲ್ಲಿ ಕಚ್ಚಿ ಶರೀರ ತ್ಯಾಗಕ್ಕೆ ಕಾರಣನಾದ.

ಈ ಕಥೆಯಿಂದ ತಿಳಿಯಬೇಕಾದ್ದು ಇಷ್ಟೆ. ಭಗವಂತನು ಮಿತ್ರನೆನಿಸಿದಾಗ 'ಬಾಹ್ಯಶತ್ರುಗಳಿದ್ದಾರೆ, ಅವರಿಂದ ಮೃತ್ಯುವಿದೆ' ಎಂಬ ಭೀತಿಯೇ ನಾಶವಾಗುತ್ತದೆ. ಹರಿ ಚಿಂತನೆಯು ಬದುಕಿನ ಸಾರ್ಥಕತೆಯ ಕಡೆ ಗಮನ ಕೊಡುತ್ತದೆ. ಬಾಹ್ಯಚಿಂತನೆ ಭವಕಾಂತಾರದಲ್ಲಿ ಮುಳ್ಳಿನಂತಾಗುತ್ತದೆ. ಮೃತ್ಯುವಿನ ಭೀತಿಗೆ ನಾಂದಿಯಾಗುತ್ತದೆ.

ನಾವು ಅತಿಯಾಗಿ ಹಚ್ಚಿಕೊಂಡ ಮನೆಮಕ್ಕಳು, ಮಡದಿಯರೇ ಅಸ್ಥಿರರಾದಾಗ, ನೆಚ್ಚಿನ ದೇಹವೂ ಪತನವಾಗುವಾಗ ಶತ್ರು, ಮಿತ್ರರು ಎಲ್ಲಿಯ ತನಕ. ಆದ್ದರಿಂದ ಒಂದು ದಿನ ಸೂರ್ಯೋದಯವನ್ನು ಕಾಣದ ಸ್ಥಿತಿಗೆ ತಲುಪುತ್ತಿರುವ ನಾವು ಬದುಕಿನ ಮುಖ್ಯಚಿಂತನೆ ಏನೆನ್ನುವುದನ್ನು ತಪ್ಪದೆ ಮಾಡಬೇಕು. ಹರಿ ಎಂಬ ಸಂಪತ್ತಿನಿಂದ ಆಪತ್ತುಗಳನ್ನು ಕಳೆದುಕೊಳ್ಳಬೇಕು.

12. ಬೆಂಬಿಡದ ದುಃಖ

ಸಂಸಾರದಲ್ಲಿ ದುಃಖ ಎನ್ನುವುದು ಅನಿವಾರ್ಯ. ನಿವಾರ್ಯ ಎಂದಾಗಿದ್ದರೆ ನಮ್ಮ ಚಿಂತೆಗೆ ಒಂದು ಅರ್ಥ ಬರುತ್ತಿತ್ತು. ಬ್ರಹ್ಮಾದಿ ಸಮಸ್ತಚೇತನವರ್ಗವನ್ನು ಬಿಡದೆ ಅಂಟಿಕೊಂಡ ದೊಡ್ಡ ಪಿಡುಗೆಂದರೆ ದುಃಖ, ತತ್ತ್ವಸಂಖ್ಯಾನದಲ್ಲಿ ಶ್ರೀಮದಾಚಾರ್ಯರೇ ಆಡಿದ ನುಡಿಯಿದು.

ದುಃಖಸ್ಪೃಷ್ಟಂ ತದಸ್ಪೃಷ್ಟಂ ಇತಿ ದ್ವೇಧೈವ ಚೇತನಂ ।
ನಿತ್ಯಾದುಃಖಾ ರಮಾಽನ್ಯೇ ತು ಸ್ಪೃಷ್ಟದುಃಖಾಃ ಸಮಸ್ತಶಃ ॥ ಎಂದು

ಚೇತನದಲ್ಲಿ ಎರಡು ವಿಧ. ದುಃಖಸ್ಪೃಷ್ಟಚೇತನ. ದುಃಖದ ಸಂಬಂಧವಿಲ್ಲದ ಚೇತನ. ಎಂದೂ ದುಃಖದ ಲವಲೇಶವೂ ಇಲ್ಲದ ಚೇತನ ಎರಡೇ. ಒಂದು ಶ್ರೀಹರಿ. ಮತ್ತೊಂದು ಶ್ರೀತತ್ತ್ವ, ಉಳಿದ ಸಮಸ್ತ ಬ್ರಹ್ಮಾದಿಗಳಿಗೂ ದುಃಖವಿದ್ದೇ ಇದೆ. ದುಃಖವಿದೆ ಎಂದ ಬಳಿಕ ಅದಕ್ಕೆ ಕಾರಣವಾದ ಅಜ್ಞಾನವೂ ಇದೆ. ಲಕ್ಷ್ಮೀನಾರಾಯಣರಿಗೆ ಅಜ್ಞಾನವೇ ಇಲ್ಲ. ಆದ್ದರಿಂದ ದುಃಖವೂ ಇಲ್ಲ.

ಋಜುಗಳಿಗೆ ಅವರ ಪತ್ನಿಯರಿಗೆ ದುಃಖಪಡುವ ಯೋಗ್ಯತೆ ದಗ್ಧಪಟದಂತೆ ಇದೆ. ಉಳಿದ ದೇವತೆಗಳಿಗೆ ದುಃಖವೇ ಇದೆ. ಒಟ್ಟಿನಲ್ಲಿ ದುಃಖವನ್ನು ಎಲ್ಲರೂ ಅವರವರ ಯೋಗ್ಯತೆಗೆ ಅನುಗುಣವಾಗಿ ಅಂಟಿಸಿಕೊಂಡಿದ್ದಾರೆ. ಎಂದೆಂದೂ ಸ್ವತಂತ್ರವಾಗಿ ದುಃಖನಿರ್ಮುಕ್ತನಾದವ ಶ್ರೀ ಹರಿ ಒಬ್ಬನೇ. ಇದು ಸತ್ಯ. ಇದು ಸತ್ಯ. ಇದು ಸತ್ಯ. ಶ್ರೀಹರಿಯು ದುಃಖನಿರ್ಮುಕ್ತನಾದವ ಎಂಬ ಚಿಂತನೆಯೇ

ನಮ್ಮ ದುಃಖದ ಬಿಡುಗಡೆಯ ಕೀಲಿಕೈ. ಇದು ಸಿಕ್ಕಿದ ಬಳಿಕ ಸಾವಿರ ಸಾಂಸಾರಿಕ ಸಂತಾಪಗಳೆಂಬ ಸಂಕೋಲೆಗಳಲ್ಲಿ ಸಿಕ್ಕಿಬಿದ್ದಿದ್ದರೂ ನಮಗೆ ಯಾವ ಅಪಾಯವಿಲ್ಲ. ಉಪಾಯ ತಿಳಿದವಗೆ ಅಪಾಯದ ಭಯವಿಲ್ಲವಷ್ಟೇ ?

ಶ್ರೀವಾದಿರಾಜರು -**'ದುಃಖಾಸ್ಪೃಷ್ಟೋ ಹರಿಸ್ತ್ವೇಕೋ ದುಃಖಸ್ಪೃಷ್ಟಾಸ್ತತೋऽಪರೇ ।'** ಎಂದಿದ್ದಾರೆ. ಹರಿಯೊಬ್ಬ ದುಃಖ ಇಲ್ಲದವ. ಉಳಿದೆಲ್ಲರಿಗೂ ದುಃಖವಿದೆ ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಹೀಗೆ ಹೇಳಿದರೆ 'ನಿರ್ದುಃಖೋ ಹಿ ಹರಿರ್ನಿತ್ಯಂ ಶ್ರೀಶ್ಚಾನ್ಯೇ ದುಃಖಭಾಗಿನಃ' ಎಂಬ ಪ್ರಮಾಣವಿರೋಧ ಕಂಡುಬರುತ್ತದೆ. ದುಃಖ ಇಲ್ಲದವರು ಲಕ್ಷ್ಮೀ ಮತ್ತು ನಾರಾಯಣ ಎಂದು ಶ್ರೀಮದಾಚಾರ್ಯರು ಹೇಳಿದ ಬಳಿಕ ಶ್ರೀ ವಾದಿರಾಜರು 'ದುಃಖಸ್ಪೃಷ್ಟೋ ಹರಿಸ್ತ್ವೇಕೋ' ಎಂದು ಹೇಗೆ ಹೇಳಿದರು? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಇದಕ್ಕೆ ಸಮಾಧಾನ ಹೀಗೆ ಹೇಳಬಹುದು. ಶ್ರೀವಾದಿರಾಜರ ಮಾತಿನಲ್ಲಿ ತತ್ವಾರ್ಥಗಳ ಚಿಂತನೆ ಅಡಗಿದೆ. ಪ್ರಧಾನವಾಗಿ ಯಾರ ಎರವಲನ್ನೂ ಪಡೆಯದೆ ನಿರ್ದುಃಖನಾದವ ಶ್ರೀಹರಿಯೊಬ್ಬನೇ. ಲಕ್ಷ್ಮೀಯು ಹರಿಯ ಕರುಣೆಯಿಂದ ನಿರ್ದುಃಖಳಷ್ಟೇ 'ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ' ಎಂಬ ಅರ್ಥದಲ್ಲಿ 'ಹರಿಸ್ತ್ವೇಕಃ' ಎಂದಿದ್ದಾರೆ.

ಅಥವಾ ಲಕ್ಷ್ಮೀಯೂ ನಿರ್ದುಃಖಳೆಂದು ಇಲ್ಲಿ ಹೇಳಿದ್ದಾರೆ. ರಾಜರು 'ಹರಿರೇಕಃ ' ಎನ್ನದೆ 'ಹರಿಸ್ತ್ವೇಕಃ ಎಂದಿದ್ದಾರೆ. ತು ಶಬ್ದವು ವಿಶೇಷವನ್ನು ಹೇಳುತ್ತದೆ. ಭಕ್ತರ ಯಾದಿಯಲ್ಲಿ ಭಗವಂತನಿಗೆ ವಿಶೇಷಪ್ರಿಯಳೆನಿಸಿದ ರಮೆಯನ್ನು 'ತು' ಶಬ್ದದಿಂದ ಗ್ರಹಿಸಿದಾಗ ಸಂಶಯಗ್ರಹ ದೂರವಾಗುತ್ತದೆ.

13. ದುಃಖಸಂಪುಟದಲ್ಲಡಗಿದ ಸುಖ

ಸಮುದ್ರದಲ್ಲಿ ನಿರಂತರ ತೆರೆಗಳು ತೂರಿ ತೂರಿ ಬರುತ್ತಿರುತ್ತವೆ. ಒಂದು ತೆರೆಯ ಆಗಮನ ಮತ್ತೊಂದು ತೆರೆಗೆ ನಾಂದಿ. ಇದರಂತೆ ಸಂಸಾರಸಮುದ್ರದಲ್ಲಿಯೂ ಸುಖ ದುಃಖಗಳೆಂಬ ತೆರೆಗಳು ನಿರಂತರ ಅಪ್ಪಳಿಸುತ್ತಿವೆ. ಇಂದು ದುಃಖ ಬಂದಿತೆಂದರೆ ದುಃಖಪಡಬೇಕಿಲ್ಲ. ಈ ದುಃಖವೇ ಮುಂದಿನ ಸುಖಕ್ಕೆ ನಾಂದಿಯಾಗುತ್ತದೆ. ಸುಖ ಬಂದಾಗ ಹೀಗೆ ಚಿಂತಿಸಬೇಕು. ನಾಳೆಯ ದುಃಖಕ್ಕೆ ಇಂದಿನ ಸುಖ ನಾಂದಿಯಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ದುಃಖದ ಸಂಪುಟದಲ್ಲಿ ಸುಖ ಅಡಕವಾಗಿದೆ. ಸುಖ

ಅನುಭವಿಸುವ ಮುನ್ನ ದುಃಖ ಅನುಭವಿಸಲೇ ಬೇಕು. ಸುಖ ಅನುಭವಿಸಿದ ನಂತರವೂ ದುಃಖವನ್ನು ಅನುಭವಿಸಲೇಬೇಕು. ಏನೇ ಮಾಡಿದರೂ ಈ ಸುಖದುಃಖಗಳ ಸರಪಳಿಯಿಂದ ನಿರ್ಮುಕ್ತರಾಗಲು ಸಾಧ್ಯವಿಲ್ಲ. ಸಂಸಾರವೆಂದರೆ ಸುಖದುಃಖಗಳ ಸಮ್ಮಿಶ್ರಣ ಎಂದೇ ಅರ್ಥ. ಕುಶಲನಾದವ ಸುಖದುಃಖಗಳಿಗೆ ಕಾರಣವಾದ ಲಿಂಗದೇಹವನ್ನೇ ಕಡಿದುಕೊಳ್ಳಬೇಕು. ಆವಾಗ ಸುಖದುಃಖಗಳು ನಾಶವಾಗುತ್ತವೆ. ಸ್ವರೂಪಸುಖ ಅಭಿವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದಲೇ ಶ್ರೀ ಕನಕದಾಸರು ಹೀಗೆ ಉದ್ಗರಿಸಿದರು -

ಪುಟ್ಟಿಸಲೇ ಬೇಡ ಇನ್ನು ಪುಟ್ಟಿಸಿದಕೆ ಪಾಲಿಸಿನ್ನು
ಇಷ್ಟು ಮಾತ್ರ ಬೇಡಿಕೊಂಬೆ ಶ್ರೀಕೃಷ್ಣನೇ ॥ ಎಂದು
'ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ'

ಎಂಬುದು ಸಾಮಾನ್ಯನಿಯಮ. ಈ ನಿಯಮ ನಿಶ್ಚಯವಾದುದರಿಂದ ಹರಿ ಚಿಂತನೆಯ ನಿಯಮ ಜೀವನದಲ್ಲಿ ಹಾಕಿಕೊಳ್ಳಬೇಕು. ಬಾಹ್ಯವಾದ ಸುಖಕ್ಕೋಸ್ಕರ ಇಂದ್ರಿಯಗಳನ್ನೂ ಹರಿಯ ಬಿಟ್ಟರೆ ಸುಖಾತ್ಮಕಜೀವನ ನಡೆಯದು. ಹರಿಚಿಂತನೆ ಸಕಲದುಃಖಗಳಿಗೂ ಖಡ್ಗಪ್ರಹಾರದಂತಿದೆ. ಶ್ರೀಮದಾಚಾರ್ಯರೇ ಕೃಷ್ಣಾಮೃತಮಹಾರ್ಣವದಲ್ಲಿ ನುಡಿದ ಮಾತಿದು -

ಆರ್ತಾ ವಿಷಣ್ಣಾ ಶಿಥಿಲಾಶ್ಚ ಭೀತಾಃ
ಘೋರೇಷು ಚ ವ್ಯಾಧಿಷು ವರ್ತಮಾನಾಃ ।
ಸಂಕೀರ್ತ್ಯ ನಾರಾಯಣ ಶಬ್ದ ಮಾತ್ರಂ
ವಿಮುಕ್ತದುಃಖಾಸ್ಸುಖಿನೋ ಭವಂತಿ ॥

ಜೀವನದ ನೂರಾರು ಕಷ್ಟಸಂಕೋಲೆಗಳಲ್ಲಿ ಬಳಲಿ ಬೆಂಡಾದ ಘೋರರೋಗಗಳಿಗೆ ತುತ್ತಾದ ಜನರು 'ನಾರಾಯಣ' ಎಂಬ ಶಬ್ದವನ್ನು ಭಕ್ತಿಯಿಂದ ಉಚ್ಚರಿಸಿದರೆ ಸಾಕು, ಸಕಲ ದುಃಖಗಳಿಂದ ಮುಕ್ತರಾಗಿ ಮುಕ್ತಿಭಾಜನರಾಗುತ್ತಾರೆ.

ಹರಿಚಿಂತನೆಗಿಂತ ಮಿಗಿಲಾದ ಸುಖ ಅಧ್ಯಾತ್ಮಬಂಧುಗಳಿಗೆ ದೊರೆಯದು. ಕೆಲವರಿಗೆ ದುಡ್ಡು ಕೂಡಿಡುವುದರಲ್ಲಿಯೇ ಸಂತೋಷ. ಕೆಲವರಿಗೆ ಸ್ವಾರ್ಥಭೋಗದಲ್ಲಿ ಸಂತೋಷ. ಮತ್ತೆ ಕೆಲವರಿಗೆ ದಾನ ಮಾಡುವುದರಲ್ಲಿ ಸಂತೋಷ. ಈ ಎಲ್ಲ ಸಂತೋಷಗಳಿಗೂ ಒಂದು ಗಡಿಯಿದೆ. ಆದರೆ ಹರಿಚಿಂತನೆಯಿಂದ ಲಭಿಸುವ ಆನಂದಕ್ಕೆ ಯಾವ ಸುಖವೂ ಸಾಟಿಯಾಗದು.

ಧ್ಯಾನಯೋಗದಲ್ಲಿ ಕೃಷ್ಣನೇ ನುಡಿದ ಮಾತಿದು -
ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಽಪಿ ವಿಚಾಲ್ಯತೇ ॥

ಯಾವ ಸುಖವನ್ನು ಪಡೆದ ಬಳಿಕ ಮತ್ತೂ ನಾನು ಪಡೆಯಬೇಕಾದ ಸುಖವಿದೆ ಎಂಬ ಚಿಂತನೆ ಬರುವುದಿಲ್ಲವೋ, ಘನವಾದ ಸಹಸ್ರ ದುಃಖಗಳ ಮಧ್ಯೆ ಇದ್ದರೂ ಮನಸ್ಸಿನ ನಿಯಂತ್ರಣ ತಪ್ಪುವುದಿಲ್ಲವೋ ಅದೇ ನಿಜವಾದ ಸುಖ. ಇಂತಹ ಸುಖ ಹರಿಚಿಂತನೆಯಲ್ಲಿದೇ ವಿನಹ ಬೇರೆ ಎಲ್ಲಿಯೂ ಸಿಗದು. ಆದ್ದರಿಂದ ನಿರಂತರ ಹರಿಯನ್ನೇ ಭಜಿಸುವೆ ಎಂಬ ದೀಕ್ಷೆಯನ್ನು ಸ್ವೀಕರಿಸಬೇಕು.

ಶ್ರೀ ಪುರಂದರದಾಸರೂ-

ಅನುಗಾಲವೂ ಚಿಂತೆ ಜೀವಕೆ ತನ್ನ ಮನವು ಶ್ರೀರಂಗನೊಳು ಮೆಚ್ಚುವ ತನಕ ॥

ಎಂದಿದ್ದಾರೆ.

14. ಅಜ್ಞಾನದ ಮರಿ- ಚಿಂತೆಯಿಂದ ಸುಜ್ಞಾನದ ನಾಶ

ಜೀವನದ ಬಗ್ಗೆ ನಾವು ನಡೆಯುವ ಚಿಂತೆ ಬಹಳ ಕೆಟ್ಟದ್ದು. ಜೀವನದ ದೊಡ್ಡ ದುರಂತ ಯಾವುದು ಎಂದರೆ ಕೊರಗುವುದು. ಚಿಂತೆ ಎನ್ನುವುದು ಮನಸ್ಸನ್ನು ಸೊರಗಿಸುತ್ತದೆ. ದೇಹವನ್ನು ಕರಗಿಸುತ್ತದೆ. ಮತ್ತೊಬ್ಬರ ಮನಸ್ಸಿಗೂ ಚುಚ್ಚುತ್ತದೆ. ಇಷ್ಟೇ ಏಕೆ? ನಿತ್ಯವೂ ಇರಬೇಕಾದ ಕರ್ತವ್ಯಪ್ರಜ್ಞೆಯನ್ನೇ ನಾಶಪಡಿಸುತ್ತದೆ. ಜ್ಞಾನವನ್ನೇ ನಾಶಪಡಿಸುವ ಅಜ್ಞಾನದ ಮರಿಯನ್ನು ಖಂಡಿತವಾಗಿಯೂ ಬೆಳೆಸಬೇಡಿ.

ರೈತನೊಬ್ಬ ಕೃಷಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಅವನು ಬೀಜ ಬಿತ್ತಲು ಉತ್ತ ಹೊಲದಲ್ಲಿ ಬೇಡವಾದ ಕಳೆಯು ಬೆಳೆಯುತ್ತದೆ. ಅವನಿಗೆ ಬೇಕಾದ ಫಲಬೇಕಿದ್ದರೆ ಬೇಡವಾದ ಕಳೆಯ ಕಳೇವರವನ್ನು ಕಳೆನಿರೋಧಕಶಕ್ತಿಯಿಂದ ನಾಶ ಪಡಿಸಬೇಕು. ಅದರಂತೆ ಜೀವರ ಹೃದಯಮೈದಾನದಲ್ಲಿ ಬೆಳೆಯಬೇಕಾದ ಬೆಳೆ ಹರಿಚಿಂತನೆ. ಆದರೆ ಬೇಡವಾದ ಜಗತ್ತಿನ ಚಿಂತೆಯೂ ಜೊತೆ ಜೊತೆಗೆ ಬೆಳೆಯುತ್ತಿದೆ. ಕಳೆಯನ್ನು ಕೀಳದಿದ್ದರೆ ಬೆಳೆಯೇ ಹಾಳಾಗುವಂತೆ ಅಜ್ಞಾನದ ಮರಿಯನ್ನು ಪರಿಹರಿಸಿಕೊಳ್ಳದಿದ್ದರೆ ಹರಿಯ ಅರಿವೆಂಬ ಬೆಳೆ ಬೆಳೆಯದು. ಆದ್ದರಿಂದ ಚಿಂತೆಗೆ ಮದ್ದು ಸಿಂಪಡಿಸಿ ನಾಶಪಡಿಸಬೇಕು. ಇದಕ್ಕೆ ಮದ್ದು, ಕರುಣೆಯ ಕಡಲೆನಿಸಿದ ಹಯವದನನ ಅಡಿಗಳಿಗೆ ನಿತ್ಯವೂ ಪೊಡಮಡುವುದು. ಇಷ್ಟು ಮಾಡಿದಲ್ಲಿ ಎಲ್ಲ

ಕಷ್ಟಗಳನ್ನು ಪರಿಹರಿಸಿ ಅಭೀಷ್ಟಗಳನ್ನು ವೃಷ್ಟಿಗರೆಯುವ. ಇಷ್ಟು ಮಾಡದೆ ಚಿಂತೆಯನ್ನೆ ಮಾಡಿದರೆ ಚಿಂತೆಯು ತನು-ಮನಗಳನ್ನು ಸುಟ್ಟು ಸುಣ್ಣದ ಹರಳನ್ನಾಗಿಸುತ್ತದೆ. 'ಚಿಂತಾಸಮಂ ನಾಸ್ತಿ ಶರೀರಶೋಷಣಂ' ಶರೀರವನ್ನು ಹಣ್ಣಾಗಿಸುವುದು, ಮುಖ್ಯವಾಗಿ ಚಿಂತೆಯೇ ಆಗಿದೆ. ಸಂವಾದಿಯಾಗಿ ಇನ್ನೊಂದು ಸುಭಾಷಿತವೂ ಇದೆ.

ಚಿಂತಾಯಾಶ್ಚ ಚಿತಾಯಾಶ್ಚ ಬಿಂದುಮಾತ್ರಂ ವಿಶಿಷ್ಯತೇ ।
ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವಿನಮ್ ॥

ಚಿಂತೆಗೂ ಚಿತೆಗೂ ಬಿಂದುವಿನಲ್ಲಿ ಮಾತ್ರ ಅಂತರ, ಆದ್ದರಿಂದಲೆ ಚಿತೆಮಾಡುವ ಕೆಲಸವನ್ನು ಚಿಂತೆಯೂ ಮಾಡುತ್ತದೆ. ಆದರೆ ಚಿತೆಗಿಂತ ಚಿಂತೆಯಲ್ಲಿ ಒಂದು ಬಿಂದು ಅಧಿಕವಿರುವುದರಿಂದ ಚಿತೆ ಮಾಡದ ಮನಸುಡುವ ಕೆಲಸವನ್ನು ದೇಹ ಸುಡುವುದರ ಜತೆಗೆ ಚಿಂತೆಯು ಮಾಡುತ್ತದೆ. ಹರಿಯ ಅರಿವಿನಿಂದ ಚಿಂತೆಯು ಪರಿಹಾರವಾಗುತ್ತದೆ. ಎಂಬ ಎಚ್ಚರವಿಲ್ಲದೆ ಚಿಂತೆಗೆ ತುತ್ತಾಗುತ್ತೇವೆ. ಆದ್ದರಿಂದ ಅಜ್ಞಾನದ ಮರಿ ಚಿಂತೆ ಎಂದು ಸಿದ್ಧವಾಯಿತು. ಇನ್ನಾದರೂ ನಿರಂತರ ಅನರ್ಥಪರಂಪರೆಗಳನ್ನು ಸೃಷ್ಟಿಸುವ ಚಿಂತೆಯನ್ನು ಬಿಟ್ಟು ನಮ್ಮನ್ನು ಸೃಷ್ಟಿಗೆ ತಂದ ಹರಿಚಿಂತನೆಯಲ್ಲಿ ನಿರತರಾಗೋಣ.

15. 'ಚಿಂತೆಗೆ ಚಿಕಿತ್ಸೆ ನೀಡಿದ ಋಜುಯೋಗಿರಾಜರು

ಹದಿನಾಲ್ಕನೇ ವರ್ಷದಿಂದ ಆರಂಭಿಸಿ ಯಾವ ಚಿಂತೆಯು, ಎಲ್ಲರನ್ನೂ ನಿರಂತರ ದಹಿಸುತ್ತಿದೆಯೋ ಆ ಚಿಂತೆಯನ್ನೇ ದಹಿಸಲು ಶ್ರೀಮದ್ವಾದಿರಾಜರು ಚಿಂತಾಖಂಡನವೆಂಬ ಸ್ತುತಿಯನ್ನು ರಚಿಸಿದ್ದಾರೆ.

ಶ್ರೀಮದ್ವಾದಿರಾಜರು 'ಆಚತುರ್ದಶಮಾದ್ ವರ್ಷಾತ್' ಎಂದು ಹದಿನಾಲ್ಕರಿಂದ ಚಿಂತೆ ಎಂದಿದ್ದಾರೆ. ಅದಕ್ಕಿಂತ ಮೊದಲೂ ಚಿಂತೆ ಇರುತ್ತದೆಯಲ್ಲವೇ ? ಸಾಮಾನ್ಯವಾಗಿ ಹೌದು. ಚಿಂತೆಯಿದ್ದರೂ ಅದು ಕಾರ್ಯಕಾರಿಯಲ್ಲ. ಶಾಸ್ತ್ರದಲ್ಲಿ ಪುಣ್ಯಪಾಪಗಳ ಅಧಿಕಾರ ಸರಿಯಾಗಿ ಬರುವುದು ಹದಿನಾಲ್ಕರಿಂದ, ಚಿಂತೆಯು ಪುಣ್ಯಪಾಪಗಳನ್ನು ತಂದು ಕೊಡುತ್ತದೆ. ಹರಿಚಿಂತೆ ಪುಣ್ಯವನ್ನು ತಂದುಕೊಟ್ಟರೆ ಲೋಕದ ಚಿಂತೆ ಅನಿಷ್ಟವನ್ನೂ ಸೃಷ್ಟಿಸುತ್ತದೆ. ಅನಿಷ್ಟ ಹುಟ್ಟಿಸುವ ಚಿಂತೆ ಹದಿನಾಲ್ಕರಿಂದ ಆರಂಭ ಎಂಬ ಅರ್ಥದಲ್ಲಿ 'ಆಚತುರ್ದಶಮಾದ್ ವರ್ಷಾತ್' ಎಂದಿದ್ದಾರೆ.

ಅಥವಾ ಗುರುಕುಲದಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದಾಗ ಗೃಹಸ್ಥಧರ್ಮಕ್ಕೆ ಕಾಲಿಡುವ ಸಮಯ, ಶಾಸ್ತ್ರದ ಪ್ರಕಾರ ಸಾಮಾನ್ಯ ಹದಿನಾಲ್ಕು ಹದಿನೈದು. ಈ ಸಂದರ್ಭದಲ್ಲಿ ಜೀವನ ಹೇಗೆ ? ಎಂಬ ಮುಖ್ಯಪ್ರಶ್ನೆ ಮುಂದೆ ನಿಲ್ಲುತ್ತದೆ. ಅದಕ್ಕೆ ಉತ್ತರವಾಗಿ 'ಆಚತುರ್ದಶಮಾದ್ ವರ್ಷಾತ್' ಎಂದಿದ್ದಾರೆ. ಜೀವನದ ಸಮಗ್ರ ಚಿಂತೆಗಳಿಗೂ ಸುಲಭದಲ್ಲಿ ಈ ಚಿಕಿತ್ಸೆಯನ್ನು ಶ್ರೀವಾದಿರಾಜರು ನೀಡಿದ್ದಾರೆ. ಸ್ತುತಿಯನ್ನು ಚಿಂತಿಸಲು ಒಂದು ನಿಮಿಷವನ್ನು ದಿನಕ್ಕೆ ತೆತ್ತೆವೆಂದರೆ ಸಾಕು. ಮತ್ತೇನೂ ಖರ್ಚು ಮಾಡಬೇಕಿಲ್ಲ. ಯಾವ ವೈದ್ಯರೂ ನೀಡದ ಚಿಕಿತ್ಸೆಯನ್ನು ಶ್ರೀ ವಾದಿರಾಜರು ನಮ್ಮ ಮೇಲಿನ ಕರುಣೆಯಿಂದ ನೀಡಿದ್ದಾರೆ. ಇದನ್ನು ಜೀವನದಲ್ಲಿ ಅಳವಡಿಸಿಕೊಂಡು ಶ್ರೀಮದ್ವಾದಿರಾಜರ ಅಂತರ್ಯಾಮಿಯಾದ ಮಧ್ವಪತಿಲಕ್ಷ್ಮೀ ಹಯವದನಾಭಿನ್ನ ಉಡುಪಿಯ ಶ್ರೀಕೃಷ್ಣನ ದಯೆಗೆ ಪಾತ್ರರಾಗೋಣ.

॥ಶ್ರೀಮನ್‌ಮಧ್ವಪತಿಗೋಪಾಲಕೃಷ್ಣಃ ಪ್ರೀಯತಾಮ್॥

ಚಿತ್ರಭಾನೌ ಪೌಷಮಾಸೇ ಬಹುಳೇ ಭೃಗುವಾಸರೇ ।
ಸಪ್ತಮ್ಯಾಂ ಮೀನಲಗ್ನೇ ಹೀ ಸುಕ್ಷೇತ್ರೇ ತಿರುಚಾನುರೌ ॥

ಪದ್ಮಾಸಾನ್ನಿಧ್ಯಸಂಪೂತೇ ಕಲ್ಯಾಣಸುಮಹೋತ್ಸವೇ ।
ವಿಶ್ವೇಶಾಖ್ಯಗುರೋರ್ನಿತ್ಯಂ ಪಾದಸೇವನತತ್ಪರಃ ॥

ವಿಜಯೀಂದ್ರೋಽಸ್ಥಿರಮತಿಃ
ಶುದ್ಧಬುದ್ಧಿಪ್ರಸಿದ್ಧಯೇ ।
ಚಿಂತಾಸಂತಾಪನಾಶಾಯ
ಹರ್ಯನುಗ್ರಹವಾಂಛಯಾ ॥

ಋಜುಯೋಗಿಮುಖೋದ್ಗೀರ್ಣ-
ಸ್ತೋತ್ರಂ ಕನ್ನಡಭಾಷಯಾ ।
ಅನುವಾದ್ಯಾದ್ಯ ಮಧ್ವಸ್ಯ
ಪ್ರೀತಿಂ ಕಾಂಕ್ಷತಿ ಸರ್ವದಾ ॥

ಶ್ರೀ ಮಧ್ವಾದಿರಾಜಪೂಜ್ಯಚರಣಪ್ರಣೀತಂ

॥ ಚಿಂತಾಖಂಡನಸ್ತೋತ್ರಮ್ ॥

ಯಯಾ ತೇ ಧರ್ಮಕಾಮೌ ಚ ಯಯಾತೇರ್ವ್ಯರ್ಥಮಾಜನಿ ।
ಕಿಂ ತಯಾ ಚಿಂತಯಾ ಜೀವ ! ಹಂತಾಹಂತಾಽಫಲಾ ತವ ॥1॥

ಜೀವ =ಓ ಜೀವನೇ !, ಯಯಾತೇಶ್ಚ = ಯಯಾತಿ ಮಹಾರಾಜನಂತೆ, ಯಯಾ = ಯಾವ ಚಿಂತೆಯಿಂದ, ತೇ=ನಿನ್ನ, ಧರ್ಮಕಾಮೌ = ಸತ್ಕರ್ಮಾಚರಣೆ ಮತ್ತು ಆಧ್ಯಾತ್ಮಿಕ ಅನುಸಂಧಾನಗಳು, ಆಜನಿ = ಜನ್ಮಪೂರ್ತಿ, ವ್ಯರ್ಥಂ =ವ್ಯರ್ಥವು, (ಅಭೂತಾಂ= ಆದವೋ) ತಯಾ = ಆ ಚಿಂತೆಯಿಂದ ಕಿಂ= ಏನು ಪ್ರಯೋಜನ ? ತವ = ನಿನ್ನ, ಅಹಂತಾ = (ನನ್ನ ಸಾಮರ್ಥ್ಯದಿಂದಲೇ ಧರ್ಮಕಾಮಗಳನ್ನು ಸಾಧಿಸುತ್ತೇನೆ ಎಂಬ) ಅಹಂಕಾರವು, ಅಫಲಾ =ವ್ಯರ್ಥವು, ಹಂತ =ಅಯ್ಯೋ ಪಾಪ!

ಸುಖಮೀಶೇಚ್ಛಯಾ ನೃಣಾಂ ದುಃಖಂ ಚಾಪಿ ತದಿಚ್ಛಯಾ ।
ನ ಸ್ವೇಚ್ಛಯಾ ಭವೇತ್ ಕಿಂಚಿದ್ಧಂತಾಹಂತಾಽಫಲಾ ತವ ॥2॥

ನೃಣಾಂ =ಮನುಷ್ಯರಿಗೆ, ಸುಖಂ= ಸುಖವು ಈಶೇಚ್ಛಯಾ ಚ = ಈಶ್ವರನ ಇಚ್ಛೆಯಿಂದಲೇ, ದುಃಖಮಪಿ =ದುಃಖವೂ ಕೂಡ, ತದಿಚ್ಛಯಾ ಚ= ಆ ಹರೀಚ್ಛೆಯಿಂದಲೇ, (ಭವತಿ = ಉಂಟಾಗುತ್ತದೆ) ಸ್ವೇಚ್ಛಯಾ =ಜೀವನ ಇಚ್ಛಾನುಸಾರವಾಗಿ, ಕಿಂಚಿತ್ = ಯಾವುದೂ, ನ ಭವೇತ್ =ಆಗುವುದಿಲ್ಲ. ಹಂತ = ಅಯ್ಯೋ ಪಾಪ ! ತವ = ನಿನ್ನ ಅಹಂತಾ = (ಸ್ವಸಾಮರ್ಥ್ಯದಿಂದ ದುಃಖಗಳನ್ನು ದೂರೀಕರಿಸಿ ಸಂತತಸುಖಸಮೃದ್ಧಿಯನ್ನೇ ಅನುಭವಿಸುವೆನೆಂಬ) ಆಹಂಕಾರವು, ಅಫಲಾ =ವ್ಯರ್ಥ.

ಅದತೋ ಮದತೋಽಂಧಸ್ಯ ಜಿಹ್ವಾಂ ಬಹ್ವಾಶಿನೋ ನರ ।
ಸಂತಃ ಖಾದಂತಿ ದಂತಾಸ್ತೇ ಹಂತಾಹಂತಾಽಫಲಾ ತವ ॥3॥

ನರ = ಓ ಹುಲುಮಾನವನೇ! ಮದತಃ = (ಭವನ, ಕನಕ, ಧನ, ಧಾನ್ಯಾದಿಗಳೆಲ್ಲವೂ ನನ್ನದೇ ಗಳಿಕೆಯೆಂಬ) ದುರಹಂಕಾರದಿಂದ, ಅಂಧಸ್ಯ = ಕುರುಡಾಗಿ, ಅದತಃ = ಬಕಬಕನೇ ತಿನ್ನುತ್ತಿರುವ, ಬಹ್ವಾಶಿನಃ = ಹೊಟ್ಟೆಬಾಕನಾದ, ತೇ = ನಿನ್ನ, ಜಿಹ್ವಾಂ =ನಾಲಿಗೆಯನ್ನು, ಸಂತಃ = ಸಾತ್ವಿಕವಾದ, ದಂತಾಃ = ಹಲ್ಲುಗಳು, ಖಾದಂತಿ= ಕಚ್ಚುತ್ತವೆ. ಹಂತ = ಅಯ್ಯೋ ಪಾಪ! ತೇ = ನಿನ್ನ,

ಅಹಂತಾ =(ನನ್ನದೇ ಆದ ಸಾಮರ್ಥ್ಯ, ಸುಖಸಾಮಗ್ರಿಗಳಿಂದ ಯಥೇಷ್ಟವಾಗಿ ಭಕ್ಷ್ಯ-ಭೋಜ್ಯಾದಿಗಳನ್ನುಂಡು ಸುಖ ಪಡುವೆನೆಂಬ) ಅಹಂಕಾರವು, ಅಫಲಾ = ವ್ಯರ್ಥ.

ಮಹತ್ವೇ ತೇ ಯದಾऽऽಕಾಂಕ್ಷಾ ಮಹತ್ತ್ವೇವ ಭಯಂ ತದಾ ।
ಜೀವ ಕಿಂ ಜೀವನಾರ್ಥೇऽತಶ್ಚಿಂತಯಾ ಚಿಂತಯಾऽಚ್ಯುತಮ್॥

ಜೀವ = ಓ ಜೀವನೇ! ತೇ = ನಿನಗೆ, ಮಹತ್ವೇ = (ಎಲ್ಲರೂ ನನ್ನನ್ನೇ ಪ್ರಧಾನವಾಗಿ ಮನ್ನಣೆ ಮಾಡಬೇಕು . ನಾನು ನುಡಿದಂತೆಯೇ ಎಲ್ಲರೂ ನಡೆದುಕೊಳ್ಳಬೇಕು. ಉಳಿದವರೆಲ್ಲರಿಗಿಂತ ಮಿಗಿಲಾದ ಸ್ಥಾನಮಾನಗಳು ನನಗೇ ದೊರೆಯಬೇಕೆಂಬ) ದೊಡ್ಡತನದಲ್ಲಿ, ಆಕಾಂಕ್ಷಾ = ಅಭಿಲಾಷೆಯು, (ಅಸ್ತಿ = ಇರುತ್ತದೋ) ತದಾ = ಆಗ, ಮಹದೇವ = ದೊಡ್ಡದೇ ಆದ, ಭಯಂ =ಭಯವು, (ಸಂಭವತಿ = ಸಂಭವಿಸುತ್ತದೆ.) ತು = ಈ ವಿಷಯದಲ್ಲಿ ವಿಶೇಷವಿದೆ. (ಮಹತ್ತ್ವೇವ ಎಂಬಲ್ಲಿ ಮಹತ್ ತು ಏವ ಎಂದು ಪದಚ್ಛೇದ. ಇಲ್ಲಿ ವಿಶೇಷಾರ್ಥಕವಾದ 'ತು'ಕಾರವು, ಭಸ್ಮಾಸುರ, ಹಿರಣ್ಯಕಶಿಪು, ಹಿರಣ್ಯಾಕ್ಷ, ಜರಾಸಂಧ ಮುಂತಾದ ವರಗಳನ್ನು ಪಡೆದು ಮೆರೆದು ಕೊನೆಗೆ ಘೋರ ಮರಣ -ಮಹಾನರಕಗಳಿಗೇ ಗುರಿಯಾಗಿರುವುದರ ದೃಷ್ಟಾಂತ ಸಮೂಹವನ್ನು ಸ್ಪಷ್ಟಪಡಿಸುತ್ತದೆ.)ಅತಃ = ಆದ್ದರಿಂದ, ಜೀವನಾರ್ಥೇ = ಜೀವನಕ್ಕೋಸ್ಕರವಾಗಿ, ಚಿಂತಯಾ =ಚಿಂತೆಯಿಂದ, ಕಿಂ = ಏನು ಪ್ರಯೋಜನ ? ಅಚ್ಯುತಂ = ಅಚ್ಯುತನನ್ನು, ಚಿಂತಯ = ಚಿಂತಿಸು.

ಮಹಾಪದ್ಯಾಗತಾಯಾಂ ಹಿ ಮಹಾಪದ್ಯಾರ್ಥಿನೋऽಧುನಾ ।
ಹರಿಣಾ ಸ್ವೈರಿಣಾ ತ್ರಾತಾಃ ಕಿಂ ನ ಖಿನ್ನಕೃಪಾಲುನಾ ॥5॥

ಮಹಾಪದ್ಯಾರ್ಥಿನಃ = ಶ್ರೇಷ್ಠವಾದ ಭಗವತ್‌ಸ್ತುತಿಗಳಿಂದ ಪ್ರಾರ್ಥಿಸುವವರನ್ನು, ಮತ್ತು ಉತ್ತಮವಾದ ಮೋಕ್ಷಮಾರ್ಗವನ್ನು ಅಪೇಕ್ಷಿಸುವವರನ್ನು ಮತ್ತು ನ್ಯಾಯವಾಗಿ ಮಹತ್ತಾದ ಸ್ಥಾನವನ್ನು ಏರಲು ಬಯಸುವವರನ್ನು, ಮಹಾಪದಿ = ಮಹತ್ತಾದ ಆಪತ್ತು, ಆಗತಾಯಾಂ = ಬರುತ್ತಿರಲು, ಸ್ವೈರಿಣಾ = ತನ್ನಿಚ್ಛೆಯಂತೆ ವಿಹರಿಸುವ, ಖಿನ್ನಕೃಪಾಲುನಾ = ದುಃಖಿತಭಕ್ತರಲ್ಲಿ ದಯಾಲುವಾದ, ಹರಿಣಾ = ಹರಿಯಿಂದ, ಅಧುನಾ = ಈಗಲೂ, ನ ತ್ರಾತಾಃ ಕಿಂ= ರಕ್ಷಿಸಲ್ಪಡಲಿಲ್ಲವೇನು ? ಹಿ= ಪ್ರಸಿದ್ಧವು.

ಮಮತಾ ಯೇಷು ತೇ ನಿತ್ಯಮಮತಾಸ್ತೇऽತ ಏವ ಹಿ ।
ಅಹಂತಾ ಯತ್ರ ತೇ ಜೀವ ನ ಹಂತಾ ತಸ್ಯ ಕಿಂ ಯಮಃ ॥6॥

ಜೀವ = ಓ ಜೀವನೇ । ಯೇಷು = ಯಾವ ಬಂಧು, ಮಿತ್ರರಲ್ಲಿ, ತೇ=ನಿನಗೆ, ನಿತ್ಯಂ =ಯಾವಾಗಲೂ ಮಮತಾ =ನನ್ನವರೆಂಬ ಮಮತೆಯು, (ಆಸ್ತಿ=ಇದೆಯೋ)ಅತ ಏವ = ಆ ಕಾರಣದಿಂದಲೂ, ತೇ = ಆ ಬಂಧುಮಿತ್ರರು, ತೇ= ನಿನಗೆ, ನಿತ್ಯಂ = ಯಾವಾಗಲೂ, ಅಮತಾಃ = ಶಾಶ್ವತಶ್ರೇಯಸ್ಸನ್ನು ಚಿಂತಿಸುವವರಲ್ಲ. ತೇ = ನಿನಗೆ, ನಿತ್ಯಂ=ಯಾವಾಗಲೂ, ಅಮತಾಃ= ಶಾಶ್ವತಶ್ರೇಯಸ್ಸನ್ನು ಚಿಂತಿಸುವವರಲ್ಲ ತೇ=ನಿನಗೆ, ಯತ್ರ = ಯಾವ ನಿನ್ನ ದೇಹದಲ್ಲಿ, ಅಹಂತಾ = ನಾನೆಂಬ ಅಹಂಕಾರವಿದೆಯೋ, ತಸ್ಯ =ಆ ಶರೀರಕ್ಕೆ, ಯಮದೇವರು, ಹಂತಾ ನ ಕಿಂ = ಸಂಹಾರಕನಲ್ಲವೇನು ? ಹಿ = ಈ ವಿಷಯ ಪ್ರಸಿದ್ಧ.

ನ ಸ್ವೇಷಾಂ ಸ್ವೇಚ್ಛಯಾऽಕಾರ್ಷೀತ್ ಕಷ್ಟಂ ವಾऽತ್ಯಕ್ರಮೀದಿಹ ।
ನರೋ ವಾऽಪ್ಯಥವಾ ನಾರೀ ಸುರೋ ವಾऽಪ್ಯಸುರೋऽಪಿ ವಾ ॥

ನರೋ ವಾऽಪಿ=ನರನಾಗಲೀ, ಅಥವಾ=ಅಥವಾ, ನಾರೀ ವಾऽಪಿ ನಾರಿಯಾಗಲೀ, ಸುರೋ ವಾऽಪಿ= ಸುರನಾಗಲೀ, ಅಸುರೋऽಪಿ ವಾ= ಅಸುರನಾಗಲೀ, ಸ್ವೇಷಾಂ= ತನ್ನವರಿಗೆ, ಸ್ವೇಚ್ಛಯಾ =ತನ್ನ ಇಚ್ಚೆಯಿಂದ, ಇಹ = ಈ ಸಂಸಾರದಲ್ಲಿ, ಕಷ್ಟಂ = ಕಷ್ಟವನ್ನು, ನ ಅಕಾರ್ಷೀತ್ = ಉಂಟುಮಾಡಲಿಲ್ಲ. ವಾ = ಅಂತೆಯೇ, ಕಷ್ಟಂ = ಕಷ್ಟವನ್ನು ನ ಅತ್ಯಕ್ರಮೀತ್ = ದಾಟಲಿಲ್ಲ. (ಆದ್ದರಿಂದ ನಾನು ಮಾಡುತ್ತೇನೆಂಬ ಆಹಂಕಾರ ವ್ಯರ್ಥ.)

ಸ್ವೇಷ್ಟಾನಾಪ್ತ್ಯಾ ರೋದನೇನ ರುದ್ರೋऽರುದದಿತಿ ಶ್ರುತಿಃ ।
ನರ್ತೇ ತ್ವತ್ ಕ್ರಿಯತೇ ಕಿಂಚಿದಿತ್ಯಾಹಾನ್ಯಾಚ್ಯುತಂ ಪ್ರಭುಮ್ ॥

ಸ್ವೇಷ್ಟಾನಾಪ್ತ್ಯಾ= ತನ್ನ ಇಷ್ಟವನ್ನು ಪಡೆಯದೇ, ರೋದನೇನ = ರೋದನ ಮಾಡಿದುದರಿಂದ, ರುದ್ರಃ = ರುದ್ರ ಎಂಬ ಹೆಸರುಳ್ಳವನು. ಇತಿ = ಈ ರೀತಿಯಾಗಿ ರುದ್ರೋऽರುದತ್ ' = ರುದ್ರನು ರೋದಿಸಿದನು, ಇತಿ = ಎಂಬ, ಶ್ರುತಿಃ = ' ಸೋऽರೋದೀದ್ ಯದರೋದೀತ್ ತದ್ ರುದ್ರಸ್ಯ ರುದ್ರತ್ವಮ್ ' ಮುಂತಾದ ಶ್ರುತಿಯು, ಆಹ =ಹೇಳುತ್ತದೆ. ಅನ್ಯಾ = ಮತ್ತೊಂದು, ಶ್ರುತಿಃ= ' ನಿಷುಸೀದ ಗಣಪತೇ ಗಣೇಷು ತ್ವಾಮಾಹುರ್ವಿಪ್ರತಮಂ ಕವೀನಾಮ್ । ನ ಋತೇ ತ್ವತ್ ಕ್ರಿಯತೇ ಕಿಂಚ ನಾರೇ ಮಹಾಮರ್ಕಂ ಮಘವನ್ ಚಿತ್ರಮರ್ಚ' ಎಂಬ ಶ್ರುತಿಯು,

ಪ್ರಭುಂ = ಸರ್ವಸ್ವಾಮಿಯಾದ, ಅಚ್ಯುತಂ = ಅಚ್ಯುತನನ್ನು ಕುರಿತು, ತ್ವತ್ ಋತೇ = ನಿನ್ನ ಹೊರತಾಗಿ, ಕಿಂಚಿತ್ = ಯಾವುದೂ, ನ ಕ್ರಿಯತೇ =(ಬೇರೆ ಯಾರಿಂದಲೂ) ಮಾಡಲ್ಪಡುವುದಿಲ್ಲ. ಇತಿ = ಎಂದು, ಆಹ = ಹೇಳುತ್ತದೆ. (ಇದರಿಂದ ಕೇವಲ ಹರಿಯೊಬ್ಬನ ಸ್ವಾತಂತ್ರ್ಯ, ಜೀವರೆಲ್ಲರ ಪಾರತಂತ್ರ್ಯ ಸಿದ್ಧವಾಗುತ್ತದೆ.)

ಪಾರ್ಥಾನ್ ಪಾರ್ಥಸತೀಮಾರ್ತಾಂ
ಹರಂ ಭಸ್ಮಾಸುರಾರ್ದಿತಮ್ ।
ವಿರೋಚನಸ್ಯ ಪಿತರಂ ಕಃ ಕಷ್ಟಾತ್
ಪ್ರಾಗ್ ವ್ಯಮೋಚಯತ್ ॥9॥

ಪಾರ್ಥಾನ್ = ಪಂಚಪಾಂಡವರನ್ನು (ಪೃಥೆ (ಕುಂತಿ)ಯ ಮಕ್ಕಳಷ್ಟೇ ಪಾರ್ಥರಾದರೂ ಅವರನ್ನು ಪ್ರಾಧಾನ್ಯೇನ ನಿರ್ದೇಶಿಸಿದ್ದಾರೆ. ಉಪಲಕ್ಷಣಾವೃತ್ತಿಯಿಂದ ಮಾದ್ರೀಪುತ್ರರನ್ನೂ ಇಟ್ಟುಕೊಳ್ಳಬೇಕು. ಪಾಂಡವರಿಗೆ ಜೂಜಿನ ವಿಷಮಸನ್ನಿವೇಷದಲ್ಲಿ ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ತಮ್ಮ ತಪಶ್ಶಕ್ತಿಯ ತುಣುಕಿನಿಂದಲೇ ಕೌರವರನ್ನು ಭಸ್ಮಗೊಳಿಸುವ ಶಕ್ತಿಯಿತ್ತು. ಭೀಮನಿಗಂತೂ ತನ್ನ ಕೇವಲ ಬಾಹುಬಲದಿಂದಲೇ ಲೀಲೆಯಿಂದ ಕೌರವರೆಲ್ಲರನ್ನೂ ಸಂಹರಿಸುವ ಶಕ್ತಿಯಿತ್ತು. ಆದರೂ ಹರಿಸಂಕಲ್ಪದಂತೆ ಪಾಪಿಗಳ ಪಾಪದ ಕೊಡ ತುಂಬಲು ಮತ್ತು ಅಲ್ಪಭಕ್ತರು ಆಪತ್ಕಾಲದಲ್ಲಿ ಹೇಗೆ ಹರಿಯನ್ನೇ ಮೊರೆ ಹೊಂದಬೇಕು ಎಂದು ಮರ್ತ್ಯಶಿಕ್ಷಣ ಮಾಡುವ ಮುಖ್ಯ ಉದ್ದೇಶದಿಂದ ಸಹಿಸಿಕೊಂಡರು. ಇದರಿಂದ ಮತ್ತಷ್ಟು ತಪೋವೃದ್ಧಿಯನ್ನು ಸಾಧಿಸಿ ಹರಿಯನ್ನು ಭಜಿಸಿ ಆತನ ಕಾರುಣ್ಯವನ್ನು ಸಾಕ್ಷಾತ್ಕರಿಸಿ ಜಗತ್ತಿಗೆ ತೋರಿಸಿದರು. ಈ ವಿಷಯವನ್ನು ಶ್ರೀ ಮಧ್ವಾಚಾರ್ಯರು 'ಕೃಷ್ಣಾ ಚ ಪಾಂಡವಾಶ್ಚೈವ ತಪೋವೃದ್ಧಿಮಭೀಪ್ಸವಃ । ತಪಸಾ ನೈವ ಧಕ್ಷ್ಯಂತಿ ತೇನ ಜೀವಂತಿ ತೇ ಸುತಾಃ' ಮುಂತಾದ ಉಕ್ತಿಗಳಿಂದ ಸ್ಪಷ್ಟಪಡಿಸಿದ್ದಾರೆ.) ಆರ್ತಾಂ = ಕೌರವರಿಂದಪೀಡಿತಳಾದ, ಪಾರ್ಥಸತೀಂ = ಪಂಚ ಪಾಂಡವರ ಪತ್ನಿಯಾದ ದ್ರೌಪದಿಯನ್ನು (ಶ್ರೀ ಮದ್ವಾದಿರಾಜರು ಇಲ್ಲಿ ದ್ರೌಪದಿಯ ಮಾಯಾಶಕ್ತಿಯಿಂದ ನಿರ್ಮಿತವಾದ ಆಕೆಯಂತಿರುವ ಕೃತಕಪ್ರತಿಕೃತಿಯನ್ನು ಉಲ್ಲೇಖಿಸಿರುವರೆಂದು ಭಾವಿಸಬೇಕು. ಉದಾಹರಣೆ - ರಾವಣ ಅಪಹರಿಸಿದ ಸೀತೆಯ ಕೃತಕಪ್ರತಿಕೃತಿ (ಗೊಂಬೆ)ಯನ್ನೇ 'ಸೀತೆ'ಎಂದು, ಕೃಷ್ಣ ಪರಂಧಾಮಕ್ಕೆ ಹೋದಾಗ ಆತ ನಿರ್ಮಿಸಿದ

ಪ್ರಾಕೃತಶರೀರವನ್ನೇ 'ಕೃಷ್ಣನ ಮೃತಶರೀರ' ಎಂದು ವ್ಯವಹರಿಸದಂತೆ, ಶ್ರೀ ಮಧ್ವಾಚಾರ್ಯರೂ ದ್ರೌಪದಿಯ ಶುದ್ಧತಮಪಾತಿವ್ರತ್ಯವನ್ನು ಪ್ರತಿಪಾದಿಸುವಾಗ 'ಪ್ರತಿದಿನಂ ಜನನಾದ್ದಿ ಕನ್ಯಾ', 'ಸುರಭುಕ್ತಿರನ್ಯಾದೃಶೀ'ಮುಂತಾದ ಉಕ್ತಿಗಳಿಂದ, ದ್ರೌಪದಿ ಪ್ರತಿದಿನ ಹೊಸಹೊಸಶರೀರಗಳನ್ನು ಪಡೆಯುತ್ತಾ ತನ್ನ ಅಮಾನುಷಸಾಮರ್ಥ್ಯದಿಂದ ಪರಸ್ಪರಸಾಂಕರ್ಯಲೇಶವೂ ಇಲ್ಲದ ಪ್ರತ್ಯೇಕ ಪ್ರತ್ಯೇಕವಾದ ಪಂಚವಿಧ ಪಾತಿವ್ರತ್ಯವನ್ನು ಸಾಧಿಸಿದ್ದನ್ನು ಸ್ಪಷ್ಟಪಡಿಸಿದ್ದಾರೆ. ಈಕೆಯ ಅಮಾನುಷವಾದ ಅದ್ಭುತಸಾಮರ್ಥ್ಯ' ಕೃಷ್ಣಾವಪುಷಾತಿಮಾನುಷಮ್ ' 'ಬಭೂವ ಕನ್ಯೈವ ಗತೇಗತೇಽಹನಿ' ಮುಂತಾದ ಮಹಾಭಾರತದ ಉಕ್ತಿಗಳಿಂದಲೂ ಸ್ಪಷ್ಟವಾಗುತ್ತದೆ. ಹೀಗೆ ಪಂಚಪಾಂಡವರಿಗೇ, ತಮ್ಮ ತಮ್ಮ ಸ್ವರೂಪಪತ್ನಿಯರದ್ದಷ್ಟೇ ಸಂಬಂಧವಾಗುವಂತೆ ಅಲೌಕಿಕವಾದ ಅದ್ಭುತಲೀಲೆ ತೋರುವ ದ್ರೌಪದೀ, ತನ್ನನ್ನಾಗಲೀ ತನ್ನ ಅನನ್ಯಭಕ್ತರಾದ ತನ್ನೊಂದಿಗೇ ಇರುವ ಪಾರ್ವತೀ, ಶಚೀ, ಶ್ಯಾಮಲೆ, ಉಷೆಯರನ್ನಾಗಲೀ, ದುಶ್ಶಾಸನನಂತಹ ಮಹಾಪಾಪಿ ಸ್ಪರ್ಶಿಸಲು ಹೇಗೆ ತಾನೆ ಅವಕಾಶ ನೀಡಿಯಾಳು ? ಆದ್ದರಿಂದ ದ್ರೌಪದಿ ತನ್ನ ಕೃತಕಪ್ರತಿಕೃತಿಯ ಮೂಲಕ ಹರಿಸಂಕಲ್ಪದಂತೆ ಕೌರವರನ್ನು ವಂಚಿಸಿ, ಅವರ ಪಾಪದ ಕೊಡಗಳನ್ನು ತುಂಬಿಸಿ, ಅಶಕ್ತಭಕ್ತರಿಗೆ ಹರಿಕರುಣೆಯ ಭರವಸೆ ಮೂಡಿಸುವುದಕ್ಕಾಗಿ ಭಗವಂತನನ್ನು ಸಹಜ ಭಕ್ತಿಯಿಂದಲೇ ಪ್ರಾರ್ಥಿಸಿ, ಅಕ್ಷಯಾಂಬರದ ಮಹಿಮೆಯನ್ನು ಸಾಕ್ಷಾತ್ಕರಿಸಿಕೊಂಡಳು. ಹೀಗೆ ಶ್ರೀವಾದಿರಾಜರ ದ್ರೌಪದಿ ದೃಷ್ಟಾಂತದ ಅಂತರ್ಯವನ್ನು ಮನನ ಮಾಡಬೇಕು.) ಭಸ್ಮಾಸುರಾರ್ದಿತಂ = ಭಸ್ಮಾಸುರನಿಂದ ಪೀಡಿತನಾದ, ಹರಂ = ರುದ್ರನನ್ನು, ವಿರೋಚನಸ್ಯ = ವಿರೋಚನನ , ಪಿತರಂ = ತಂದೆಯಾದ ಪ್ರಹ್ಲಾದನನ್ನು, ಪ್ರಾಕ್ = ಹಿಂದೆ ಕಷ್ಟ ಬಂದಾಗ, ಕಃ = ಯಾರು, ಕಷ್ಟಾತ್ =ಕಷ್ಟದಿಂದ, ವ್ಯಮೋಚಯತ್ = ಬಿಡುಗಡೆಗೊಳಿಸಿದರು ?

ಶತ್ರವೋ ಯಾಂತಿ ಮಿತ್ರತ್ವಂ ಮಿತ್ರೇಮಿತ್ರೇ ಸತಾಂ ಹರೌ ।
ಮಿತ್ರಾಣ್ಯೇವ ಚ ಶತ್ರುತ್ವಂ ಶತ್ರೌಶತ್ರೌ ಸುರದ್ವಿಷಾಮ್ ॥ 10 ॥

ಸತಾಂ = ಸಜ್ಜನರಿಗೆ, ಮಿತ್ರೇ = ಮಿತ್ರನಾದ, ಹರೌ =ಹರಿಯು, (ನಃ =ನಮಗೆ,) ಮಿತ್ರೇ = ಮಿತ್ರನಾದಾಗ, ಶತ್ರವಃ = ನಮ್ಮ ಶತ್ರುಗಳೂ, ಮಿತ್ವತ್ವಂ = ನಮ್ಮ ಮಿತ್ರಭಾವವನ್ನು, ಯಾಂತಿ = ಹೊಂದುತ್ತಾರೆ. ಸುರದ್ವಿಷಾಂ = ಅಸುರರಿಗೆ, ಶತ್ರೌ = ಶತ್ರುವಾದ ಹರಿಯು, ಶತ್ರೌ = ನಮಗೆ ಶತ್ರುವಾದಾಗ, ಮಿತ್ರಾಣ್ಯೇವ = ನಮ್ಮ

ಮಿತ್ರರೇ, ಶತ್ರುತ್ವಂ ಚ = ಶತ್ರುಭಾವವನ್ನೂ ಕೂಡ, ಯಾಂತಿ = ಹೊಂದುತ್ತಾರೆ.

ಪಿತುರ್ವಧೇ ಪುತ್ರ ಏವ ಕಾರಣಂ ಪ್ರಾಗಭೂದಿತಿ ।
ಕಿಂ ನ ಶ್ರುತಂ ಸರ್ಪವೈರೀ ಸರ್ಪಸ್ಯೈವಾಭಯಂಕರಃ ॥ 11 ॥

ಪ್ರಾಕ್ = ಹಿಂದೆ, ಪಿತುಃ = ತಂದೆಯಾದ ಹಿರಣ್ಯಕಶಿಪುವಿನ, ವಧೇ = ಮರಣದ ವಿಷಯದಲ್ಲಿ, ಪುತ್ರ ಏವ = ಮಗನಾದ ಪ್ರಹ್ಲಾದನೇ, ಕಾರಣಂ = ಕಾರಣನು, ಅಭೂತ್ = ಆದನು, ಇತಿ = ಎಂದು, ನ ಶ್ರುತಂ ಕಿಂ = ಕೇಳಲ್ಪಡಲಿಲ್ಲವೇನು ? ಸರ್ಪವೈರೀ = ಸರ್ಪವೈರಿಯಾದ ಗರುಡನು, ಪ್ರಾಕ್ = ಹಿಂದೆ, ಸರ್ಪಸ್ಯೈವ = ತಾನು ಸಿಟ್ಟಿನಿಂದ ಸಂಹರಿಸಲೆಂದು ಬೆನ್ನಟ್ಟಿದ್ದ ಕಾಲಿಯ ಸರ್ಪನಿಗೇ, (ಪಶ್ಚಾತ್ = ಶ್ರೀ ಕೃಷ್ಣನ ಪಾದಚಿಹ್ನೆಗಳಿಂದ ಅಂಕಿತನಾದ ನಂತರ) ಅಭಯಂಕರಃ = ಅಭಯಂಕರನು, ಅಭೂದಿತಿ = ಆದನೆಂದು, ನ ಶ್ರುತಂ ಕಿಂ = ಕೇಳಲ್ಪಡಲಿಲ್ಲವೇನು? (ಶ್ರೀ ಕೃಷ್ಣನು ತನ್ನ ಪಾದಚಿಹ್ನೆಗಳಿಂದ ಧನ್ಯನಾದ ಕಾಲಿಯಸರ್ಪನಿಗೆ ಅನುಗ್ರಹಿಸಿ ನಿನಗೆ ಗರುಡನು ಏನೂ ತೊಂದರೆ ಮಾಡುವುದಿಲ್ಲವೆಂದು ಅಭಯ ನೀಡಿದ ನಂತರ, ಗರುಡನೂ ಕಾಲಿಯನಿಗೆ ಅಂತರಂಗ ಮಿತ್ರನಾಗಿ ಅಭಯಂಕರನಾದನು. ಇದುವೇ ಹರಿಕಾರುಣ್ಯದ ರೋಮಾಂಚಕರಮಹಿಮೆ.)

ದುಃಖಾಸ್ಪೃಷ್ಟೋ ಹರಿಸ್ತ್ವೇಕೋ
ದುಃಖಸ್ಪೃಷ್ಟಾಸ್ತತೋಽಪರೇ ।
ಅತೋ ನ ಭೀತೋ ದುಃಖೇಭ್ಯೋ
ಭವಾನುಭವಧೀರಧೀಃ ॥ 12 ॥

ಹರಿಸ್ತ್ವೇಕಃ = ಶ್ರೀ ಹರಿಯೊಬ್ಬನೇ, ದುಃಖಾಸ್ಪೃಷ್ಟಃ = ಸರ್ವದೇಶ, ಸರ್ವಕಾಲಗಳಲ್ಲಿ ದುಃಖಸ್ಪರ್ಶರಹಿತನು, ತತಃ =ಆ ಕಾರಣದಿಂದ ಅಪರೇ = ಉಳಿದವರೆಲ್ಲರೂ, ದುಃಖಸ್ಪೃಷ್ಟಾಃ = ದುಃಖಸಂಬಂಧ ಉಳ್ಳವರೇ ಆಗಿದ್ದಾರೆ. ಅತಃ = ಆದ್ದರಿಂದ, ಭವಾನುಭವಧೀರಧೀಃ = ಸಾಂಸಾರಿಕಸುಖದುಃಖಗಳ ಸುದೀರ್ಘ ಅನುಭವದಿಂದ ಗಟ್ಟಿಯಾದ ಮನಸ್ಸುಳ್ಳವನಾಗಿ, ದುಃಖೇಭ್ಯಃ = ಸಾಂಸಾರಿಕ ದುಃಖಗಳಿಂದ, ನ ಭೀತಃ (ಭವ) ಹೆದರಿದರು.

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ।
ಇತಿ ಯನ್ನಿಯಮಸ್ತಸ್ಮಾನ್ನಿಯಮೇ ನಿಯಮಂ ಕುರು ॥ 13 ॥

ಸುಖಸ್ಯ = ಸುಖದ, ಅನಂತರಂ = ಅನಂತರ, ದುಃಖಂ = ದುಃಖ, ದುಃಖಸ್ಯ = ದುಃಖದ, ಅನಂತರಂ = ಅನಂತರ, ಸುಖಂ = ಸುಖವು, ಇತಿ = ಎಂದು, ನಿಯಮಃ= ನಿಯಮವಿದೆಯೋ, ತಸ್ಮಾತ್ = ಆ ಕಾರಣದಿಂದ, ನಿಯಮೇ = (ಶೌಚಂ ಜಪಸ್ತಪೋಹೋಮಃ ಶ್ರದ್ಧಾऽऽತಿಥ್ಯಂ ಮದರ್ಚನಮ್ ।) ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಮ್ । ಎಂದು ಹೇಳಿದಂತೆ) ಶೌಚ, ಜಪ, ತಪಸ್ಸು, ಯಜ್ಞ, ಶ್ರದ್ಧೆ, ಆತಿಥ್ಯ, ಭಗವದರ್ಚನೆ, ತೀರ್ಥಯಾತ್ರೆ, ಪರೋಪಕಾರ, ಅಲ್ಪಸಂತೃಪ್ತಿ ಆಚಾರ್ಯಸೇವೆ, ಎಂಬ ನಿಯಮದಲ್ಲಿ ನಿಯಮಂ = ದೀಕ್ಷೆಯನು, ಕುರು = ಆಚರಿಸು.

ಅತೋ ದುರಂತಯಾ ಸ್ವಾಂತಚಿಂತಯಾ ಕಿಂ ಚಿದಂತಯಾ ।
ಹಯಾನನಂ ದಯಾಸಿಂಧುಂ ಸ್ಮರ ಸ್ಮರದಭೀಷ್ಟದಮ್ ॥ 14 ॥

ಅತಃ = ಸುಖದುಃಖಗಳು ನಿರಂತರಪರಿವರ್ತನೆಯ ನಿಯಮವಿರುವುದರಿಂದ, ಚಿದಂತಯಾ = ಜ್ಞಾನನಾಶಕವಾದ, ಮತ್ತು ಚೇತನಸ್ವರೂಪವನ್ನೇ ಕುಗ್ಗಿಸುವ, ದುರಂತಯಾ = ದುರಂತವಾದ, ಸ್ವಾಂತಚಿಂತಯಾ =ಮನಸ್ಸಿನಲ್ಲಿ ನೆಲೆಸಿರುವ ಚಿಂತೆಯಿಂದ, ಕಿಂ =ಏನು ಪ್ರಯೋಜನ ? ಸ್ಮರದಭೀಷ್ಟದಂ = ಭಕ್ತಿಯಿಂದ ನೆನೆಯುವವರಿಗೆ ಅಭೀಷ್ಟಪ್ರದನಾದ, ದಯಾಸಿಂಧುಂ = ಕರುಣಾಸಾಗರನಾದ, ಹಯಾನನಂ = ಹಯವದನನನ್ನು, ಸ್ಮರ =ಸ್ಮರಿಸು.

ಆಚತುರ್ದಶಮಾದ್ ವರ್ಷಾದ್
ಯಾ ಚಿಂತಾ ಹೃದಿ ದೇಹಿನಾಮ್ ।
ವಾದಿರೋಜೋ ಯತಿಸ್ತಸ್ಯಾಃ
ಖಂಡನಾಯೇದಮಭ್ಯಧಾತ್ ॥ 15 ॥

ಆಚತುರ್ದಶಮಾತ್ = ಹದಿನಾಲ್ಕನೇ ವರ್ಷದಿಂದಾರಂಭಿಸಿ, ದೇಹಿನಾಂ = ಎಲ್ಲಾ ಚೇತನರಿಗೂ, ಹೃದಿ =ಹೃದಯದಲ್ಲಿ, ಯಾ =ಯಾವ ನಿರಂತರವಾದ, ಚಿಂತಾ = ಚಿಂತೆಯಿದೆಯೋ, ತಸ್ಯಾಃ = ಅಂತಹ ಚಿಂತೆಯ, ಖಂಡನಾಯ = ದೂರೀಕರಣಕ್ಕಾಗಿ, ವಾದಿರಾಜಃ = ಶ್ರೀ ವಾದಿರಾಜಯತಿಯು, ಇದಂ = ಈ ಚಿಂತಾ-ಖಂಡನಸ್ತೋತ್ರವನ್ನು, ಅಭ್ಯಧಾತ್ = ಹೇಳಿದರು.

॥ ಇತಿ ಶ್ರೀ ಮದ್ವಾದಿರಾಜಪೂಜ್ಯಚರಣಪ್ರಣೀತಂ
ಚಿಂತಾಖಂಡನಸ್ತೋತ್ರಂ ಸಮಾಪ್ತಮ್ ॥

(ಅನುವಾದ : ಬಿ.ಎನ್.ಸೀತಾರಾಮಾಚಾರ್ಯ)

ನಮೋಽಸ್ತು ತಾತ್ವಿಕಾ ದೇವಾಃ ವಿಷ್ಣುಭಕ್ತಿ ಪರಾಯಣಾಃ ।
ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವ ಹೀ ॥

ವಿಷ್ಣುಭಕ್ತಿಯಲ್ಲೇ ನಿರಂತರ ನಿರತರಾದ ಓ ತತ್ವಾಭಿಮಾನಿ ದೇವತೆಗಳೇ । ನಿಮಗೆ ಭಕ್ತಿಪೂರ್ವಕನಮಸ್ಕಾರ ಸಲ್ಲಿಸುತ್ತೇನೆ. ನೀವೆಲ್ಲರೂ ನನ್ನ ಮನಸ್ಸನ್ನು ಧರ್ಮಮಾರ್ಗದಲ್ಲೇ ಪ್ರೇರಿಸಿ ಉದ್ಧರಿಸಬೇಕು.

॥ ಶ್ರೀ ಮನ್ನರಹರಿಸ್ತೋತ್ರಮ್ ॥

ಭೂದೇವಿಸುತಯಾಸಕ್ತರಘ್ವೀಶಪದಮಾನಸಃ ।
ನೃಹರ್ಯಾಖ್ಯಗುರುರ್ಭೂಯಾದಸ್ಮದಿಷ್ಟಾರ್ಥಸಿದ್ಧಯೇ ॥

ಭೂದೇವಿಸುತಳಾದ ಸೀತೆಯಿಂದ ಸಹಿತನಾದ
ರಘುಕುಲ ಲಲಾಮಶ್ರೀರಾಮನ ಪಾವನಪಾದಗಳಲ್ಲೇ
ಆಸಕ್ತಚಿತ್ತರಾದ ಶ್ರೀ ಮನ್ನರಹರಿತೀರ್ಥಗುರುಪಾದರು,
ನಮಗೆ ಉತ್ಕೃಷ್ಟ ಅಭೀಷ್ಟಗಳನ್ನು ಅನುಗ್ರಹಿಸಲಿ.

(ಶ್ರೀ ನರಹರಿತೀರ್ಥ ಆರಾಧನೆ
ಪೌಷ ಬಹುಳ ಸಪ್ತಮೀ)

ಚಿಕಿತ್ಸೆ

ಚಿತ್ತಾಯತ್ತಂ ಧಾತುಬದ್ಧಂ ಶರೀರಂ
ನಷ್ಟೇ ಚಿತ್ತೇ ಧಾತವೋ ಯಾಂತಿ ನಾಶಮ್ ।
ತಸ್ಮಾತ್ ಚಿತ್ತಂ ಸರ್ವದಾ ರಕ್ಷಣೀಯಂ
ಸ್ವಸ್ಥೇ ಚಿತ್ತೇ ಬುದ್ಧಯಃ ಸಂಭವಂತಿ ॥

ಮಾಂಸ, ರಕ್ತ, ಮೇದಸ್ಸು, ಮಜ್ಜಾ ಮುಂತಾದ ಧಾತುಗಳಿಂದ ಬದ್ಧವಾದ ನಮ್ಮ ಶರೀರ ಮತ್ತು ಪಂಚಕರ್ಮೇಂದ್ರಿಯ ಪಂಚ ಜ್ಞಾನೇಂದ್ರಿಯಗಳೆಲ್ಲವೂ ಮನಸ್ಸಿಗೆ ಅಧೀನವಾಗಿರುತ್ತದೆ. ಶುಷ್ಕ ಚಿಂತೆಗಳಿಂದ ಮನಸ್ಸು ದುರ್ಬಲಗೊಂಡರೆ ಶಾರೀರಿಕಧಾತುಗಳು ನಾಶ ಹೊಂದುತ್ತವೆ. (ನಂತರ ಬುದ್ಧಿನಾಶ, ಅನಾರೋಗ್ಯಗಳೊಂದಿಗೆ ದಶೇಂದ್ರಿಯಗಳೂ ದುರ್ಬಲಗೊಂಡು ವೈದ್ಯರಿಗೆ ಲಕ್ಷ ಲಕ್ಷ ಹಣ ಸುರಿಯುವ ಪ್ರಸಂಗವೂ ಅನಿವಾರ್ಯವಾಗುತ್ತದೆ. ಅಲ್ಲದೆ ಕೊನೆಗೆದಾರುಣಮರಣವೂ ಸಂಭವಿಸುತ್ತದೆ.) ಆದ್ದರಿಂದ ಶುಷ್ಕಚಿಂತಾಗ್ನಿಗೆ ಮನಸ್ಸನ್ನು ಆಹುತಿಯನ್ನಾಗಿ ನೀಡದೇ, (ಭವರೋಗವೈದ್ಯನಾದ ಭಕ್ತವತ್ಸಲನಾದ ಭಗವಂತನ ಸಂಚಿಂತನೆಯ ಅಮೃತಧಾರೆಯಲ್ಲಿ ಮುಳುಗಿಸಿ) ಸರ್ವದಾ ರಕ್ಷಿಸಿಕೊಳ್ಳಬೇಕು. ಸರ್ವೇಂದ್ರಿಯಗಳ ರಾಜನಾದ ಮನಸ್ಸು ಆರೋಗ್ಯವಾಗಿ ಗಟ್ಟಿಯಾಗಿದ್ದಷ್ಟು ಸದ್ಬುದ್ಧಿಗಳನ್ನು ಅಭಿವೃದ್ಧಿಗೊಳಿಸಬಹುದು.

|| Sri ||

A REMEDY FOR WORRIES

English Translation

V. SARAYU

||Sri||

A REMEDY FOR WORRIES

1. The Nature of Worries:

Sri Hari, the Supreme Being, has blessed us with glorious wealth, "deep thinking" being one among them. "Deep thinking" is the constant and steady process of examination. This constant thinking is nothing but "Dhyana", the most essential and indispensable wealth for a "Saadhaka" [a spiritual aspirant]. Thus, we can equate "Dhyana" with "deep thinking", saying that "deep thinking" is also a blessed wealth.

Deep thinking towards the worldly affairs, leads to mental agony. But, the same towards Paramatma [The Almighty], leads to spiritual uplift. So, what should be thought over, is the biggest question lying before us. Sri Krishna in Bhagavath Gita states, "a person who always gets involved in these worldly affairs is considered to acquire the qualities of Asuras".

"Chintaam Aparimeyaam Cha
Pralayaantaam Uppashritaah"

Generally, the manner of thoughts in a human mind, has been categorized by Sri Krishna, thus:

" I have earned so much money.
" With this money I shall fulfill all my desires.
" I posses all this wealth.
" All my wealth will multiply in days to come.

" I am the king.

" I have destroyed so many enemies.

" I will destroy the remaining in near future.

" I am enjoying myself in all ways.

" I am 'all capable' and the happiest of all.

" I have achieved all what has to be achieved.

" I am the possessor of all the wealth.

" I am born in a reputed family.

" There is none equal to me.

" 'I' perform all sacrifices.

" 'I' do charity.

Thus, people fall prey to worldly attractions and get filled with Ahankara, destined to reach the eternal hell. People think that all outward happiness is due to them. With this frame of mind they degrade themselves and fall down.

"CHINTEGE ONDU CHIKITSE" is the Anuvada of the work of the Great Sri Sri Vadiraja Mahaparabhu, "CHINTAA KHANDANA", where in, he has rendered great help to rescue people who easily fall prey to the fruitless worldly affairs. By his teachings, he converts people who are "Bahirmukhis"-aspirants of worldly pleasures to "Antarmukhis"-aspirants of spiritual pleasure.

People are encircled with worries, caused due to 'Aadhibhouthika', 'Aadhidaivika' and 'Aadhyatmika', thapas[the thapa-trayas]. The root cause of worry is haughtiness or Ahankara. Filled with Ahankara, one says, "I am sure to enjoy the pleasure!" But when failed, he is subjected

to 'worries'. The same way, when not being able to free himself from the sorrows of life, becomes desperate.

Thus, we can illustrate how Ahankara became the main reason for worries, in turn, are the reason for sorrows.

What have we Jeevas achieved from these worries? These worries, not only hinder our duties' but also create unawareness over Dharma. So, one will not get involved in Dharmic activities. Thus, unnecessary worries only hinder our activities. Moreover, this invaluable Manava janma becomes invalid, falling prey to Agnaana.

2. Pleasure and pain are under the control of Hari:

We are always under the impression that 'we' create the sorrows and the happiness in life 'ourselves'. This ignorance, paves way for Ahankara in us. One thinks, he himself is the cause for this happiness. This is an ignorant thought of mere haughtiness, leading to sorrow. Trying to get rid of that sorrow, we only experience more of it. The aspired happiness, when not gained, leads to a state of anxiety and the avoided sorrow in life, when come across, cause further distress. The immediate question running our mind will be "who is the cause for this happiness and sorrow?"

"Sukhameeshechchaya Nrnaam
Duhkham Chaapi Tadicchayaa"

Paramatma Sri Hari, is the cause of all happiness and sorrow. It all depends on His will and definitely not of ours. According to our Prarabdha karmas, Paramatma makes us experience pleasure and pain. So, we should always con-

sider everything, as God given, be it pleasure or pain.

'Praaptam praaptamupaaseeta'

This Bhagavatha sloka puts forth the same idea. Sri Dasaru has also given his consent in the following verse.

"Hari chitta satya, Nara chittakke bandaddu lavalesha nadeyadu..."

Forgetting this fact, every man thinks himself to be the protector of his house and family. He assumes that, they are happy because, of him and 'he' can make them free from all sorrows. Thereby, one being under the thought of Ahamkarthruthva, ends up in the state of all worries. Thus, Ajnaana leads to Ahankara, which in turn leads to worries.

AGNAANA [IGNORENCE]

↓

AHANKARA [HAUGHTINESS]

↓

CHINTE! [WORRIES]

Thus, Agnaana coupled with Ahankara, is the root cause of Samsara. Undoubtedly, taking us far away from Moksha.

Kathakopanishat, reveals the same idea in the below verse,

"Yadaa Sarve Prabhidyante
Hrdayasyeha Granthayah.
Atha Martyo Mrto Bhavati
Etaavadanushaasanam" (1.3.15)

Srimadacharya also gives a conformation over this issue:

"Mithyaajnaanagranthibhistu"

Unless Agnaana & Ahankara are driven off our minds, we can never attain Salvation. Until then, the worries caused, are also unavoidable.

3. Don't be tured by desires :

The aspired pleasures are not enjoyed and undesired sorrows are experienced. Hereby, we can realize that pleasure or pain, are not under our control. We do not realize that Paramatma, Sri Hari, is the ultimate controller of all these entities. On the whole, we get fooled! All these are only because of our attachment, more towards worldly affairs. Sri Vadiraja swamiji with the help of an example, shows, how even the smallest of man's desire, cannot be satisfied without His will.

"There once lived a Brahmin who had a great liking for his tongue. Unfortunately, his wife was not a very good cook. He got tired of eating his wife's dishes and so, decided to make a sweet dish all by himself. With the money he had earned and saved, he bought the ingredients needed. He lit the stove, suffocated amidst the smoke, pricked his eyes and burnt his hands. The dish was ready at last. Feeling happy with his attempt, he called out for his wife & children, distributed the sweets to them and also took a small piece to taste for himself. He put it in his mouth and chewed it well. To his dismay, what he chewed was not the sweet,

but his tongue, which started bleeding and whole effort became a waste.

Now, let us think over this story. The Brahmins' hard-earned money, the effort put in preparing the dish, the time spent, everything landed up in vain. When he could not save 'himself' from his own teeth, how could he protect others from dangers? How will he satisfy others' desires when he could not satisfy his own? The thought of providing happiness to others out of his own efforts was also taken off his mind. We come across almost similar happenings in our day-to-day lives, but never realize their inner motives indicating the Supreme nature of God.

Sri Purandara dasaru also says,

'Naayi bandide....'

Our never-ending desires, are the root cause for polluting our minds. A spoilt mind, ultimately leads to Ahankara. When our meaningless desires can cause happiness, we have no objection. But when the same leads to sorrow, what is to be done?

"Aasha hi paramam duhkham..."

Bhagavata says, "Give up the desires that causes grief, renounce them and enjoy the real pleasures of life". Sri Gopala dasaru in accordance with Sri Vadirajaru has brought out an excellent example as cited below.

"There once was a fox with boundless desires. One day, it wanted to eat tasty rabbit meat and went out in search for it. It luckily found a rabbit and happily fed on it. The fox, though it had a full stomach, it was not satisfied and kept

eating so much, that it vomited all what it ate. After a while, it again felt hungry. So, it went wandering all over the forest for food, but could find nothing. Going around the forest, it came back to the same place, where it had vomited its food. It smelt the vomited meat. Even the unpleasant smell, seemed like a pleasant fragrance and it started licking it. It happily exclaimed praising the taste of the vomit. Though it seemed tasty, it led to illness because of the consumption of this unhealthy stuff. Even after this, its desire to eat did not stop, and once again went out in search of food, and the story repeated itself."

Our life, is no different from that of this fox. With these unlimited desires for worldly attractions, we dwell in this Samsara Sagara, finding no way out of it.

Kanakadasaru rightly says,

"Kanne kaamada beeja..."

We always want, everything that comes to our sight. We are not able to satisfy our desires and digest the unwanted. We have completely forgotten ourselves. Even after death, though the body perishes, desires still persist. We leave behind our wealth and money realizing its invalidity. But again in the next birth, we are attracted towards the same wealth! We lick it with great delusion and fall into the illness of Samsara. But we never realize our foolishness! Thus, from this example, Sri Gopala dasaru, describes our true situation.

The opinion of Dasaru is not the complete renunciation of the worldly affairs, but to accept it as God given and not to develop a craze towards it. He says thus,

"Hariya karunadolaada bhagyavu....."

4. Don't be fooled because of desires:

Our uncontrolled desires, are our first enemies. Without understanding this, we become addicted to our mounting desires and undoubtedly, have to face the consequences.

Whoever falls prey to their own endless desires, are sure to confront greater dangers in life. Asuras, like Hiranyakashapu, Ravana, Kumbhakarna, and Jarasandha, are all standing examples of how one could by destroyed by his own desires. They meditated over 1000 years, just for boons from Brahma and Rudra, only to fulfill their greedy desires. These desires, only led to their own destruction and were destined to reach eternal hell. Lives of all these evil demons serve a lesson for us.

Even after knowing all this, if one is still being conquered by his desire, he is rather being foolish!

We should be aware that, at the background of one's desire, there is this "God's Will". God stands and serves as a protector. This thought should always be running in our mind and hence the faith and trust in God must increase 'n' fold.

Paramatma is all-pervasive at all Kaala[time] and Desha[place] and is considered, an ocean of mercy. Sri Vishnu Tirtha says,

"Yatra yatra gatirmameshvara...."

"Sri Hari's lotus feet, will protect me like a king's scepter".

This kind of thought, will always keep us far form any kind of fear.

We see many people striving hard to find a job, and earn a living. They spend years doing so. They face all hardships through out their lives and hence, unable to lead a sorrow free life. They earn money, only to have a settled life in future. But, we should be aware that "we" are no deciders of our future. This opinion of Sri Vadhirajaru coincides with that of Sri Purandaradasaru, who in this verse says,

"Yaake chintipe baride ni......"

In agreement with this, there is another vakya, "Vrityartham naathi......"

We should not unnecessarily worry about our living, as God has already decided our future. "How does a child feed on its mother's milk as soon as it comes out of the mother's womb?" Though a mother takes care of her baby, it is only 'He' who stimulates the secretion of milk! Though the newborn is totally unprepared for its survival, God feeds the child with the milk which stimulates nectar. This is the best example highlighting Gods incomparable mercy. Thus, God dictates our future.

This being the case, "Is worrying about our living a misdeed?" Definitely not! Thinking of Achyuta, the decider of our life, is equal to have thought of our living. If we aspire a pleasure filled life, we should chant the innumerable pleasurable qualities of the almighty. Because,

"Tam yathayatha upaasate tathaiva bhavathi"

A mere thought of Achyutha will uplift us in our living. Because the word Achyutha means...

1. HE who does not deviate from his supreme position!

2. HE who does not get down from his prabhutva!

3. He who does not undergo any destruction at any place or time!

If we meditate on God with these qualities of his in our mind, good position, leadership and many more auspicious qualities will get imparted in us.

Krishnaamruta mahaarnava also states thus,

"Achyuta annata govinda......"

